QUESTION FOR ANSWER ON THE DAY

(but not taken up).

Pooling certain percentage of Income for the Development of Market Yards.

Q.—1157. SRI A. R. PANCHAGAVI (Gokak II).—

Will the Government be pleased to state:—

whether there is any proposal to pool certain percentage of the income of all the market committees in the State with a view to utilise the same for the development of market yards and improvement of marketing?

A.—SRI S. NIJALINGAPPA (Chief Minister)—

The question is under consideration.

---

2 P.M.

PAPERS LAID ON THE TABLE

SRI C. M. POONACHA (Minister for Industries and Home Affairs).—Sir, I lay on the Table of the House Notification No. Home Department 90, Motor Vehicles Taxation, 1957, dated in 19th August 1957, issued under sub-section (1) of section 8 of the Mysore Motor Vehicles Taxation and Tolls Act, 1951.

FOOD AND FAMINE SITUATION IN THE STATE.

(Debate Continued)

ಶ್ರೀ ಬಿ. ಜಿ. ಖೋತ್ (ಸಾವಳಗಾ).—ಮಾನ್ಯ ಅಧ್ಯಕ್ಷರೇ, ಇಷ್ಟು ದಿವಸ ಆಹಾರದ ವಿಷಯ ಪುಷ್ಕಲವಾಗಿ ಚರ್ಚೆಯಾಗಿದೆ. ಅನೇಕ ಸದಸ್ಯರು ಪುಷ್ಕಲವಾಗಿ ಮಾತನಾಡಿದ್ದಾರೆ. ನಾನು ಈ ವಿಚಾರದಲ್ಲಿ ಹೆಚ್ಚು ಹೇಳಬೇಕಾಗಿಲ್ಲ. ಆದರೂ ಕೆಲವು ಮಾತುಗಳನ್ನು ಹೇಳಬೇಕೆನ್ನುತ್ತೇನೆ. ಪ್ರತಿಯೊಂದು ಜೀವಿಗೂ ಅನ್ನ ಬೇಕು. ಅನ್ನವೇ ಜೀವನ, "ಅನ್ನಂ ವೈ ಪ್ರಾಣಃ". ಈ ಅನ್ನದ ಪ್ರಶ್ನೆಯನ್ನು ಹಿಂದೂಸ್ಥಾನ ಸರ್ಕಾರವಾಗಲಿ ಪ್ರಾಂತ ಸರ್ಕಾರವಾಗಲಿ ಯಾವ ರೀತಿ ಬಿಡಿಸಬೇಕೆಂಬುದು ಒಂದು ಮುಖ್ಯ ಸಮಸ್ಯೆಯಾಗಿದೆ. ಯುದ್ಧಕ್ಕೆ ಮೊದಲು ಹಿಂದೂಸ್ಥಾನದಲ್ಲಿ ಅನ್ನಕ್ಕೆ ತ್ರಾಸವಿರಲಿಲ್ಲ, ಬಹಳ ಅನ್ನವಿತ್ತು. 1914ರಲ್ಲಿ ಪ್ರಾರಂಭವಾದ ಮೊದಲನೆಯ ಯುದ್ಧದಿಂದಲೂ ತ್ರಾಸವಾಗುತ್ತಿದೆ. ಮೊದಲನೆಯ ಮಹಾ ಯುದ್ಧದಲ್ಲಿ ಸ್ವಲ್ಪ ಕಷ್ಟವಾಯಿತು. ಎರಡನೆಯ ಮಹಾ ಯುದ್ಧದಲ್ಲಿ ತೀವ್ರ ತ್ರಾಸವಾಯಿತು. ಅದಕ್ಕಿಂತಲೂ ಈಗ ಹೆಚ್ಚು ತ್ರಾಸ ನಡೆದಿದೆ. ಹೀಗಾಗುವುದಕ್ಕೆ ಕಾರಣವೇನು? ಮುಂಚೆ ಹಿಂದೂಸ್ಥಾನವೆಲ್ಲ ಒಂದಾಗಿ ಕೂಡಿತ್ತು; ಆಗ ಈ ತ್ರಾಸವಿರಲಿಲ್ಲ. ಈಗ ಹಿಂದೂಸ್ಥಾನ ಒಡೆದು ಪಾಕಿಸ್ತಾನ, ಬರ್ಮ ಬೇರೆ ಬೇರೆಯಾಗಿ ಸ್ವತಂತ್ರವಾದವು. ಈ ಕಾರಣದಿಂದ ಅನ್ನದ ವಿಷಯದಲ್ಲಿ ಈಗಿನ ಹಿಂದೂಸ್ಥಾನ ಸ್ವಾವಲಂಬಿಯಾಗುವುದಕ್ಕೆ ಹೆಚ್ಚು ಕಷ್ಟವಾಗಿದೆ. ಪಾಕಿಸ್ತಾನದಿಂದ ಗೋಧಿ, ಕಡಲೆ ವಗೈರೆ ಮತ್ತು ಬರ್ಮಾದಿಂದ ಅಕ್ಕಿ ಬರುವುದು ನಿಂತು ಹೋಯಿತು. ಈ ಕಾರಣ ಇದೊಂದು ಕಠಿಣ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಯಾವ ರೀತಿ ಬಿಡಿಸಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ. ಹಿಂದೂಸ್ಥಾನ ಹರಿದು ಹಂಚಿ ಹೋದುದರಿಂದ ಇದನ್ನು ಹೇಗೆ ಬಿಡಿಸಬೇಕೆಂಬುದೊಂದು ಪ್ರಶ್ನೆ. ಅಲ್ಲದೆ, ನಮ್ಮ ದೇಶದಲ್ಲಿ ದಿನೇ ದಿನೇ ಜನ ಸಂಖ್ಯೆ ಹೆಚ್ಚಾಗುತ್ತಲಿದೆ. ಪೂರ್ವ ಪಾಕಿಸ್ತಾನ ಮತ್ತು ಪಶ್ಚಿಮ ಪಾಕಿಸ್ತಾನದಿಂದ ಇಲ್ಲಿಗೆ ಅಧಿಕ ಸಂಖ್ಯೆಯಲ್ಲಿ ನಿರಾಶ್ರಿತರು ಅಥವ ನಿರ್ವಾಸಿತರು ಈಗಲೂ ಪ್ರತಿನಿತ್ಯ ಬರುತ್ತಲಿದ್ದಾರೆ. ಅವರಿಗೆಲ್ಲ ಅನ್ನವನೊದಗಿಸಬೇಕಾಗುವ ಪ್ರಸಂಗ ಬಂತು. ಇದರಿಂದ ವಿಶೇಷ ಜವಾಬ್ದಾರಿ ಹಿಂದೂಸ್ಥಾನ ಸರ್ಕಾರದ ಮೇಲೆ ಬಿತ್ತು. ಹಿಂದೂಸ್ಥಾನವು ಹರಿದು ಹಂಚಿ ಹೋದ ಕಾರಣ ಮತ್ತು ನಿರ್ವಾಸಿತ ಹಾಗೂ ಜನಸಂಖ್ಯೆಯಲ್ಲಿ ವೃದ್ಧಿ, ಅವರ್ಷಣ—ದುಷ್ಕಾಳ, ಮಹಾಪೂರ ಇತ್ಯಾದಿಗಳ ಮೂಲಕ ಈ ಅನ್ನ ಪ್ರಶ್ನೆ ಒಂದು ಹೆಚ್ಚು ತಾಪದಾಯಕ ವಿಷಯವಾಗಿದೆ. ಜನ ಸಂಖ್ಯೆ ಜಗತ್ತಿನಲ್ಲಿ ಸಾವಿರಕ್ಕೆ 34ರಂತೆ ಹೆಚ್ಚುತ್ತಲಿದೆ ಎಂದು ಅಮೆರಿಕದ ವರದಿಯಿಂದ ತಿಳಿದು ಬಂದಿದೆ. ಅದರಲ್ಲಿ ನಮ್ಮ ದೇಶದ ವೃದ್ಧಿ ಪ್ರತಿ ವರ್ಷಕ್ಕೆ 50 ಲಕ್ಷ ಆಗುತ್ತದೆ, ಅನ್ನ ಸಂಪಾದನೆಯು ಕಡಮೆಯಾಯಿತು. ಆದ ಕಾರಣ ಅನ್ನದ ಉತ್ಪತ್ತಿಯನ್ನು ಹೆಚ್ಚು ಮಾಡಬೇಕಾಗಿದೆ. ಇದಕ್ಕೆ ಅನೇಕ ಯೋಜನೆಗಳನ್ನು ಕೈಗೊಳ್ಳುವುದು ಅತ್ಯಗತ್ಯ. ನೀರಾವರಿ (irrigation) ಕಾರ್ಯಗಳನ್ನು ಕೈಗೊಳ್ಳಲೇ ಬೇಕು. ಸಂಸ್ಥಾನಗಳು (States) ಸ್ವಾವಲಂಬಿಗಳಾಗಿರುವುದು ಅತ್ಯಂತ ಅಗತ್ಯ. ಎಲ್ಲರೂ ಕೇಂದ್ರ ಸರ್ಕಾರವನ್ನೇ ಅವಲಂಬಿಸಿದರೆ ಕಷ್ಟವಾಗುತ್ತದೆ. ಅವರಿಗೆ ಈ ಪ್ರಶ್ನೆಯನ್ನು ಸಂಪೂರ್ಣವಾಗಿ ಬಿಡಿಸುವುದಕ್ಕೆ ಸದ್ಯಕ್ಕೆ ಶಕ್ಯವಿಲ್ಲ. ಅದರಲ್ಲಿಯೂ ಪಾಕಿಸ್ಥಾನದಿಂದ ಬಂದ ನಿರ್ವಾಸಿತರ ಪ್ರಶ್ನೆಯು ಪೂರ್ಣವಾಗಿ ಬಿಡುವ ತನಕ ಅವರಿಗೆ ಸಾಧ್ಯವಲ್ಲ, ಕಷ್ಟವಿದೆ. ಅವರು ಹೆಚ್ಚು ಕಷ್ಟದಲ್ಲಿದ್ದಾರೆ, ಸಾಲದಲ್ಲಿದ್ದಾರೆ. Sterling balance, ಇದಕ್ಕಾಗಿ ಅರ್ಧದಷ್ಟು ಕಡಮೆಯಾಗಿದೆ. ಅನ್ನವನ್ನೊದಗಿಸಲು ಧಾನ್ಯವನ್ನು ಕೊಳ್ಳುವುದಕ್ಕೆ ಹಣ ಹೆಚ್ಚು ಖರ್ಚಾದ ಕಾರಣ ಕಬ್ಬಿಣ, ಸಕ್ಕರೆ ಮುಂತಾದ ಪದಾರ್ಥಗಳ ಮೇಲೆ ಇದರ ಪೂರ್ತಿಗಾಗಿ ಕರ ಹೆಚ್ಚು ಕೂಡಿಸಬೇಕಾಯಿತು. ಈ ಅನೇಕ ಕಾರಣಗಳಿಂದ ಸಮೀಪ ಭವಿಷ್ಯದಲ್ಲಿ ಈ ಅನ್ನ ಪ್ರಶ್ನೆ ನಮ್ಮನ್ನು ಬಿಟ್ಟೀತು ಎಂದು ಹೇಳುವುದಕ್ಕೆ ಶಕ್ಯವಿಲ್ಲ. ಇದನ್ನು ನಾವು ಕೇಂದ್ರ ಸರ್ಕಾರದ ಮೇಲೆ ಹಾಕುವುದೂ ತಪ್ಪು. ನಮ್ಮ ಶಕ್ತಿ ಇದ್ದಷ್ಟು ಮಟ್ಟಿಗೂ ನಾವು ಸ್ವಾವಲಂಬಿಗಳಾಗುವುದಕ್ಕೆ ಪ್ರಯತ್ನ ಮಾಡಬೇಕು. ಇದೇ ಆದ್ಯ ಕರ್ತವ್ಯ. ನೀರಾವರಿ ಯೋಜನೆಗಳನ್ನು ಕೈಗೊಂಡು ಶಕ್ಯವಿದ್ದಷ್ಟು ಈ ಸಮಸ್ಯೆಯನ್ನು ಬಿಡಿಸ

ಬೇಕು. ಎಲ್ಲೆಲ್ಲಿ ಹೊಳೆ, ದೊಡ್ಡ ದೊಡ್ಡ ಹಳ್ಳಗಳಿದ್ದರೂ ಅವನ್ನುಪಯೋಗಿಸಲು River survey ಮಾಡಬೇಕು. ಸಣ್ಣ ಮತ್ತು ದೊಡ್ಡ ನೀರಾವರಿ ಯೋಜನೆಗಳನ್ನು ಆದಷ್ಟು ತೀವ್ರ ಮಾಡಬೇಕು. ಅದರಲ್ಲಿಯೂ ಎಲ್ಲಿ ಆಹಾರ ಧಾನ್ಯ ಕಡಿಮೆ ಹುಟ್ಟುತ್ತದೆಯೋ ಅಥವಾ ಹೆಚ್ಚು ಹುಟ್ಟುವುದಕ್ಕೆ ಅನುಕೂಲವಿದೆಯೋ ಅಲ್ಲಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಹೆಚ್ಚು ಕೆಲಸಗಳನ್ನು ಮಾಡಿಸಬೇಕು. ಮತ್ತು ದುಡ್ಡಿನ ಬೆಳೆ ತೀರ ಕಡಿಮೆ ಮಾಡಿ ಶಕ್ಯವಿದ್ದಷ್ಟು ಆಹಾರ ಧಾನ್ಯ ಬೆಳೆಸಲು ಪ್ರೋತ್ಸಾಹಿಸಬೇಕು. ಇದರ ಬಗ್ಗೆ ಒಕ್ಕಲಿಗರಿಗೆ ವಿದ್ಯುತ್, ಖತ, ಸಾಲ, ಸಾಹಿತ್ಯ, ಬೀಜ ಇತ್ಯಾದಿ ಅನುಕೂಲ ಮಾಡಿಕೊಟ್ಟು ದುಡ್ಡು ಮತ್ತು ಧಾರಣೆಗಳ ಬಗ್ಗೆ ಹಮಿ ಕೊಡಬೇಕು. ಎರಡನೆಯದಾಗಿ, ಪಡ್ಡಿ ಜಮೀನುಗಳನ್ನು ಸರಿಪಡಿಸಿ ವ್ಯವಸಾಯಕ್ಕೆ ಯೋಗ್ಯ ಮಾಡಬೇಕು. ಇದಕ್ಕೆ River valley ಯೊಳಗಿನ ಮಣ್ಣನ್ನು ತಂದು ಹಾಕುವುದಕ್ಕೆ ಎಕರೆಗೆ 500 ಅಥವಾ 600 ರೂಪಾಯಿ ಖರ್ಚು ಮಾಡಿದರೆ ಇಂಥ ಜಮೀನುಗಳಲ್ಲಿ ಬೆಳೆ ಬೆಳೆಯುವುದಕ್ಕೆ ಶಕ್ಯವಿರುತ್ತದೆ, ಮತ್ತು Soil conservation ಬಗ್ಗೆ ಲಕ್ಷ್ಯ ಕೊಡುವುದಾಗಿ ಮಾಡಬೇಕು; ಮರಡಿ ಜಮೀನುಗಳನ್ನು ಸುಧಾರಣೆ ಮಾಡಬೇಕು. ಸಣ್ಣ ಮತ್ತು ದೊಡ್ಡ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಬೇಕು. ಇಷ್ಟಲ್ಲದೆ ಸಹಕಾರ ಇಲಾಖೆ ಮತ್ತು ಬೇರೆ ಇಲಾಖೆಗಳಿಂದ ಸಾಲಗಳನ್ನು ಕೊಟ್ಟು ವ್ಯವಸಾಯಗಾರರಿಗೆ ಸರಿಯಾದ ವ್ಯವಸಾಯ ಸಲಕರಣೆಗಳನ್ನು ಕೊಂಡು ಧಾನ್ಯಗಳನ್ನು ಬೆಳೆಯುವುದಕ್ಕೆ ಸಹಾಯ ಮಾಡಬೇಕು. ಜಮೀನುಗಳನ್ನು ಚರೋ ಮಾಡಿ, ನೀರಾವರಿ ವಿದ್ಯುತ್ ಇತ್ಯಾದಿ ಅನುಕೂಲ ಮಾಡಿ ಎಲ್ಲ ಜಮೀನುಗಳಲ್ಲಿಯೂ ಬೆಳೆಯಲು ಅನುಕೂಲ ಮಾಡಿಕೊಡಬೇಕು. ವ್ಯವಸಾಯವನ್ನು ಅಭಿವೃದ್ಧಿಮಾಡಿ ಅನ್ನವನ್ನು ಸಮೃದ್ಧಿ ಮಾಡಬೇಕು.

Animal Husbandry Gosadans, Dairy Farms, Better breeding, Improved feeding, Prevention of diseases, etc., ಇವುಗಳ ಅಭಿವೃದ್ಧಿ ಮಾಡಬೇಕು. ಪಶುವಧೆಯನ್ನು ಬಂದುಮಾಡಲೇ ಬೇಕು. ಮೊನ್ನೆ ನಮ್ಮ ಕೆಲ ಸ್ನೇಹಿತರು fisheries ಹೆಚ್ಚು ಮಾಡಬೇಕೆಂದು ಹೇಳಿದರು. ಅನ್ನ ಪ್ರಶ್ನೆಯ ಸಲುವಾಗಿ ಮಾಂಸಾಹಾರಕ್ಕೆ ಉತ್ತೇಜನ ಕೊಡುವುದು ತಪ್ಪು. ಮಾಂಸಾಹಾರದಿಂದ ಈ ಅನ್ನ ಸಮಸ್ಯೆ ಸಮರ್ಪಕವಾಗಿ ಬಗೆಹರಿಯುವುದಿಲ್ಲ, ಏಕೆಂದರೆ, ಮಾಂಸಾಹಾರಕ್ಕೆ ಹೆಚ್ಚು ಖರ್ಚಾಗುತ್ತದೆ. ಇಬ್ಬರು ಶಾಖಾಹಾರಿಗಳಿಗೆ ಒಂದೆಕರೆ ಜಮೀನಿದ್ದರೆ ಸಾಕಾಗುವ ಕಡೆ ಅಷ್ಟೇ ಮಾಂಸಾಹಾರಿಗಳಿಗೆ ಮೂರೂವರೆ ಎಕರೆ ಬೇಕಾಗುತ್ತದೆ. ಆದಕಾರಣ Animal husbandry, Gosadans, ಡೈರಿ ಫಾರ್ಮ್ಸ್ ಇತ್ಯಾದಿಗಳನ್ನು ಹೆಚ್ಚು ಮಾಡಿ ಪಶುವಧೆಯನ್ನು ನಿಲ್ಲಿಸಬೇಕು. ಇದರಿಂದ ಆಹಾರ ಹೆಚ್ಚುತ್ತದೆ, ಜನರಿಗೆ ಅನುಕೂಲವಾಗುತ್ತದೆ. Famine Relief Works ಹೆಚ್ಚು ತೆಗೆದುಕೊಂಡು ಅಲ್ಲಿ ಹೆಚ್ಚು ಅನುಕೂಲ ಮಾಡಿಕೊಡಬೇಕು. 'ಫೇರ್ ಪ್ರೈಸ್ ಡಿಪೋ' ಮತ್ತು ಮಾರ್ಕೆಟಿಂಗ್ ಅನುಕೂಲತೆ ಮತ್ತು ವಹಾತೂಕುಗಳನ್ನು ಹೆಚ್ಚು ಮಾಡಬೇಕು. ಹೀಗೆ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ.

ಹೆಚ್ಚು ಆಹಾರ ಬೆಳೆಯುವದರ ದೆಸೆಯಿಂದ ಫಾರೆಸ್ಟ್ ಇಲಾಖೆಯ ಮೂಲಕ ಯಾವುದಾದರೂ ಅನುಕೂಲ ಕಲ್ಪಿಸಿಕೊಡಲು ಶಕ್ಯವಿದೆಯೋ ಎಂಬುದನ್ನು ವಿಚಾರ ಮಾಡಿ ನೋಡಬೇಕು. ಇಂದಿನ ಮಹತ್ವದ ಸಮಸ್ಯೆ ದೇಶದ ಮುಂದೆ ಇರುವುದು ಈ ಆಹಾರ ಸಮಸ್ಯೆಯೇ ಆಗಿದೆ. ನಮ್ಮ ಸಂಸ್ಥಾನಕ್ಕೆ ಎಷ್ಟು ರೆವಿನ್ಯೂ ಇದೆಯೋ ಅದರೊಳಗೆ ಈ ಆಹಾರದ ದೆಸೆಯಿಂದ (most percentage) ವ್ಯವಸಾಯಕ್ಕೆ ಹೆಚ್ಚು ಖರ್ಚು ಮಾಡುವ ಪ್ರಯತ್ನ ಮಾಡಬೇಕು. ಆ ರೀತಿ ಖರ್ಚು ಮಾಡಿ ಈ ಆಹಾರದ ಪ್ರಶ್ನೆಯನ್ನು ಬಿಡಿಸಬೇಕು, ಇಲ್ಲದೇ ಹೋದರೆ ಈ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ಮಾನವ ಕಲ್ಯಾಣ ಸಮಸ್ಯೆಗಳಲ್ಲಿ ಆಹಾರಕ್ಕೆ ಮಹತ್ವದ ಸ್ಥಾನ ಇದೆ ಅಂತೆಯೇ 'ಇಷ್ಟೆಲ್ಲಾ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂದು ವಿರಕ್ತಿಗಳಾದ ವೈರಾಗಿಗಳು ಹೇಳಿರುವುದು. ಎಂದಮೇಲೆ ನಮ್ಮಂಥವರ ಪಾಡೇನು? ಇಂತಹ ಜಗತ್ತಿನ ಜೀವಾಳ ಪ್ರಶ್ನೆಯನ್ನು ಪರಿಹರಿಸಲು ಸತತ ಯೋಚನೆ ಮಾಡಬೇಕಾದದ್ದು ಸರ್ವರ ಕರ್ತವ್ಯವಾಗಿದೆ. ಮಳೆ ಬೆಳೆಗಳು ಕಾಲಕಾಲಕ್ಕೆ ನಡೆದರಂತೂ ಸರಿಯೇ; ಇಲ್ಲವಾದರೆ ಆಹಾರ ಸಮಸ್ಯೆ ಬಿಡಿಸುವುದು ಕಷ್ಟವಾಗುತ್ತದೆ. ಈಗಿನ ನಮ್ಮ ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಅಣೆಕಟ್ಟು, ಕೆರೆ, ಕಾಲುವೆಗಳು ಸರಿಹೋದರೆ, ಪೂರ್ಣವಾದರೆ ನಮ್ಮ ದೇಶದ ಆಹಾರ ಸಮಸ್ಯೆಯನ್ನು ಬಹುಮಟ್ಟಿಗೆ ಬಿಡಿಸಬಹುದು. ಅಲ್ಲಿಯತನಕ ಇದನ್ನು ಬಿಡಿಸುವುದು ಬಹಳ ತೊಡಕಿನ ಪ್ರಶ್ನೆಯಾಗಿದೆ. ಇದ್ದದ್ದರಲ್ಲಿ ಇದನ್ನು ಪರಿಹಾರಮಾಡಬೇಕೆಂದರೆ ಮೊದಲು ವ್ಯಾಪಾರಿಗಳು ಪ್ರಾಮಾಣಿಕರಾಗಬೇಕು; ಲಾಭದ ಆಸೆಯಿಂದ ದಾಸ್ತಾನು ಮಾಡುವುದನ್ನು ನಿಲ್ಲಿಸಬೇಕು. ಜನಗಳೂ ಕೂಡ ತಮ್ಮ ಮನೆಗೆ, ತಮ್ಮ ಸಂಸಾರಕ್ಕೆ ಎಷ್ಟು ಬೇಕೋ ಅಷ್ಟು ದವಸವನ್ನು ಕೂಡಿಡುವುದನ್ನು ಕಲಿಯಬೇಕು. ಈ ಎರಡು ನಿಯಮಗಳಂತೆ ಜನರು ಪ್ರಾಮಾಣಿಕವಾಗಿ ನಡೆದುಕೊಂಡರೆ ಮತ್ತು ಈ ಎರಡು ನಿಯಮಗಳ ಪ್ರಕಾರ ಪ್ರಾಮಾಣಿಕತೆಯಿಂದ ನಡೆದುಕೊಳ್ಳುವಂತೆ ಸರ್ಕಾರ ನೋಡಿಕೊಂಡರೆ ಬಹುಮಟ್ಟಿಗೆ ಆಹಾರ ಉಳಿತಾಯವಾಗುವುದು; ಮತ್ತು ಬಡಬಗ್ಗರಿಗೂ ಅನುಕೂಲವಾಗುವುದು. ಮಾಲಿನಮೇಲೆ ಬ್ಯಾಂಕುಗಳವರು ಧಾನ್ಯ ವ್ಯಾಪಾರಿಗಳಿಗೆ ಹಣ ಸಾಲವಾಗಿ ಕೊಡುವುದರಿಂದ ವ್ಯಾಪಾರಗಾರರು ಮಾಲನ್ನು ದಾಸ್ತಾನು ಮಾಡುತ್ತಾರೆ. ಇತ್ತೀಚೆಗೆ ರಿಸರ್ವ್ ಬ್ಯಾಂಕಿನವರು ದಾಸ್ತಾನು ಮಾಡುವವರಿಗೆ ಹಣ ಕೊಡಬಾರದು ಎಂದು ಆಜ್ಞೆಮಾಡಿದ್ದಾರೆ. ಆಚರಣೆಯಲ್ಲಿ ಅದನ್ನು ಕಟ್ಟುನಿಟ್ಟಾಗಿ ಆಚರಿಸುತ್ತಿಲ್ಲ. ಆದ್ದರಿಂದ ಧಾರಣೆವಾಸಿಗಳು ವಿಪರೀತವಾಗಿ ಏರುತ್ತಾ ಇವೆ. ಇದರ ಹತೋಟಿಯನ್ನು ಸರ್ಕಾರ ಕಟ್ಟುನಿಟ್ಟಾಗಿ ಕೈಕೊಳ್ಳಬೇಕು. ಬ್ಯಾಂಕಿನವರ ಹಿಡಿತ, ಸರ್ಕಾರದ ಹತೋಟಿ ಎರಡೂ ಇಟ್ಟುಕೊಂಡರೆ ಆಹಾರ ಪದಾರ್ಥಗಳು ಬಹುಮಟ್ಟಿಗೆ ಬಡವರಿಗೆ ದೊರೆಯುವುದಕ್ಕೆ ಅನುಕೂಲವಾಗುವುದು. ಎಲ್ಲೆಲ್ಲಿ ನೀರಾವರಿಯನ್ನು ಹೆಚ್ಚಿಸಬಹುದೋ ಅಲ್ಲೆಲ್ಲಾ ನೀರಾವರಿಯನ್ನು ಹೆಚ್ಚಿಸಲು ಸರ್ಕಾರದವರು ಗಮನ ಕೊಡಬೇಕು. ಈ ನೀರಾವರಿಯಲ್ಲಿ ಆಹಾರಧಾನ್ಯವಲ್ಲದ ಬೆಳೆಯನ್ನು ಬೆಳೆಯದಂತೆ ಸರ್ಕಾರದವರು ಜನರಿಗೆ ಎಚ್ಚರಿಕೆ ಕೊಡಬೇಕು. ವಿದ್ಯುಚ್ಛಕ್ತಿಯಿಂದ ಎಲ್ಲಿ ಪಂಪ್ ಮೂಲಕ ನೀರಾವರಿ ಬೆಳೆಯನ್ನು ಬೆಳೆಯಬಹುದೋ ಅಲ್ಲಿಗೆಲ್ಲಾ ಸರ್ಕಾರದವರು ಜಾಗ್ರತೆ ವಿದ್ಯುಚ್ಛಕ್ತಿ ಪಂಪುಗಳನ್ನು ಒದಗಿಸಿ ರೈತರನ್ನು ಉತ್ತೇಜನಪಡಿಸಬೇಕು. ವ್ಯವಸಾಯದ ಸಲಕರಣೆಗಳನ್ನು

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಸುಲಭ ಕಂತುಗಳಲ್ಲಿ ಸಾಲವಾಗಿ ಕೊಡುವುದಕ್ಕೆ ಏರ್ಪಾಡುಮಾಡಬೇಕು. ಎಲ್ಲಾ ಇಲಾಖೆಗಳಿಗಿಂತ ವ್ಯವಸಾಯದ ಇಲಾಖೆಯವರು ಪ್ರಾಮಾಣಿಕರಾಗಿ ನಡೆದುಕೊಂಡಪಕ್ಷದಲ್ಲಿ ಆಹಾರವನ್ನು ಹೆಚ್ಚಾಗಿ ಬೆಳೆಯಲು ತುಂಬ ಸಹಕಾರಿಯಾಗುವುದು. ಈಗ ಮೈಸೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ, ಆಹಾರ ಸಂಶೋಧನಾ ಕೇಂದ್ರದವರು ಕಂಡುಹಿಡಿದಿರುವ ಆಹಾರವನ್ನು ಜನತೆಯಲ್ಲಿ ಬಳಕೆಗೆ ಬರುವಂತೆ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕು. ದೇಶದಲ್ಲಿ ಬೆಳೆದ ಬೆಳೆಯು ಸಾರ್ವತ್ರಿಕವಾಗಿ ಉಪಯೋಗವಾಗುವಂತೆ ಎಂದರೆ ನಿಗದಿಯಾದ ಧಾರಣೆಗೆ, ಪ್ರಾಮಾಣಿಕವಾದ ಮಾರಾಟ ನಡೆದು ಹಂಚಿಕೆಯಾಗುವಂತೆ ಸರ್ಕಾರ ಏರ್ಪಾಡುಮಾಡಬೇಕು. ಒಟ್ಟಿನಲ್ಲಿ ರೈತರಿಗೆ ತಮ್ಮಿಂದಾಗುವ ಎಲ್ಲಾ ಸಹಾಯ, ಸಹಕಾರಗಳನ್ನೂ ಸರ್ಕಾರ ನೀಡಬೇಕು. ಈಗ ನಮ್ಮ ದೇಶದಲ್ಲಿ ಸಾಗುವಳಿಯಾಗುತ್ತಿರುವ ಎಷ್ಟೋ ಲಕ್ಷ ಎಕರೆ ನೀರಾವರಿ ಜೊತೆಗೆ ಹಾಲಿ ಸರ್ಕಾರದವರು ಕೈಕೊಂಡಿರುವ ಯೋಜನೆ ಮುಗಿದರೆ 5½ ಲಕ್ಷ ಎಕರೆಗೆ ನೀರಾವರಿ ದೊರೆಯುತ್ತದೆ. ಎರಡು ಕೋಟಿ 52 ಲಕ್ಷ ಎಕರೆ ಜಮೀನು ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಉಪಯೋಗಿಸಲ್ಪಡುತ್ತಿದ್ದರೂ ಕೂಡ ನಮಗೆ ಸಾಕಾಗುವಷ್ಟು ಬೆಳೆ ಬೆಳೆಯುವ ಕಾರ್ಯಕ್ರಮವನ್ನು ಕೈಕೊಳ್ಳದೇ ಇರುವುದರಿಂದ ಆಹಾರದ ಕೊರತೆ ಕಾಣುತ್ತಾ ಇದೆ. ಸಾರ್ವಜನಿಕರು, ಸರ್ಕಾರದವರು ಮನಸ್ಸುಮಾಡಿದರೆ ಆಹಾರದ ಕೊರತೆಯನ್ನು ನಿವಾರಿಸಬಹುದೆಂದು ನಾನು ಭಾವಿಸಿದ್ದೇನೆ. ಕಾಗೆ ಒಂದು ಅಗಳನ್ನು ಕಂಡರೆ ಒಟ್ಟು ತನ್ನ ಬಳಗವನ್ನೇ ಕರೆಯುವಂತೆ, ಕೋಳಿ ಒಂದು ಕಾಳನ್ನು ಕಂಡರೆ ತನ್ನ ಪರಿವಾರವನ್ನೇ ಕೂಡಿಕೊಂಡು ಹೋಗುವಂತೆ, ಆ ನ್ಯಾಯ, ಧರ್ಮವನ್ನು ಪ್ರತಿಯೊಬ್ಬನೂ ಕಲಿತು ಅದರಂತೆ ನಡೆದ ಪಕ್ಷದಲ್ಲಿ ಆಹಾರ ಪರಿಸ್ಥಿತಿಯನ್ನು ಹೆಚ್ಚು ಸುಧಾರಿಸಬಹುದು ಎಂದು ಭಾವಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—ಮಾನ್ಯ ಅಧ್ಯಕ್ಷರೇ, ಆಹಾರ ಪರಿಸ್ಥಿತಿಯ ಮೇಲೆ ಮಾತನಾಡಬೇಕೆಂದು ಹಿಂದೆಯೂ ಕೂಡ ಅನೇಕಸಾರಿ ಹಿಂದಿನ ಸಭೆಯಲ್ಲಿ ನಿಂತುಕೊಂಡಿದ್ದೆ. ಅವಕಾಶ ಸಿಕ್ಕಲಿಲ್ಲ. ಈಗ ಸಿಕ್ಕಿರುವುದು ನನಗೆ ತುಂಬ ಸಂತೋಷವುಂಟಾಗಿದೆ. ಸರ್‌ಪ್ಲಸ್ ಏರಿಯಾದಲ್ಲಿರತಕ್ಕವರು ನಾವು; ಶಿವಮೊಗ್ಗ ಜಿಲ್ಲೆ ಸರ್ಕಾರಿ ಲೆಕ್ಕದಲ್ಲಿ ಆಹಾರಧಾನ್ಯಗಳ ಸಮೃದ್ಧಿ ಪ್ರದೇಶ ಎಂದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ, ಅದು ನಿಜ ಎಂಬುದನ್ನು ನಾನು ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಮಲೆನಾಡಿನಲ್ಲಿ ಬೆಳೆಯತಕ್ಕ ಬತ್ತ ಸಂಪೂರ್ಣವಾಗಿ ಯಾವ ಒಂದು ಹತೋಟಿ ಇಲ್ಲದಹಾಗೆ ಬೇರೆ ಪ್ರದೇಶಕ್ಕೆ ರವಾನೆಯಾಗುತ್ತಾ ಇದೆ;, ಮಲೆನಾಡಿನಲ್ಲಿ ಅನೇಕ ಸರ್ಕಾರಿ ಕೈಗಾರಿಕೆಗಳನ್ನು ಬೆಳೆಸುತ್ತಾಯಿರತಕ್ಕ ಮತ್ತು ಹೊಸ ಹೊಸ ಕಾರ್ಖಾನೆಗಳನ್ನು, ಕೆರೆಗಳನ್ನು, ಕಟ್ಟೆಗಳನ್ನು ಕಟ್ಟುತ್ತಾಯಿರತಕ್ಕ ಈ ಸಂದರ್ಭದಲ್ಲಿ ಜನಸಂಖ್ಯೆ ಹೆಚ್ಚಾಗಿ ಇದೆ. ಇಂಥ ಸಂದರ್ಭದಲ್ಲೂ ಕೂಡ ನಮ್ಮಲ್ಲಿ 1951 ನೆಯ ಇಸವಿ ಅಂಕಿಅಂಶ ಒಂದನ್ನೇ ಗಮನದಲ್ಲಿಟ್ಟುಕೊಂಡರೆ ಸಾಲದು. ಇತ್ತೀಚೆಗೆ ಆ ಪ್ರಾಂತದಲ್ಲಿ ಜಾಸ್ತಿಯಾಗಿರತಕ್ಕ ಜನಸಂಖ್ಯೆಗೆ ಅಲ್ಲಿಯ ಒಂದು ಉತ್ಪನ್ನ ಏನಿದೆ, ಅದು ಸಾಕಾಗುವುದಿಲ್ಲ ಎಂದು ಹೇಳಬಯಸುತ್ತೇನೆ. ಹಾಗೆಯೇ ನಮ್ಮ ಶಿವಮೊಗ್ಗ ಜಿಲ್ಲೆಯಿಂದ ಬತ್ತವು ಮಂಗಳೂರು ಮತ್ತು ಕಾರವಾರದ ಮೂಲಕ ಗೋವಾಕ್ಕೆ ಯಥೇಚ್ಛವಾಗಿ ಹೋಗುತ್ತಾ ಇದೆ. ಈ ಬಗ್ಗೆ ಯಾವ ಒಂದು ಹತೋಟಿಯನ್ನೂ ಕೂಡ ಸರ್ಕಾರ ಕ್ರಮವಾಗಿ ಕೈಕೊಂಡಿಲ್ಲ ಎಂದು ಹೇಳಬಯಸುತ್ತೇನೆ. ಹಾಗೆ ಹೋಗುವುದನ್ನು ತಡೆಗಟ್ಟಬೇಕಾಗಿದ್ದರೆ ಬರೀ ಗಡಿಗಳನ್ನು ರಕ್ಷಣೆ ಮಾಡುವುದರಿಂದ ಮಾತ್ರ ಸಾಧ್ಯವಾಗುವುದಿಲ್ಲ. ಅದೂ ಒಂದು ಮಾರ್ಗ. ಹಾಗೆ ಹೋಗತಕ್ಕದ್ದರ ಬಗ್ಗೆ ಒಂದು ಕಠಿಣವಾದ ಕಾರ್ಯಕ್ರಮ ಸರ್ಕಾರ ಕೈಕೊಳ್ಳಬೇಕು, ಮತ್ತು ಜೊತೆಗೆ ಈ ಸರ್‌ಪ್ಲಸ್ ಏರಿಯಾ ಆಗಿರತಕ್ಕ ಈ ಜಿಲ್ಲೆಗಳಲ್ಲಿ, ಮಲೆನಾಡಿನ ಮುಖ್ಯಭಾಗಗಳಲ್ಲಿ ಸರ್ಕಾರದವರು ವೇರ್‌ಹೌಸ್ ಕಟ್ಟುವುದರಮೂಲಕ ರೈತರು ಬೆಳೆದಿರತಕ್ಕ ಧವಸವನ್ನು ಕಟಾವಾದ ಕೂಡಲೇ ದಾಸ್ತಾನು ಮಾಡುವುದಕ್ಕೆ ಏರ್ಪಾಡು ಮಾಡಿಕೊಡಬೇಕು. ಅವರು ಬೆಳೆದ ಧವಸವನ್ನು ಸರ್ಕಾರದವರೇ ಕೊಂಡುಕೊಂಡು ಗೋಡೌನ್‌ಗಳಲ್ಲಿ ದಾಸ್ತಾನು ಮಾಡಬೇಕು. ಅಂತಹ ಗೋಡೌನ್‌ಗಳು ಇವೊತ್ತು ಸಾಗರದಲ್ಲಿ, ಶಿವಮೊಗ್ಗದಲ್ಲಿ, ಭದ್ರಾವತಿಯಲ್ಲಿ, ಕಡೂರಿನಲ್ಲಿ ಇವೆ. ಹೀಗೆ ಅನೇಕಕಡೆ ಗೋಡೌನ್ ಮಾಡುವಾಗ ಬೆಳೆದ ಧವಸವನ್ನು ಸರ್ಕಾರದವರೇ ಕೊಂಡುಕೊಂಡು ಅಲ್ಲಿ ದಾಸ್ತಾನು ಮಾಡಿ ಅವನಿಗೆ ಆಗತಕ್ಕ ಉತ್ಪನ್ನಕ್ಕೆ ತಕ್ಕಂತೆ ದುಡ್ಡು ಅಡ್ವಾನ್ಸ್ ಆಗಿ ಕೊಡುವುದರ ಮೂಲಕ ಆ ಧವಸ ವರ್ತಕನ ಕೈಗೆ ಹೋಗದ ಹಾಗೆ ಕಾರ್ಯಕ್ರಮವನ್ನು ಸರ್ಕಾರ ಕೈಕೊಂಡರೆ ಗೋವಕ್ಕಾಗಲಿ, ಪಾಕಿಸ್ಥಾನಕ್ಕಾಗಲಿ ಆಹಾರ ಪದಾರ್ಥ ರವಾನೆಯಾಗುವುದನ್ನು ತಡೆಗಟ್ಟುವುದಕ್ಕೆ ಅದು ಒಂದು ಮಾರ್ಗವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಜೊತೆಗೆ ಮಲೆನಾಡಿನಲ್ಲಿರುವ ಕೆರೆಗಳ ಸ್ಥಿತಿ ಹೇಳಬೇಕಾದರೆ ಕೆರೆಗಳು ಮಲೆನಾಡಿನಲ್ಲಿ ವಿಪರೀತವಾಗಿವೆ. ಬೆಟ್ಟದ ಮೇಲಿನಿಂದ ನೀರು ಹರಿದು ಬರುವಾಗ ಅದರ ಜೊತೆಯಲ್ಲಿ ಮಣ್ಣು, ಕಸಕಡ್ಡಿ ಇತ್ಯಾದಿ ಕೊಚ್ಚಿಕೊಂಡು ಬಂದು, ಕೆರೆಗಳಿಗೆ ಬಂದು ಸೇರುತ್ತದೆ. ಆಗಾಗ್ಗೆ ಸರ್ಕಾರದವರು ಸಿಲ್ಟ್ ತೆಗೆದುಹಾಕಿದರೂ ಕೂಡ ಅದು ಪುನಃ ಭರ್ತಿಯಾಗುವುದರಿಂದ ಕೆರೆಗಳಲ್ಲಿ ಎಷ್ಟು ನೀರುನಿಲ್ಲಬೇಕೋ ಅಷ್ಟು ನಿಲ್ಲುವುದಿಲ್ಲ. ಇದರಿಂದ ಅಚ್ಚುಕಟ್ಟುದಾರರಿಗೆ ಸಾಕಷ್ಟು ನೀರು ಸಿಕ್ಕುವುದಿಲ್ಲ. ಸರ್ಕಾರದವರು ಸಿಲ್ಟ್ ತೆಗೆದು ಹಾಕುವುದಕ್ಕೆ ಹೆಚ್ಚು ಗಮನ ಕೊಡಬೇಕು.

ಎರಡನೆಯದಾಗಿ ಮಲೆನಾಡಿನಲ್ಲಿ ಅನೇಕ ಹಳ್ಳ, ಕೊಳ್ಳಗಳು, ಝರಿಗಳು ಇವೆ. ಅವುಗಳ ನೀರೆಲ್ಲಾ ವ್ಯರ್ಥವಾಗುತ್ತಿದೆ. ಅದನ್ನು ಸರ್ವೆಮಾಡಿ ಎಲ್ಲಿ ಅವುಗಳ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆಯೋ ಅಲ್ಲಿ ಅಡ್ಡಕಟ್ಟೆಹಾಕಿ ತನ್ಮೂಲಕ ನೀರನ್ನೊದಗಿಸಿ ಹೆಚ್ಚು ಆಹಾರ ಬೆಳೆ ಬೆಳೆಯಲು ಅವಕಾಶ ಮಾಡುವುದು ಈಗ ಅಗತ್ಯವಾಗಿದೆ.

ಭದ್ರಾವತಿ ತಾಲ್ಲೂಕಿನಲ್ಲಿ ಭದ್ರಾ ಅಣೆಯಿದೆ, 46 ಮೈಲಿ ಉದ್ದದ ಕಾಲುವೆಯಿದೆ, 12 ಸಾವಿರ ಎಕರೆ ಅಚ್ಚುಕಟ್ಟಿದೆ. ಇಷ್ಟು ಅನುಕೂಲವಿದ್ದರೂ ಕೂಡ ಸುಮಾರು ಮೂವತ್ತು ವರ್ಷಗಳ ಕೆಳಗೆ ಈ ಅಣೆಯನ್ನು ಕಟ್ಟಿದ್ದರೂ ಈ ದಿವಸವೂ ಸಹ ಕ್ರಮವಾಗಿ ಕಾಲುವೆಯಲ್ಲಿರುವ ಸಿಲ್ಟ್ ತೆಗೆಯಲು ಸರಿಯಾದ ಕ್ರಮ ಕೈಗೊಂಡಿಲ್ಲ. ಸಿಲ್ಟ್ ತೆಗೆಯಲು ಸಾಕಾಗುವಷ್ಟು ಬಡ್ಜೆಟ್ ಒದಗಿಸಿಲ್ಲವೆಂದು ಕಾಣುತ್ತದೆ. ಈ ದಿವಸ ಅಲ್ಲಿರುವವರಿಗೆ ಸಾಕಷ್ಟು ನೀರು ಸಿಕ್ಕುತ್ತಿಲ್ಲ. ಆದರೆ ಸರ್ಕಾರದವರು ಮಾತ್ರ ಕಂದಾಯ, ವಾಟರ್ ರೇಟ್ ಮುಂತಾದುವನ್ನು ಬಲವಂತವಾಗಿ ತೆಗೆದುಕೊಳ್ಳು

ತ್ತಿದ್ದಾರೆ. ಇದಕ್ಕೆ ಅಧಿಕಾರಿಗಳ ಕರ್ತವ್ಯಲೋಪ ಕಾರಣವೋ ಏನೋ ತಿಳಿಯದು. ಉದಾಹರಣೆಗೆ ಭದ್ರಾಕಾಲೋನಿಯ ಹತ್ತಿರ ನಾಲ್ಕನೆಯ ಬ್ರಾಂಚಿನಲ್ಲಿ ಮೂರನೆಯ ಗ್ರೇಡಿನಿಂದ ನಾಲ್ಕನೆಯ ಗ್ರೇಡಿನವರೆಗೆ ನೂರಾರು ಎಕರೆಗಳಿಗಾಗುವಷ್ಟು ನೀರು ಪೋಲಾಗುತ್ತಿದೆ. ಹೇಗಿದ್ದರೂ 50 ರೂಪಾಯಿಗಳನ್ನು ಖರ್ಚುಮಾಡಿ ವ್ಯರ್ಥವಾಗುತ್ತಿರುವ ಆ ನೀರನ್ನು ಸದುಪಯೋಗಪಡಿಸಿಕೊಂಡು ಸಾಗುವಳಿಗೆ ಒದಗಿಸಿರುವುದಿಲ್ಲ. ಸರ್ಕಾರದವರು ಈ ಕಡೆ ಗಮನಕೊಟ್ಟಿಲ್ಲವೆಂದು ಭಾವಿಸಬೇಕೇ ಅಥವಾ ಅದಕ್ಕಾಗುವಷ್ಟು ಬಡ್ಜೆಟ್ ಒದಗಿಸಿಲ್ಲವೆಂದು ತಿಳಿಯಬೇಕೇ ಅಥವಾ ಎಸ್ಟಿಮೇಟ್ ಮಾಡುವ ಸೂಪರಿಂಟೆಂಡಿಂಗ್ ಇಂಜನಿಯರು, ಎಗ್ಸಿಕ್ಯುಟಿವ್ ಇಂಜನಿಯರು ಮುಂತಾದವರು ಹೋಗಿ ಕ್ರಮ ಕೈಕೊಳ್ಳಲು ಕಾಲವಿಳಂಬವಾಗಿದೆಯೋ ಗೊತ್ತಿಲ್ಲ. ಇಂಥ ಸಣ್ಣಪುಟ್ಟ ಕಾಮಗಾರಿಗಳಿಗೆ ಸರಿಯಾಗಿ ಗಮನಕೊಟ್ಟರೆ ಸಾವಿರಾರು ಎಕರೆಗಳಿಗೆ ನೀರನ್ನೊದಗಿಸಲು ಸಾಧ್ಯವಿದೆ. ಈ ವಿಚಾರದಲ್ಲಿ ಜಾಗ್ರತೆ ಸರ್ಕಾರ ಸೂಕ್ತ ಕಾರ್ಯಕ್ರಮ ಕೈಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಮುಖ್ಯವಾಗಿ ಆಹಾರದ ಬೆಳೆ ಬೆಳೆಯುವುದರಲ್ಲಿ ನಮ್ಮ ದೇಶದಲ್ಲಿ ಒಂದು ಕೋಟಿ 38 ಲಕ್ಷ ಜನರು ನಿರತರಾಗಿದ್ದಾರೆ, ಅಗ್ರಿಕಲ್ಚರ್ ಲೇಬರರ್ಸ್ 21,05,084 ಜನರಿದ್ದಾರೆ. ಆದರೆ ಭೂಮಿ ಮಾಲೀಕರ ಕೈಯಲ್ಲೇ ಪೂರ್ಣವಾಗಿದ್ದು ವ್ಯವಸಾಯಗಾರರ ಕೈಯಲ್ಲಿಲ್ಲದಿರುವುದರಿಂದ ಹೆಚ್ಚು ಆಹಾರ ಬೆಳೆಯಲು ಅಡ್ಡಿಯಾಗಿದೆ. ಆದ್ದರಿಂದ ಒಂದು ಲಕ್ಷ ಮೂವತ್ತೆಂಟು ಸಾವಿರ ಜನರ ಕೈಲಿರುವ ಜಮೀನು 50 ಲಕ್ಷ ಜನ ವ್ಯವಸಾಯಗಾರರ ಕೈಸೇರುವ ಹಾಗೆ ಮಾಡಿ ಹೆಚ್ಚು ಬೆಳೆಯನ್ನು ಬೆಳೆಯಲು ಅವಕಾಶ ಮಾಡಿ ವ್ಯವಸಾಯ ಮಾಡದಿರುವವರಿಗೆ ಬೇರೆ ಬೇರೆ ಉದ್ಯೋಗಗಳನ್ನು ಕಲ್ಪಿಸಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಈಗ ಜಮೀನಿನ ಬಹುಭಾಗ ನಿಜವಾಗಿ ವ್ಯವಸಾಯ ಮಾಡುವವರ ಕೈಸೇರದಿರುವುದರಿಂದ ಪ್ರತಿಯೊಂದು ಹಳ್ಳಿಗಳಲ್ಲೂ ಭೂಸಮಸ್ಯೆ ಜಟಿಲವಾಗುತ್ತಾ ಇದೆ; ಮುಂದೆ ಇನ್ನೂ ಉತ್ಕಟವಾಗುತ್ತದೆ. ಅದನ್ನು ತಪ್ಪಿಸಲು ಭೂಸುಧಾರಣೆ ವರದಿಯೊಂದು ಈಗ ತಯಾರಾಗಿದೆ. ಅಲ್ಲದೆ ವಿನೋಬಾಜೀಯವರ ಭೂದಾನ ಚಳುವಳಿ ಬೇರೆ ನಡೆಯುತ್ತಿದೆ. ಭೂಸಮಸ್ಯೆ ಹತ್ತು ವರ್ಷಗಳಿಂದ ಜಟಿಲವಾಗುತ್ತಿದೆ. ಈ ದಿವಸ $1\frac{1}{4}$ ಎಕರೆ ಒಬ್ಬ ರೈತನಿಗಿದ್ದರೆ 20 ವರ್ಷಗಳ ಮೇಲೆ ಅದು ಮುಕ್ಕಾಲು ಎಕರೆಗೆ ಇಳಿಯುತ್ತದೆ. ಅದರಿಂದ ತೊಂದರೆ. ವಿಶಾಲವಾದ ಭೂಮಿ ಇರಬೇಕೇ ವಿನಾ ತುಂಡು ಜಮೀನಿರಬಾರದು. ಇದನ್ನು ಸರ್ಕಾರ ಗಮನಿಸಿ ವ್ಯವಸಾಯಗಾರರಿಗೆ ಸಾಕಷ್ಟು ಜಮೀನನ್ನೊದಗಿಸಿ ಇತರರಿಗೆ ಇನ್ನೇನಾದರೂ ಕಸಬನ್ನೊದಗಿಸಬೇಕು. ಅಲ್ಲದಿದ್ದರೆ ಅನಾನುಕೂಲವಾಗುತ್ತದೆ, ಕ್ಷಾಮ ಬರುವುದಕ್ಕೂ ಅವಕಾಶ ವೊದಗುತ್ತದೆ. ಇಡೀ ಸಂಸ್ಥಾನದಲ್ಲಿ ಯಾವುದೋ ಒಂದು ಕಡೆ ಸರ್ಪ್ಲಸ್ ಇರಬಹುದು ಅಥವಾ ಇಲ್ಲದಿರಬಹುದು. ಆದರೆ ಅಂಥ ಪ್ರದೇಶವನ್ನು ಕ್ಷಾಮ ಪ್ರದೇಶವೆಂದು ಘೋಷಿಸಿದರೆ ಅಪರಾಧವಾಗುವುದಿಲ್ಲವೆಂದು ಹೇಳಬಯಸುತ್ತೇನೆ. ರೈತರಿಗೆ ಸಂಬಂಧಪಟ್ಟಂತೆ ಪರಿಹಾರ ಕಾರ್ಯಕ್ರಮ ಕೈಕೊಳ್ಳುವುದು ಬಹಳ ಅಗತ್ಯ ಮತ್ತು ಅದಕ್ಕಾಗಿ ಹೆಚ್ಚು ಹಣವನು, ಮೀಸಲಾಗಿಡಬೇಕು. ಚಿತ್ರದುರ್ಗ, ಕೋಲಾರ, ಬಳ್ಳಾರಿ, ಬಿಜಾಪುರ ಮುಂತಾದ ಕರ್ಣಾಟಕದ ಭಾಗಗಳಲ್ಲಿರುವ ರೈತರಿಗೆ ಗೊಬ್ಬರ, ಸಾಲ ಮುಂತಾದ ಸಹಾಯವನ್ನು ಸರ್ಕಾರದವರು ಕಷ್ಟ ಪರಿಸ್ಥಿತಿಯಲ್ಲಿ ಸಹಕಾರ ಸಂಘಗಳ ಮೂಲಕ ಅಥವಾ ಇತರ ವಿಧವಾಗಿ ಒದಗಿಸಬೇಕು ಮತ್ತು ರೈತರು ಸರಿಯಾಗಿ ಬೆಳೆ ತೆಗೆಯಲು ಅನುಕೂಲವಾಗುವವರೆಗೆ ಅವರಿಗೆ ಕೊಟ್ಟಿರುವ ಸಾಲವನ್ನು ವಸೂಲು ಮಾಡದ ಹಾಗೆ ರಕ್ಷಣೆ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಬೇಕೆಂದು ಹಿಂದೆ ಒಂದು ಸಲ ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಂಡಾಗ ಆ ಜಿಲ್ಲೆ ಸರ್ಪ್ಲಸ್ ಪ್ರದೇಶವೆಂದು ಹೇಳಿದರು. ಆದರೆ ಈ ದಿವಸ ಸರ್ಪ್ಲಸ್ ಪ್ರದೇಶದಲ್ಲಿ ಬೆಳೆದ ಧಾನ್ಯಗಳು ಅಲ್ಲಿ ನಿಲ್ಲದೆ ಹೊರಕ್ಕೆ ಸಾಗಿ ಹೋಗುವುದರಿಂದ ಅಂಥ ಪ್ರದೇಶಗಳನ್ನೂ ಸಹ ಅಭಾವ ಪ್ರದೇಶಗಳೆಂದು ಪರಿಗಣಿಸಿ ದೇಶಾದ್ಯಂತ ಎಲ್ಲ ಕಡೆಯೂ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಬೇಕಾದದ್ದು ಅಗತ್ಯ, ಸರ್ಪ್ಲಸ್ ಏರಿಯಾದಲ್ಲಿ ಈಗ ತೊಂದರೆಯಾಗುತ್ತಿದೆ ಎಂದು ವಿಷಾದದಿಂದ ಹೇಳುತ್ತೇನೆ. ಇದನ್ನು ಗಮನಿಸಿ ಶಿವಮೊಗ್ಗ ಜಿಲ್ಲೆಯ ಭದ್ರಾವತಿ, ಸಾಗರ, ಶಿವಮೊಗ್ಗ ಪ್ರದೇಶಗಳಲ್ಲಿ ಮತ್ತು ಮಲೆನಾಡಿನ ಅನೇಕ ಕಡೆಗಳಲ್ಲಿ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಲೇಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಎಂ. ಬಸವೇಗೌಡ (ಚಿಕ್ಕಮಗಳೂರು).—ಈ ದಿನ ಆಹಾರ ಸಮಸ್ಯೆಯು ಇಷ್ಟು ಭೀಕರವಾಗಿರುವುದು ಪ್ರಕೃತಿಯ ದೆಸೆಯಿಂದ ಎಂದೇನು ಹೇಳುತ್ತಾರೋ ಅದಕ್ಕಿಂತ ಸರ್ಕಾರದ ಒಂದು ಉದಾಸೀನಭಾವದಿಂದ ಜಾಸ್ತಿಯಾಗಿದೆಯೆಂದು ಹೇಳಬಯಸುತ್ತೇನೆ. ಏಕೆಂದರೆ ಎರಡನೆಯ ಪಂಚವಾರ್ಷಿಕ ಯೋಜನೆಯಿಂದ ಆಹಾರ ಸಮಸ್ಯೆ ಬಗೆಹರಿಯುತ್ತದೆಂದೂ ಈಗ ಮಾತ್ರ ದವಸಧಾನ್ಯ ಆಮದುಮಾಡಿಕೊಳ್ಳಬೇಕಾಗಿದೆಯೆಂದೂ ಹೇಳುತ್ತಿದ್ದರು. ಆದರೆ ದ್ವಿತೀಯ ಪಂಚವಾರ್ಷಿಕ ಯೋಜನೆ ಜಾರಿಗೆ ಬಂದಿದ್ದರೂ ಅದರಿಂದ ಅನುಕೂಲವಾಗಿದೆಯೇ ಎಂಬ ವಿಚಾರದಲ್ಲಿ ಸಂಶಯವುಂಟಾಗಿದೆ. ಇದಕ್ಕೆ ಕಾರಣ ಸರ್ಕಾರದವರು ಆಹಾರದ ಬೆಳೆಗೆ ಯಾವ ನಿಗದಿಯಾದ ಕಾರ್ಯಕ್ರಮವನ್ನೂ ತೆಗೆದುಕೊಳ್ಳದಿರುವುದೇ ಆಗಿದೆಯೆಂದು ಹೇಳುತ್ತೇನೆ. ಈಗ ಉದಾಹರಣೆಗೆ ಭದ್ರಾ ಪ್ರಾಜೆಕ್ಟ್ ತೆಗೆದುಕೊಳ್ಳಿ. ಹಣದ ತೊಂದರೆಯೆಂದು ಅದರ ಕೆಲಸ ನಿಧಾನ ಮಾಡಿದ್ದಾರೆ. ಅದೇ ಕನ್ನಂಬಾಡಿ ಕಟ್ಟೆಯ ಕೆಲಸ ಹಿಂದೆ ಹತು ವರ್ಷಗಳಲ್ಲಿ ಮುಗಿಯಿತು. 1946ನೆಯ ಇಸವಿಯಲ್ಲೇ ಭದ್ರಾ ಪ್ರಾಜೆಕ್ಟ್ ಕೆಲಸ ಪ್ರಾರಂಭವಾಗಿದ್ದರೂ 1957ನೆಯ ಇಸವಿಗೆ ಅದರ ಅರ್ಧ ಕೆಲಸ ಕೂಡ ಇನ್ನೂ ಆಗಿಲ್ಲವೆಂದು ಹೇಳಿದರೆ ಸರ್ಕಾರಕ್ಕೆ ಅದರಮೇಲೆ ಎಷ್ಟು ನಿಗಾ ಇದೆಯೆಂಬುದು ತಾನೇ ವೇದ್ಯವಾಗುತ್ತದೆ. ಸರ್ಕಾರದವರು ಭದ್ರಾ ರಿಸರ್ವಾಯರ್ ವಿಚಾರದಲ್ಲಿ ಹೀಗೆ ಹೇಳಿದ್ದಾರೆ:—

2-30 P.M.

"The project was started in 1945 with the intention of completing it within a period of 10 years. For want of adequate funds, there had been a move to close the work at the end of 1949. But later, it has been decided

(ಶ್ರೀ ಎ. ಎಂ. ಬಸವೇಗೌಡ)

to proceed with the project under a go slow programme.''

ಸರ್ಕಾರದವರೇ 'go slow programme' ಎಂದರೆ ಇವರಿಗೆ ಎಷ್ಟುಮಟ್ಟಿಗೆ seriousness ಇದೆ ಎಂದು ಗೊತ್ತಾಗುತ್ತದೆ. ಹತ್ತು ವರ್ಷಗಳಲ್ಲಿ ಭದ್ರಾ ಪ್ರಾಜೆಕ್ಟ್ ಕೆಲಸ ಮುಗಿದಿದ್ದರೆ ಅದರಿಂದ ಸುಮಾರು 2,34,200 ಎಕರೆ ಜಮೀನಿಗೆ ನೀರು ಹಾಯಿಸಬಹುದಾಗಿತ್ತು. ಅದು ಆಗದೆ ಇರುವುದರಿಂದ ಈ ದಿನ ನಮ್ಮ ದೇಶದಲ್ಲಿನ ಆಹಾರ ಸಮಸ್ಯೆ ಜಾಸ್ತಿಯಾಗಿದೆ ಎಂದು ಹೇಳಬೇಕಾಗಿದೆ.

ಮತ್ತೆ ಸರ್ಕಾರದವರು minor tank restoration ಮತ್ತು ಕೆರೆಗಳ ಹೂಳು ತೆಗೆಯುವುದು, ಸಣ್ಣ ಅಣೆಕಟ್ಟುಗಳನ್ನು ದುರಸ್ತುಮಾಡುವುದು, ಒಡ್ಡುಗಳನ್ನು ದುರಸ್ತುಮಾಡುವುದು ಈ ಕೆಲಸಗಳನ್ನು ಮಾಡುತ್ತಿಲ್ಲ. ರೈತರು ಎಷ್ಟೇ ಕೇಳಿಕೊಂಡರೂ ಕೂಡ ಅದರ ಕಡೆಗೆ ಗಮನಕೊಡದಿರುವುದು ಎಲ್ಲರಿಗೂ ಅನುಭವಕ್ಕೆ ಬಂದಿದೆ. ಸರ್ಕಾರದವರು ರೈತರಿಂದ ಕಂದಾಯ ವಗ್ಯೆರೆಗಳನ್ನು ತೆಗೆದುಕೊಂಡೂ, ಸಣ್ಣ ಒಡ್ಡುಗಳನ್ನು ದುರಸ್ತುಮಾಡಲು ಎಷ್ಟು ಕಂಟ್ರಿಬ್ಯೂಷನ್ ಕೊಡುತ್ತೀರಿ ಎಂದು ರೈತರನ್ನು ಕೇಳುತ್ತಾರೆ. ಸರ್ಕಾರದವರು ಸಣ್ಣ ಸಣ್ಣ ಕೆರೆಗಳು, ಅಣೆಕಟ್ಟುಗಳು, ಒಡ್ಡುಗಳು ಇಂಥವುಗಳನ್ನು ದುರಸ್ತುಮಾಡಿಸಿದರೆ ಆಹಾರ ಸಮಸ್ಯೆಯು ಕೊನೆಯಪಕ್ಷ ಆಯಾ ತಾಲ್ಲೂಕುಗಳಲ್ಲಿಯಾದರೂ ಪರಿಹಾರವಾಗುತ್ತದೆ.

ನಮ್ಮ ಆಹಾರ ಸಮಸ್ಯೆಯು ನಮ್ಮ ದೇಶದ ಜನಸಂಖ್ಯೆಗೆ ಸಂಬಂಧಪಟ್ಟಿದ್ದು ಎಂದು ಹೇಳಬಯಸುತ್ತೇನೆ. ಸಾಧಾರಣವಾಗಿ ನೋಡಿದರೆ ಪ್ರತಿವರ್ಷವೂ ನಾಲ್ಕು ಮಿಲಿಯನ್‌ಅಷ್ಟು ಜನಸಂಖ್ಯೆ ಜಾಸ್ತಿಯಾಗುತ್ತಿದೆ. Four million new mouths to be fed. ಆದುದರಿಂದ ಜನಸಂಖ್ಯೆಯು ಏರದಂತೆ ಹತೋಟಿಯಲ್ಲಿಡಲು ಮಿತಸಂತಾನ ಪದ್ಧತಿಯನ್ನು ಜಾರಿಗೆ ತರಲು ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಹೋದರೆ ಇನ್ನು ಒಂದಲ್ಲ, ಎರಡಲ್ಲ, ಹತ್ತು ವರ್ಷಗಳಾದರೂ ನಮ್ಮ ಆಹಾರ ಸಮಸ್ಯೆ ಖಂಡಿತ ಬಗೆಹರಿಯುವುದಿಲ್ಲವೆಂದು ಹೇಳಬಯಸುತ್ತೇನೆ.

ಈಗ ಇರುವ ಜನಸಂಖ್ಯೆಗೆ 1,400 ಕ್ಯಾಲೊರಿಗಳು ಪ್ರತಿಯೊಬ್ಬರಿಗೂ ಆಹಾರವನ್ನೊದಗಿಸಿದರೂ ಕೂಡ ಒಂದುನೂರು ಮಿಲಿಯನ್ ಜನಗಳಿಗೆ ಆಹಾರ ಸಾಲುವುದಿಲ್ಲವೆಂದು ಜನಸಂಖ್ಯೆಯ ಲೆಕ್ಕದಲ್ಲಿ ತಜ್ಞರಾದವರು ಲೆಕ್ಕಹಾಕಿದ್ದಾರೆ. ಅದೇರೀತಿ ವರ್ಷಕ್ಕೆ ನಾಲ್ಕು ಮಿಲಿಯನ್ ಪ್ರಕಾರ ಜನಸಂಖ್ಯೆ ಜಾಸ್ತಿಯಾದರೆ ಇನ್ನು 25 ವರ್ಷಗಳಲ್ಲಿ ನಮ್ಮ ಇಂಡಿಯಾ ದೇಶದಲ್ಲಿರುವ ಜಮೀನನ್ನೆಲ್ಲ ಸಾಗುವಳಿ ಮಾಡಿದರೂ ಕೂಡ ಹೆಚ್ಚಿಗೆ ಆಗತಕ್ಕ ಜನಸಂಖ್ಯೆಗೆ ಆಹಾರವನ್ನು ಒದಗಿಸುವುದಕ್ಕಾಗುವುದಿಲ್ಲವೆಂದು ತಜ್ಞರು ಈಗಾಗಲೇ ಲೆಕ್ಕ ಹಾಕಿದ್ದಾರೆ. ಆದುದರಿಂದ ಜನಸಂಖ್ಯೆಯನ್ನು ಪರಿಮಿತಿಯಲ್ಲಿಟ್ಟುಕೊಳ್ಳುವುದು ಮುಖ್ಯವಾದದ್ದು. ಈ ರೀತಿ ಜನಸಂಖ್ಯೆಯನ್ನು ಪರಿಮಿತಿಯಲ್ಲಿಟ್ಟುಕೊಳ್ಳಬೇಕಾದರೆ, ಜನಗಳ ಜೀವನಮಟ್ಟ ಹೆಚ್ಚಬೇಕಾದರೆ, ಜನಸಂಖ್ಯೆಯ ಪರಿಮಿತಿಗೆ ಸಂಬಂಧಿಸಿದ ಕಾರ್ಯಕ್ರಮವನ್ನು ತೀವ್ರವಾಗಿ ಕೈಗೊಳ್ಳುವುದು ಸರ್ಕಾರದ ಬಹಳ ಮುಖ್ಯವಾದ ಕರ್ತವ್ಯವೆಂದು ನಾನು ಹೇಳಬಯಸುತ್ತೇನೆ.

ಇಷ್ಟೇ ಅಲ್ಲ. ಜನಸಂಖ್ಯೆಯ ಲೆಕ್ಕದಲ್ಲಿ ತಜ್ಞರಾದವರು ಹೇಳಿದ್ದಾರೆ; ಎಲ್ಲಿ ಹಸಿವು ಜಾಸ್ತಿಯಾಗಿರುತ್ತದೆಯೋ ಅಂಥ ಕಡೆಗಳಲ್ಲಿ ಜನಸಂಖ್ಯೆ ಜಾಸ್ತಿಯಾಗುತ್ತದೆ, ಎಂದು. ಈಗ ಆಫ್ರಿಕ, ಇಂಡಿಯಾ, ಚೀಣಾ, ದಕ್ಷಿಣ ಅಮೇರಿಕ ಮುಂತಾದ ಕಡೆ ತೀವ್ರ ಬಡತನವಿರುವುದರಿಂದ ಅಲ್ಲಿ ಜನಸಂಖ್ಯೆ ಜಾಸ್ತಿಯಾಗಿದೆ. ಯೂರೋಪ್, ಅಮೇರಿಕ ಮುಂತಾದ ಕಡೆ ಆಹಾರ ಸಮಸ್ಯೆ ಇಲ್ಲದೆ ಇರುವುದರಿಂದ ಜನಸಂಖ್ಯೆ ಕಡಮೆಯಾಗುತ್ತಿದೆ ಎಂದು ಕೂಡ ಅಂಕಿಅಂಶಗಳಿಂದ ಅವರು ಕಂಡುಹಿಡಿದಿದ್ದಾರೆ.

ಮತ್ತೆ ನಮ್ಮ ಸರ್ಕಾರದ ವ್ಯವಸಾಯದ ಇಲಾಖೆ ಯಾವರೀತಿ ಕೆಲಸಮಾಡುತ್ತಿದೆ ಎಂದರೆ ವಿದ್ಯಾಭ್ಯಾಸ ಇಲಾಖೆ, ರೆವೆನ್ಯೂ ಇಲಾಖೆ, ಮರಾಮತ್ತು ಇಲಾಖೆ ಮುಂತಾದ ಇಲಾಖೆಗಳಲ್ಲಿ ಆಫೀಸಿನಲ್ಲಿ ಕುಳಿತುಕೊಂಡು ಕೆಲಸಮಾಡುವ ಹಾಗೆ ಕೆಲಸಮಾಡುವ ಇಲಾಖೆಯಾಗಿದೆ. ಈ ಇಲಾಖೆಯವರು ಹೊರಗಡೆ ಫೀಲ್ಡ್‌ನಲ್ಲಿ ಹೋಗಿ ರೈತರಿಗೆ ಸಲಹೆಕೊಡುವುದು, ಪ್ರಯೋಗಗಳನ್ನು ಮಾಡಿತೋರಿಸುವುದು, ಇಂಥ ಯಾವ ಕೆಲಸವನ್ನೂ ಮಾಡದೆ ಇರುವುದರಿಂದ ಆ ಇಲಾಖೆಯಿಂದ ರೈತರಿಗೆ ಹೆಚ್ಚು ಅನುಕೂಲವಾಗುತ್ತಿಲ್ಲವೆಂದು ನಾನು ಪರಿಗಣಿಸುತ್ತೇನೆ. ಮೊನ್ನೆ ತಾನೇ ರಾಯಚೂರು ಭಾಗದಿಂದ ಬಂದಿರುವ ಸದಸ್ಯರೊಬ್ಬರು ರಾಯಚೂರು ಜಿಲ್ಲೆಗೆ ತುಂಗಭದ್ರ ನೀರನ್ನು ಕೊಟ್ಟಿದ್ದರೂ ಕೂಡ ರೈತರು ನೀರನ್ನು ತೆಗೆದುಕೊಂಡು ತರೀ ವ್ಯವಸಾಯವನ್ನು ಮಾಡುವುದಕ್ಕೆ ಸಿದ್ಧರಾಗಿಲ್ಲವೆಂದು ಹೇಳಬೇಕಾದರೆ ಅದಕ್ಕೆ ಕಾರಣವೇನು? ವ್ಯವಸಾಯ ಇಲಾಖೆಯವರು ಅಥವಾ ಸರ್ಕಾರದವರು ಯಾರೇ ಆಗಲಿ ಆ ಭಾಗದ ಜನರಿಗೆ ತರೀ ವ್ಯವಸಾಯದ ವಿಷಯದಲ್ಲಿ ಸರಿಯಾದ ತಿಳುವಳಿಕೆ ಕೊಡದೆ ಇರುವುದೇ ಕಾರಣವೆಂದು ಹೇಳಬಹುದು. ಆ ಜನರಿಗೆ ಸರಿಯಾದ ತಿಳುವಳಿಕೆ ಕೊಟ್ಟಿದ್ದರೆ ಈ ರೀತಿ ಮಾಡುತ್ತಿದ್ದರೇ ಎಂದು ಯೋಚಿಸಬೇಕು. ವ್ಯವಸಾಯ ಇಲಾಖೆಯವರು ರಾಯಚೂರು ಜಿಲ್ಲೆಯಲ್ಲಿ ಒಂದು demonstration plot ಮಾಡಿ ಅದರಲ್ಲಿ ಭತ್ತವನ್ನು ಬೆಳೆಯುವ ವಿಧಾನವನ್ನು ತೋರಿಸಿಕೊಟ್ಟಿದ್ದರೆ ಅಲ್ಲಿನ ರೈತರು ಖಂಡಿತವಾಗಿಯೂ ಮುಂದೆ ಬಂದು ನೀರಾವರಿ ವ್ಯವಸಾಯವನ್ನು ಮಾಡುತ್ತಿದ್ದರು. ಈಗ ನಮ್ಮ ದೇಶದ ಮೂರನೆಯ ಒಂದು ಭಾಗದ ಜಮೀನು ಮಾತ್ರ ವ್ಯವಸಾಯದಲ್ಲಿದೆ. ಇನ್ನುಳಿದ ಮೂರನೆಯ ಎರಡು ಭಾಗದ ಜಮೀನನ್ನು ಪ್ರತಿಯೊಬ್ಬರಿಗೂ ಕೊಡುವುದಕ್ಕೆ ಬದಲು ಅದರಲ್ಲಿ co-operative farming ಮಾಡಬೇಕು. Co-operative farming ಎಂದರೆ ಡೈರಿ ಕೆಲಸ, ಕೋಳಿ ಸಾಕುವುದು, ಕುರಿ ಮತ್ತು ಮೇಕೆಗಳನ್ನು ಸಾಕುವುದು ಈ ರೀತಿಯಾಗಿ ಮಾಡಿದರೆ ಅದರಿಂದ ಜಮೀನಿನ fertility ಫಲವತ್ತು ಉಳಿಯುತ್ತದೆ. ಅದೇರೀತಿ ಆಹಾರ ಸಮಸ್ಯೆಯೂ ಬಗೆಹರಿಯುತ್ತದೆ.

ನಮ್ಮ ಜನಗಳಲ್ಲಿ balanced diet ಎನ್ನುವ ವಿಷಯವನ್ನು ಪ್ರಚಾರಮಾಡಬೇಕಾದುದು ಸರ್ಕಾರದ ಮುಖ್ಯ ಕರ್ತವ್ಯ. Balanced diet ನಲ್ಲಿರುವ ಮಹತ್ವವನ್ನು ಜನಗಳಿಗೆ ತಿಳಿಸಿದರೆ ಆಹಾರದಲ್ಲಿರುವ ಅನೇಕ ಕುಂದುಕೊರತೆಗಳು ನಿವಾರಣೆಯಾಗಿ ಅಕ್ಕಿ, ಗೋಧಿ ಇವುಗಳ ಮೇಲೆಯೇ ಅವಲಂಬಿಸುವುದು ತಪ್ಪುವುದಲ್ಲದೆ ಜನಗಳಿಗೆ ಆರೋಗ್ಯಕರವಾದ ಆಹಾರವನ್ನೂ ಒದಗಿಸಬಹುದು. ಅದೇರೀತಿ ನಮ್ಮ ದೇಶದಲ್ಲಿ ಸರಿಯಾದ ಮಾರುಕಟ್ಟೆ ಇಲ್ಲದೆ ಹಾಳಾಗುತ್ತಿರುವ ಹಣ್ಣುಗಳನ್ನು processing factory ಸ್ಥಾಪನೆಮಾಡಿ ಅವುಗಳನ್ನು

preserve ಮಾಡಿದರೆ ಬೇಸಗೆ ಕಾಲದಲ್ಲಿ ಮತ್ತು ಹಣ್ಣುಗಳು ದೊರೆಯದೆ ಇರಬಹುದಾದ ಕಾಲದಲ್ಲಿ ಹಣ್ಣುಗಳನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರದವರು Canning Industry, Processing Industry ಇವುಗಳನ್ನು ಸ್ಥಾಪನೆ ಮಾಡಿದರೆ ಸ್ವಲ್ಪಮಟ್ಟಿಗೆ ನಮ್ಮ ಆಹಾರ ಸಮಸ್ಯೆ ಕಡಮೆಯಾಗುತ್ತದೆಂದು ಹೇಳಬಯಸುತ್ತೇನೆ.

ಈಗ ನಮ್ಮ ದೇಶಕ್ಕೆ 200 ಮೈಲಿ ಕರಾವಳಿ ಇದೆ. ಇಲ್ಲಿಯೂ ಮತ್ತು ನದಿ ಮತ್ತು ಕೆರೆಗಳಲ್ಲಿಯೂ ಮೀನು ಸಾಕುವ ಕೈಗಾರಿಕೆಯನ್ನು ತೀವ್ರವಾಗಿ ಸ್ಥಾಪಿಸಿ, ಅಲ್ಲಿ ಉತ್ತಮಜಾತಿಯ ಮೀನುಗಳನ್ನು ಸಾಕುವುದಕ್ಕೆ ಏರ್ಪಡಿಸಿದರೆ ಸ್ವಲ್ಪಮಟ್ಟಿಗೆ ಆಹಾರದ ಕೊರತೆ ಕಡಮೆಯಾಗುತ್ತದೆ ಎಂದು ಹೇಳುತ್ತೇನೆ. ಪ್ರತಿಯೊಂದು ಪಟ್ಟಣದಲ್ಲಿಯೂ ನ್ಯಾಯ ಬೆಲೆಯ ಅಂಗಡಿಗಳನ್ನು ಸ್ಥಾಪನೆಮಾಡಬೇಕು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಸ್. ಆರ್. ರಾಮಯ್ಯ (ಹೊಸಕೋಟೆ).—ಅಧ್ಯಕ್ಷರೇ, ಆಹಾರ ಸಮಸ್ಯೆಯ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಅನೇಕ ಸಲಹೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅದರಲ್ಲಿಯೂ ಮೈದಾನ ಪ್ರದೇಶವಾದ ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ, ಗುಲ್ಬರ್ಗ ಈ ಪ್ರದೇಶಗಳಲ್ಲಿರತಕ್ಕಂಥ ಪರಿಸ್ಥಿತಿ ಇವೊತ್ತಿನ ದಿವಸ ತುಂಬ ಕಠಿಣವಾಗಿದೆ ಎಂದು ಹೇಳಬಹುದು. ಹಿಂದೆ ನಾವು ಕೆರೆಗಳ ವಿಚಾರದಲ್ಲಿ ಮತ್ತು ಕಟ್ಟೆಗಳ ವಿಚಾರದಲ್ಲಿ ಅನೇಕ ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದೆವು ಮತ್ತು ಸರ್ಕಾರದವರೂ ಕೂಡ ಕೆರೆಗಳನ್ನು ದುರಸ್ತು ಮಾಡುವ ವಿಚಾರದಲ್ಲಿ ತೀವ್ರವಾದ ಗಮನ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಆದರೆ ಕಾರ್ಯರೂಪದಲ್ಲಿ ಏನಾಗಿದೆ ಎಂದು ನೋಡಿದರೆ ಅನೇಕ ಕೆರೆಗಳು ಇನ್ನೂ ದುರಸ್ತು ಆಗುವುದಕ್ಕೆ ಅವಕಾಶವಾಗಿಲ್ಲ. ದುರಸ್ತು ಮಾಡಿಸುತ್ತೇವೆ ಎಂದು ಹೇಳಿದ ನಿರೀಕ್ಷೆ ಸಾಧ್ಯವಿಲ್ಲವೆಂದು ನನಗನ್ನಿಸುತ್ತದೆ. ಒಂದು ಉದಾಹರಣೆಗೆ ಈಗ ನನ್ನ ಕ್ಷೇತ್ರವಾದ ಹೊಸಕೋಟೆ, ದೇವನಹಳ್ಳಿ ತಾಲ್ಲೂಕುಗಳ ವಿಷಯ ಹೇಳಬೇಕಾದರೆ ಅಲ್ಲಿ ಸುಮಾರು ಮುನ್ನೂರು ಕೆರೆಗಳಿಗೆ ಮೇಲ್ಪಟ್ಟಿದ್ದವು ಆ ಪೈಕಿ ಸುಮಾರು ನೂರಕ್ಕೆ ಮೇಲ್ಪಟ್ಟ ಕೆರೆಗಳನ್ನು ಕೆರೆಗಳು ಎಂದು ಲೆಕ್ಕದಲ್ಲಿದ್ದರೂ ಕೆರೆಗಳು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅಚ್ಚುಕಟ್ಟಿನ ವಿಚಾರದಲ್ಲಿ ತೆಗೆದುಕೊಂಡರೆ ಅದರಲ್ಲಿ ನಾಲ್ಕನೆಯ ಒಂದು ಭಾಗದಷ್ಟೂ ಸಹ ವ್ಯವಸಾಯಕ್ಕೆ ಬರುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ, ಹೂತು ಹೋಗಿರುವ ಕೆರೆಗಳಿಗೆ ಮಳೆಯಿಂದ ನೀರು ಬಂದು ಅದು ತುಂಬಿದರೂ, ಅದರಿಂದ ಪೂರಾ ಬೆಳೆಯಾಗುತ್ತದೆ ಎನ್ನುವ ನಿರೀಕ್ಷೆ ಇಲ್ಲ. ಹೀಗಾಗಿ ಕೆರೆಗಳನ್ನೇ ನಂಬಿಕೊಂಡಿದ್ದಂಥ ಬೆಳೆಗಳು ಇವೊತ್ತಿನ ದಿವಸ ಇಲ್ಲದೆ ಆಗಿದೆ.

ಮಳೆ ವಿಚಾರವಾಗಿ ಹೇಳಬೇಕಾದರೆ ಮುಂಗಾರು ಮಳೆ ಏನೋ ಚೆನ್ನಾಗಿಯೇ ಆಯಿತು. ಆ ನಿರೀಕ್ಷೆಯ ಮೇಲೆ ಅನೇಕರು ಬೆಳೆಗಳನ್ನಿಟ್ಟಿದ್ದರು, ಬೆಳೆಯೂ ಬಂತು. ಆದರೆ ಇವೊತ್ತು ಅನೇಕ ಕಡೆ ಬೆಳೆ ಇಲ್ಲ. ಹೋದ ತಿಂಗಳು ಎಂದರೆ ಸೆಪ್ಟೆಂಬರ್ ತಿಂಗಳಿನಲ್ಲಿ ಮಾನ್ಯ ರೆವೆನ್ಯೂ ಮಂತ್ರಿಗಳು ದೇವನಹಳ್ಳಿ ತಾಲ್ಲೂಕಿನಲ್ಲಿ ಪ್ರವಾಸ ಮಾಡಿದಾಗ್ಗೆ 'ಇನ್ನು ಒಂದು ವಾರದೊಳಗೆ ಈ ಭಾಗದಲ್ಲಿ ಮಳೆ ಬಾರದೆ ಇದ್ದರೆ, ಬೆಳೆಗಳೆಲ್ಲ ಹಾಳಾಗುತ್ತವೆ' ಎಂದು ತಿಳಿಸಿದರು. ಒಂದು ವಾರದಲ್ಲಿ ಮಳೆಬರಲಿಲ್ಲ. ಆದರೆ 15-20 ದಿವಸಗಳಾದ ಮೇಲೆ ಮಳೆ ಬಂದು ಪೈರೆಲ್ಲ ಚಿಗುರಿತು. ಆದರೂ ಪುನಃ ಬೆಳೆಯಾಗುತ್ತದೆಂಬ ಯಾವ ನಿರೀಕ್ಷೆಯೂ ಇಲ್ಲ. ನಮ್ಮ ಮಾನ್ಯ ಮಂತ್ರಿಗಳು ಹಿಂದೆ ಹೇಳಿದ್ದ ಒಂದು ಮಾತನ್ನು ಮರೆತರು ಎಂದು ಕಾಣುತ್ತದೆ. ಕಾಲಕ್ಕೆ ಸರಿಯಾಗಿ ಮಳೆಗಳು ಬಂದರೆ ಬೆಳೆ ಸಿಕ್ಕುತ್ತದೆ. ಆದರೆ ಮೈದಾನ ಪ್ರದೇಶದಲ್ಲಿರುವ ಅನೇಕ ಕೆರೆಗಳ ಅಚ್ಚುಕಟ್ಟಿನಲ್ಲಿ ಯಾವತ್ತಿಗೂ ಸರಿಹೋಗುವುದಿಲ್ಲವೆಂಬುದು ನನ್ನ ಭಾವನೆ. ಅಲ್ಲಿ ಯಾವ ಬೆಳೆಯನ್ನೂ ಬೆಳೆಯುವುದಕ್ಕೆ ಅವಕಾಶವೇ ಇಲ್ಲ. ಅಂಥ ಕೆರೆಗಳಲ್ಲಿ ಹೂಳು ತೆಗೆಸದೆ ಬಿಟ್ಟಲ್ಲಿ ಅಲ್ಲಿ ಬೆಳೆಯಾಗಲಾರದು. ನನ್ನ ಕ್ಷೇತ್ರದಲ್ಲಿ ಅನೇಕ ಕಡೆ ಹುರುಳಿಯ ಬೆಳೆಯನ್ನೂ ಸಹ ಇಟ್ಟಿಲ್ಲ. ದೇವನಹಳ್ಳಿ ಮತ್ತು ಹೊಸಕೋಟೆ ತಾಲ್ಲೂಕುಗಳ ವಿಚಾರ ಹೇಳಬೇಕೆಂದರೆ ಅಲ್ಲಿ ಶೇಕಡ 70 ಭಾಗ ಬೆಳೆ ಇಲ್ಲವೆಂದು ಹೇಳಬಹುದು ; ಮತ್ತು ಆಗಿರತಕ್ಕ 30 ಭಾಗದ ಬೆಳೆಯಲ್ಲಿ ನಾಲ್ಕಾಣೆ ಭಾಗದ ಫಸಲು ಕೂಡ ಬರುವುದಿಲ್ಲವೆಂದು ಹೇಳಬಹುದು. ಕೆಲವು ಕಡೆ ಪೈರು ಹೆಚ್ಚಿಗೆ ಕಾಣಿಸಿದರೂ ತೆನೆ ಇಲ್ಲವೆಂದು ಹೇಳುತ್ತೇನೆ. ಅನೇಕ ರೈತರನ್ನು ಕೇಳಿದರೆ ಬೆಳೆಯಾಗುವುದಿಲ್ಲ, ದನಗಳಿಗೆ ಹುಲ್ಲು ಆದರೆ ಸಾಕು, ಧಾನ್ಯವನ್ನು ನಿರೀಕ್ಷೆ ಮಾಡುತ್ತೇವೆ ಎಂದು ಹೇಳುವುದಕ್ಕೆ ಸಾಧ ವಿಲ್ಲವೆಂದು ಹೇಳುತ್ತಾರೆ. ಅನೇಕರು ಧಾನ್ಯವನ್ನು ತೆಗೆದುಕೊಂಡು ಹೋಗಿ ಭೂಮಿಯಲ್ಲಿ ಹಾಕಿ ಮನೆಯಲ್ಲಿದ್ದದ್ದೂ ಹೋಯಿತು ಎನ್ನುವ ಸ್ಥಿತಿಯಲ್ಲಿದ್ದಾರೆ.

ಬಯಲು ಸೀಮೆಯಾದ ಬೆಂಗಳೂರು, ಕೋಲಾರ ಮತ್ತಿತರ ಜಿಲ್ಲೆಗಳಲ್ಲಿ ಅರಣ್ಯ ಸಂಪತ್ತು ಯಾವಾಗ ಹೋಯಿತೋ ಆಗ ಕೆರೆಗಳು ಮುಚ್ಚುವುದಕ್ಕೆ ಕಾರಣವಾಯಿತು. ಹತ್ತು ವರ್ಷಗಳ ಹಿಂದೆ ಇದ್ದಂಥ ಕೆರೆಗಳ ಪೈಕಿ ಕಾಲು ಭಾಗದಷ್ಟು ಕೆರೆಗಳು ವ್ಯವಸಾಯಕ್ಕೆ ಯೋಗ್ಯವಾಗಿಲ್ಲ; ಮತ್ತು ಅವುಗಳನ್ನು ಮುಂದೆಯಾದರೂ ರಿಪೇರಿ ಮಾಡುವುದಕ್ಕೆ ಸಾಧ್ಯವೇ ಎಂಬುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಹೀಗಾಗಿ ಬೆಳೆಗಳು ಕೆಟ್ಟುಹೋಗಿವೆ ಎಂದು ನಾವು ಹೇಳಬೇಕು. ಇನ್ನು ನಮ್ಮ ಹೊಸಕೋಟೆ ಮತ್ತು ದೇವನಹಳ್ಳಿ ತಾಲ್ಲೂಕಿನ ವಿಷಯವನ್ನು ಹೇಳಬೇಕಾದರೆ, ಕೆಲವು ಕಡೆ ಕೆರೆಗಳನ್ನು ಇನ್ನೂ ರಿಪೇರಿ ಮಾಡುತ್ತಿದ್ದಾರೆ. ಕೆರೆಗಳು ಕಿತ್ತು ಹೋಗಿವೆ, ರಿಪೇರಿ ಮಾಡಿದರೆ ಬೆಳೆ ಬರುತ್ತದೆ ಎಂದು ಈಗ ತಾನೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು. ಹಿಂದಿನಿಂದಲೂ ಕಿತ್ತುಹೋಗಿರುವ ಕೆರೆಗಳು ಇವೊತ್ತಿನವರೆಗೂ ರಿಪೇರಿ ಆಗಿಲ್ಲವೆಂದು ಅವರೇ ಹೇಳಿದ ಮೇಲೆ ಯಾವ ರೀತಿ ಬೆಳೆಯಾಗುತ್ತದೆ ಎಂಬುದನ್ನು ಸರ್ಕಾರದವರೇ ನಿರೀಕ್ಷಣೆ ಮಾಡಬೇಕು. ಮಾನ್ಯ ಮಂತ್ರಿಗಳು ಪರಿಹಾರ ಕ್ರಮವನ್ನೇನೋ ತೆಗೆದುಕೊಳ್ಳಬಹುದು. ಸರ್ಕಾರದವರು ಹಿಂದುಮುಂದು ನೋಡದೆ ಕಾರ್ಯಗಳನ್ನು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟರೂ ಅಲ್ಲಿ ಕೆಲಸ ಕಾರ್ಯಗಳೇನೂ ನಡೆಯುತ್ತಿಲ್ಲ. ಒಂದು ವೇಳೆ ಕೆಲಸ ಕಾರ್ಯಗಳೇನಾದರೂ ನಡೆದಿವೆಯೋ ಎಂದು ನೋಡೋಣವೆಂದರೆ, ಕೆರೆಗೆ ಸಂಬಂಧಪಟ್ಟ ಇಲಾಖೆಯವರು ನಮಗೆ ಎಸ್ಟಿಮೇಟು ಮಂಜೂರು ಆಗಿಲ್ಲ, ಹಣ ಬಂದಿಲ್ಲ ಎಂದು ಹೇಳುತ್ತಾರೆ. ರೆವಿನ್ಯೂ ಇಲಾಖೆಯವರು ಕೆರೆಗಳ ಸಂಬಂಧ ನಮಗಿಲ್ಲವೆಂದು ಹೇಳುತ್ತಾರೆ. ಈ ಸಮಸ್ಯೆ ಬಿಡಿಸುತ್ತೇವೆಂದು 8-10 ವರ್ಷಗಳಿಂದಲೂ ಹೇಳುತ್ತಿದ್ದಾರೆ. ಹಿಂದೆ ಒಂದು ಸಮಿತಿ ಮಾಡುತ್ತೇವೆ, ಜಿಲ್ಲಾ ಮಟ್ಟದಲ್ಲಿ ಸಮಿತಿಗಳನ್ನು ರಚಿಸುತ್ತೇವೆ, ನಾವು ದುಡ್ಡು ಕೊಡುತ್ತೇವೆಂದು ಹೇಳಿದ್ದಾರೆಯೇ ವಿನಾ, ಆ ಕೆಲಸ ಕಾರ್ಯಗಳು ಕಾರ್ಯರೂಪಕ್ಕೆ ಬರಬೇಕಾದರೆ ಕೆಲವು ತಿಂಗಳು

(ಶ್ರೀ ಎಸ್. ಆರ್. ರಾಮಯ್ಯ)

ಗಳೇನು, ಕೆಲವು ವರ್ಷಗಳನ್ನೇ ಕಳೆಯುತ್ತಾರೆ. ಅದು ಕಠಿಣ ಸ್ಥಿತಿ ಆಗಿದೆಯೆಂದು ಹೇಳುತ್ತೇನೆ. ಏಕೆಂದರೆ ನಮ್ಮಲ್ಲಿ ಒಂದು ಕೆಲಸ ಕಾರ್ಯವನ್ನು ಮಾಡುವಾಗ ತೀವ್ರತೆ ಕಂಡುಬರುತ್ತಾ ಇಲ್ಲ. ಇದ್ದ ಪರಿಸ್ಥಿತಿಯಲ್ಲಿ ತೀವ್ರತೆ ಏನೂ ಇಲ್ಲ. ಒಂದು ರಸ್ತೆ ಮಾಡಿದ್ದೇವೆ, ಕೆರೆಯಲ್ಲಿ ಹೂಳು ತೆಗೆಸುತ್ತಿದ್ದೇವೆಂದು ಅದನ್ನೇ ಒಂದು ಮಾಡಿಸಿದ್ದೇವೆಂದು ಸರ್ಕಾರದವರೂ ಕೂಡ ತೃಪ್ತಿಪಟ್ಟುಕೊಳ್ಳುವ ಸ್ಥಿತಿಯಲ್ಲಿಲ್ಲ. ಎಲ್ಲೋ ಒಂದು ಕೆಲಸ ಮಾಡಿ ಲೆಕ್ಕ ಕೊಡುತ್ತಾರೆ. ಹೀಗಾಗಿ ನಿಮ್ಮ ಕೆಲವಾರು ಅಂಕಿಅಂಶಗಳಿಂದ ಪ್ರತಿವರ್ಷವೂ ಆಹಾರದ ಕೊರತೆಗಳು ಕಾಣುತ್ತಿವೆ. ಈ ಆಹಾರದ ಕೊರತೆಯನ್ನು ನೀಗಿಸುವುದಕ್ಕೋಸ್ಕರ ಒಂದೆರಡು ಸಲಹೆಗಳನ್ನು ಕೊಟ್ಟು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ಅತಿ ಶೀಘ್ರವಾಗಿ ಭಾವಿಗಳನ್ನು ತೋಡಿಸಬೇಕು. ಮಳೆ ಕಡಿಮೆಯಾಗಿ ಬೀಳುವ ಕಡೆ ಸುಲಭ ಖರ್ಚಿನಲ್ಲಿ ಬಾವಿಗಳನ್ನು ತೋಡಿಸಬೇಕು. ಕೆರೆಗಳನ್ನು ಮಾಡಿಸುವುದಕ್ಕೆ ಖರ್ಚು ಬಹಳ ಹೆಚ್ಚಾಗಿರುವುದರಿಂದ ಎಲ್ಲೆಲ್ಲಿ ಬಾವಿಗಳನ್ನು ತೋಡಿಸುವುದಕ್ಕೆ ಸಾಧ್ಯವೋ ಅಲ್ಲಲ್ಲಿ ರೈತರಿಗೆ ಸಾಲದ ರೂಪದಲ್ಲಿ ಹಣ ಸಹಾಯ ಮಾಡಿ ಸುಲಭ ಕಂತುಗಳಲ್ಲಿ ಆ ಹಣವನ್ನು ಅವರು ತೀರಿಸುವುದಕ್ಕೆ ಅನುಕೂಲವನ್ನು ಕಲ್ಪಿಸಿ ಕೊಡಬೇಕು. ಆಗ ಬಾವಿಗಳನ್ನು ತೋಡಿಸುವುದಕ್ಕೆ ಬಹಳ ಸುಲಭವಾಗುತ್ತದೆ. ಬಾವಿಗಳ ಕೆಲಸ ಬಹಳ ಶೀಘ್ರವಾಗಿ ಮುಗಿಯುವುದಕ್ಕೆ ಅವಕಾಶ ಕೊಡಿ. ಪರಿಹಾರ ಕ್ರಮಗಳಿಗೆ ಹಣ ಕೊಡುವ ಹಾಗೆ ಈ ಕೆಲಸ ಕಾರ್ಯಗಳಿಗೆ ಹಣ ಕೊಡಬೇಕು. ಆಗ ಅವರಿಗೆ ಕೂಲಿ ಸಿಕ್ಕುತ್ತದೆ. ಬಾವಿಗಳನ್ನು ಹೆಚ್ಚು ಹೆಚ್ಚಾಗಿ ತೋಡುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ವಿದ್ಯುತ್ ನೀರಾವರಿ ಪಂಪುಗಳ ವಿಚಾರ. ಕೆಲವು ತಿಂಗಳ ಹಿಂದೆ ಒಂದು ವಿದ್ಯುತ್ ಬೋರ್ಡನ್ನು ರಚನೆ ಮಾಡಿದ್ದಾರೆ. ಅವರೂ ಕೂಡ ಕಾರ್ಯ ತೆಗೆದುಕೊಳ್ಳುತ್ತಿದ್ದಾರೆ. ಪರಿಸ್ಥಿತಿ ಬಿಗಡಾಯಿಸುವುದಕ್ಕೆ ಮುಂಚೆಯೇ ಕ್ರಮ ತೆಗೆದುಕೊಳ್ಳುವುದು ಉತ್ತಮ. ಏನೇ ಆಗಲಿ ವ್ಯವಸಾಯಕ್ಕೋಸ್ಕರ ವಿದ್ಯುಚ್ಛಕ್ತಿ ಒದಗಿಸುತ್ತೇವೆ ಎಂದು ಸರಕಾರದವರು ದಿಟ್ಟತನದಿಂದ ಮುಂದೆ ಬಂದು ಬೇರೆ ಕೆಲಸವಿದ್ದರೂ ಅದನ್ನು ನಾಳೆ ಎನ್ನದೆ ಕೂಡಲೇ ಕ್ರಮ ತೆಗೆದುಕೊಂಡರೆ ನಮ್ಮ ದೇಶದಲ್ಲಿ ಹೊರಗೆ ಹೋಗತಕ್ಕ ಹಣ ನಮ್ಮಲ್ಲಿ ನಿಲ್ಲುತ್ತದೆ. ಭಾವಿಗಳನ್ನು ತೋಡಿಸಿ ನೀರಾವರಿ ಪಂಪುಗಳನ್ನು ಒದಗಿಸಲು ಅವಕಾಶ ಮಾಡಿಕೊಡಬೇಕು. ಇನ್ನು ಸಾಲಗಳನ್ನು ಕೊಡುವ ವಿಚಾರ. ರೈತಾಪಿ ಜನಗಳಿಗೆ ಇವತ್ತಿನ ದಿವಸ ವ್ಯವಸಾಯ ಸಂಘಗಳ ಮೂಲಕ ಸಾಲ ಒದಗುತ್ತಿರುವುದು ಇನ್ನೂ ತೀವ್ರವಾಗಿ ಹೆಚ್ಚಬೇಕು. ಜಮೀನು ವ್ಯವಸ್ಥೆಯ ವಿಚಾರದಲ್ಲಿ ನಮ್ಮಲ್ಲಿ ಅನೇಕ ತೊಡಕುಗಳಿವೆ, ಅನೇಕರು ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಜೋಡಿ ಗ್ರಾಮಗಳಲ್ಲಿ ರೈತರು ಸಾಲ ಪಡೆಯುವುದಕ್ಕೆ ಅವಕಾಶವಿಲ್ಲ. ನನ್ನ ಕ್ಷೇತ್ರದ ವಿಷಯ ಹೇಳಬೇಕಾದರೆ, ಮೂರರಲ್ಲಿ ಒಂದು ಭಾಗ ಜೋಡಿ ಗ್ರಾಮಗಳಿವೆ. ಸರ್ಕಾರದಿಂದ ಹಣ ಪಡೆಯಲು ಅವಕಾಶವಿಲ್ಲ. ಸರಕಾರದವರಿಂದ ಸಾಲ ಪಡೆಯುವುದಕ್ಕೆ ತೊಂದರೆ ಇದೆ. ಯಾವಾಗ ಸರ್ಕಾರದವರು ಕಾಲಕ್ಕೆ ಸರಿಯಾಗಿ ರೈತಾಪಿ ಜನಗಳಿಗೆ ಹಣ ಸಹಾಯ ಒದಗಿಸುವುದಿಲ್ಲವೋ ಆಗ ಅವರಿಗೆ ಯಾವ ಕೆಲಸಮಾಡುವುದಕ್ಕೂ ಆಗುವುದಿಲ್ಲ. ಹೆಚ್ಚು ಆಹಾರ ಬೆಳೆಯಲು ಕಷ್ಟವಾಗುತ್ತದೆ. ಅವರಿಗೂ ಹಣ ಸಿಕ್ಕುವುದಕ್ಕೆ ವ್ಯವಸ್ಥೆ ಮಾಡಿ, ಸುಲಭ ಕಂತುಗಳಲ್ಲಿ ಪಡೆದ ಸಾಲವನ್ನು ತೀರಿಸುವುದಕ್ಕೆ ಒಂದು ವ್ಯವಸ್ಥೆ ಮಾಡಿದರೆ ನಮ್ಮ ಆಹಾರದ ಬೆಳೆಗಳನ್ನು ಬೆಳೆಯುವುದಕ್ಕೆ ಮತ್ತು ಈಗಿನ ಆಹಾರದ ಬೇಡಿಕೆಗಳನ್ನು ಪೂರೈಕೆ ಮಾಡುವುದಕ್ಕೆ ಒಂದು ಅವಕಾಶವಾಗುತ್ತದೆ. ನಾವು ಇನ್ನಾರು ತಿಂಗಳೊಳಗಾದರೂ ಯಾವುದಾದರೂ ಒಂದು ಮಟ್ಟಕ್ಕೆ ಬಂದರೆ ಈಗಿರುವ ಆಹಾರ ಅಭಾವದ ಕೊರತೆಯನ್ನು ಸ್ವಲ್ಪ ನೀಗಬಹುದೆಂದು ನನಗನ್ನಿಸುತ್ತದೆ. ಈಗ ಆಹಾರವನ್ನು ಎಲ್ಲಾ ಕಡೆಗಳಲ್ಲಿಯೂ ಒದಗಿಸುವ ವಿಚಾರದಲ್ಲಿ ಖಂಡಿತವಾಗಿ ಪಟ್ಟಣಗಳಲ್ಲಿ ಒದಗಿಸುವಷ್ಟು ಸುಲಭವಾಗಿ ಹಳ್ಳಿಗಳಲ್ಲಿ ಒದಗಿಸಲು ಸಾಧ್ಯವಿಲ್ಲ. ಅಲ್ಲಿ ಅಕ್ಕಿ ಹಂಚುವ ರೀತಿ ಹೇಗಿದೆಯೆಂದರೆ, ಮಕ್ಕಳಿಗೆ, ಖಾಯಿಲೆಯವರಿಗೆ ಗಂಜಿಗೆ ಆಗುತ್ತದೆ. ನಿಜವಾಗಿ ಮಳೆ, ಗಾಳಿ, ಬಿಸಿಲು ಎನ್ನದೆ ಹೊಲಗಳಲ್ಲಿ ಕೆಲಸ ಮಾಡುವ ನಮ್ಮ ರೈತರಿಗೆ ಅನ್ನ ತಿಂದು ಅಂತಹ ಕಷ್ಟವಾದ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ರೈತನ ಕೆಲಸ ಬಹಳ ಕಷ್ಟ. ಅದರಿಂದ ಅವರಿಗೆ ಹೆಚ್ಚಿಗೆ ರಾಗಿ, ಜೋಳ ಒದಗಬೇಕು. ಇವತ್ತಿನ ದಿವಸ ಬೆಲೆ ವಿಪರೀತವಾಗಿರುವ ಪದಾರ್ಥಗಳನ್ನು ಹಳ್ಳಿಗಳಿಗೆ ಒದಗಿಸುತ್ತಾರೆ. ಒಂದು ರೂಪಾಯಿಗೆ ಒಂದೂವರೆ ಸೇರು ಅಕ್ಕಿ ಇರುವಾಗ, ನಾವು ಕೊಡುವ ಕೂಲಿ ದಿನಕ್ಕೆ 12 ಆಣೆ. ಇದರಿಂದ ಎಷ್ಟೊಂದು ಜನ ತಿಂದು ತೃಪ್ತಿಯಾಗಬಹುದು, ಎಷ್ಟರ ಮಟ್ಟಿಗೆ ಕೆಲಸ ಮಾಡಬಹುದೆಂಬುದನ್ನು ನಾವೇ ತೀವ್ರವಾಗಿ ಯೋಚನೆ ಮಾಡಬೇಕು. ನಾವು ಕೊಡುವ ಕೂಲಿ ಕಡಮೆಯಾಗಿ ಅವನು ಕೊಳ್ಳುವ ಬೆಲೆ ಜಾಸ್ತಿಯಾದರೆ, ಅವನು ತನ್ನ ಮನೆಗೆ ಬೇಕಾದ ಆಹಾರ ಸಾಮಗ್ರಿಗಳನ್ನು ಒದಗಿಸಲು ಕಷ್ಟವಾಗುತ್ತದೆ. ಅವರಿಗೆ ಹೊಟ್ಟೆಯ ತುಂಬ ತಿಂಡಿ, ಅನ್ನ ಬೀಳದಿದ್ದರೆ ಅವರು ದೃಢಕಾಯರಾಗುವುದಿಲ್ಲ. ಅವರಿಂದ ಕೆಲಸ ಚೆನ್ನಾಗಿ ನಡೆಯುವುದಿಲ್ಲ. ಆಹಾರದ ವಿಚಾರದಲ್ಲಿ ಅವರಿಗೆ ಹೆಚ್ಚಿಗೆ ರಾಗಿ ಸಿಕ್ಕುವ ಹಾಗೆ ಅವಕಾಶ ಮಾಡಿಕೊಡಬೇಕು ರಾಗಿ ವಿಶೇಷವಾಗಿ ಸಿಕ್ಕುವುದು ಮೈಸೂರು ರಾಜ್ಯದಲ್ಲಿ. ಈ ಮೈಸೂರು ರಾಜ್ಯವನ್ನು ಬಿಟ್ಟರೆ ಇನ್ನೆಲ್ಲೂ ಇಷ್ಟು ಹೆಚ್ಚಾಗಿ ದೊರೆಯುವುದಿಲ್ಲ. ಅದು ಸಹಜವಾದ ವಿಚಾರ. ಆದರೂ ಸಹ ಪಟ್ಟಣಗಳಲ್ಲಿ ಅದರಲ್ಲೂ ಹೆಚ್ಚು ವರಮಾನವಿರುವವರಿಗೆ ಈ ವಿಚಾರದಲ್ಲಿ ಸ್ವಲ್ಪ ಅನುಕೂಲವಿದೆ. ಇವತ್ತಿನ ದಿವಸ ಬೆಂಗಳೂರಿನಲ್ಲಿದ್ದರೆ ನನಗೆ ಸಮಾಧಾನವೆಂದು ಹೇಳುವ ಮಾತನ್ನು ಅನೇಕರಿಂದ ಕೇಳುತ್ತಿದ್ದೇನೆ. ಏಕೆಂದರೆ ಇಲ್ಲಿ ಅಂತಹ ಅನುಕೂಲತೆಗಳಿವೆ. ಆದ್ದರಿಂದ ಈ ವಿಚಾರದಲ್ಲಿ ಹೆಚ್ಚು ವರಮಾನವನ್ನು ಪಡೆಯುತ್ತಿರುವವರು ರೈತಾಪಿ ಜನಗಳಿಗೋಸ್ಕರವಾಗಿ ಸ್ವಲ್ಪ ತ್ಯಾಗ ಮಾಡಿ, ಅವರಿಗೆ ಹೆಚ್ಚು ಆಹಾರ ಸಾಮಗ್ರಿಗಳನ್ನು ಒದಗಿಸುವ ಹಾಗೆ ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ಪ್ರಾರ್ಥನೆ ಮಾಡುತ್ತೇನೆ. ಈ ಕಾರ್ಯ ಸಾಧನೆಯಾಗಬೇಕಾದರೆ, ಸರ್ಕಾರದವರು ಈ ವಿಷಯದಲ್ಲಿ ತೀವ್ರತೆಯಿಂದ ಹೆಚ್ಚು ವರಮಾನ ಪಡೆಯುವವರನ್ನು ಕಂಡುಹಿಡಿದು ರೈತಾಪಿ ವರ್ಗದವರಿಗೆ ಹೊಟ್ಟೆಯ ತುಂಬ ಅನ್ನ ದೊರೆಯುವಂತೆ ಅವಕಾಶ ಮಾಡಿಕೊಡಬೇಕು. ಈಗ ಬಂದಿರತಕ್ಕ ಈ ಆಹಾರ ಅಭಾವದ ಸಮಸ್ಯೆಯನ್ನು ಬಿಡಿಸಿ ದೇಶಕ್ಕೆ ಬಂದಿರುವ ಈ ವಿಪತ್ತನ್ನು ಪಾರು ಮಾಡುವುದಕ್ಕೆ ಅವಕಾಶ ಮಾಡಬೇಕು. ಇದಕ್ಕೆ ಸರಕಾರದವರು ನೆರವಾಗಬೇಕು, ಮತ್ತು ಹೆಚ್ಚು ಸಂಪಾದನೆ ಇರತಕ್ಕ ಮಹನೀಯರು ನೆರವಾಗಬೇಕು ಎಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ

ಅಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).--ಮಾನ್ಯ ಅಧ್ಯಕ್ಷರೇ, ಈಗಾಗಲೇಅನೇಕ ಮಾನ್ಯ ಸದಸ್ಯರುಗಳು ಈ ಆಹಾರ ಸಮಸ್ಯೆಯ ಮೇಲೆ ಅನೇಕ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ ಈ ಸಂಬಂಧದಲ್ಲಿ ಈ ಹಿಂದೆ ಮಾನ್ಯ ರೆವಿನ್ಯೂ ಮಂತ್ರಿಗಳವರು ಮಾಡಿದಂಥಭಾಷಣವನ್ನೂ ಕೂಡ ಕೇಳಿದ್ದೇನೆ. ಆದರೆ ಕೆಲವರು ಈ ಸಮಸ್ಯೆಯನ್ನು ಕೇವಲ ಒಂದು ದೃಷ್ಟಿ ಕೋನದಿಂದ ಮಾತ್ರ ನೋಡುತ್ತಿರುವಹಾಗೆ ನನಗೆ ಭಾಸವಾಗುತ್ತಿದೆ. ಈ ಆಹಾರದ ಕೊರತೆ ಈ ದಿವಸ ನಮಗೆ ಕೇವಲ ಮಳೆಯೊಂದು ಬಾರದಿರುವುದರಿಂದ ಉಂಟಾಗಿದೆ ಎನ್ನತಕ್ಕ ಒಂದು ಭಾವನೆ ಅವರಲ್ಲಿ ಮೂಡಿರುವಂತೆ ಕಾಣಬರುತ್ತಿದೆ. ಬಹುಶಃ ಸರ್ಕಾರದವರ ಭಾವನೆ ಕೂಡ ಹೀಗೆಯೇ ಇರುವಂತೆ ನನಗೆ ಕಂಡುಬಂದಿತು. ಏತಕ್ಕೆಂದರೆ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ ಹೇಳಿಕೆಯನ್ನು ನೋಡಿದರೆ ಅದರಲ್ಲಿ ಕೇವಲ ಅಲ್ಲಲ್ಲೆ ಹೆಚ್ಚು ಫೇರ್-ಪ್ರೈಸ್ ಡಿಪೋಗಳನ್ನು ತೆರೆಯುಳುವ ಮತ್ತು ಕ್ಷಾಮ ನಿವಾರಣೆ ಕಾರ್ಯಕ್ರಮಗಳನ್ನು ಅಲ್ಲಲ್ಲೆ ಕೈಗೊಳ್ಳಲಿರುವ ವಿಚಾರಗಳನ್ನು ಮಾತ್ರ ಅವರು ತಿಳಿಸಿರುವಂತೆ ಕಂಡುಬಂದಿತು. ಆದರೆ ಈ ಸಮಸ್ಯೆಯು ಅಷ್ಟು ಮಾತ್ರದಿಂದಲೇ ಪರಿಹಾರವಾಗತಕ್ಕದಲ್ಲ. ಇನ್ನೂ ಗಾಢವಾಗಿ ಪರಿಶೀಲನೆ ಮಾಡಬೇಕಾಗಿರುವಂಥ ಒಂದು ಸಮಸ್ಯೆಯಾಗಿದೆ ಇದು. ಆದರೆ ಈ ಮೊದಲು ಸರ್ಕಾಗದವರು ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುವ ಮುನ್ನ ಈ ಬಗ್ಗೆ ಕಲವು ಅಂಕೀ ಅಂಶಗಳನ್ನು ಹಾಗೂ ಇವರಿಂದ ದೇಶದಲ್ಲಿ ಇದರ ಸುಧಾರಣೆಯ ಬಗ್ಗೆ ಕೈಗೊಂಡಿರುವಂಥ ಕಾರ್ಯಕ್ರಮಗಳೇನು ಎನ್ನುವುದನ್ನೆಲ್ಲಾ ಈ ಸಭೆಯಮುಂದೆ ಇಟ್ಟಿದ್ದರೆ ಆಗ ಇದರಮೇಲೆ ಚರ್ಚೆ ನಡೆಸಲು ಮತ್ತಷ್ಟು ಅನುಕೂಲವಾಗುತಿತ್ತು. ಆದರೆ ಈಗ ಸರ್ಕಾರದವರು ಕೊಟ್ಟಿರತಕ್ಕಂಥ ಒಂದು ಹೇಳಿಕೆಯೇನಿದೆಯೋ ಅದರ ಧೋರಣೆಯನ್ನು ನೋಡಿದರೆ ಏನೋ ಕೆಲವು ವಿಚಾರಗಳನ್ನು ಸದಸ್ಯರಿಗೆ ತಿಳಿಸಿ ಅವರಿಗೆಲ್ಲ ಒಂದು ಸಮಾಧಾನ ಮಾಡುವಂತೆ ಮಾಡಬೇಕೆಂಬ ನಿರೀಕ್ಷಣೆಯಲ್ಲಿ ಅವರಿದ್ದಾರೆಂದು ಕಂಡುಬರುತ್ತಿದೆ. ಆದರೆ ಈ ಒಂದು ಸಮಸ್ಯೆ ಕೇವಲ ಮಳೆ ಬಾರದ್ದರಿಂದ ಉಂಟಾಗಿದೆ ಎನ್ನುವ ಭಾವನೆ ಸರಿಯಾದದ್ದಲ್ಲ. ಅದು ಹೊರಟು ಹೋಗಬೇಕು. ಈ ದಿವಸ ನಮ್ಮ ದೇಶದ ಆಹಾರ ಪರಿಸ್ಥಿತಿ ಈ ಮಟ್ಟಕ್ಕೆ ಬರಲು ಕಾರಣವೇನು ? ಈ ಸ್ವರೂಪ ತಾಳಲು ಏನು ಕಾರಣ ? ಬೆಳೆಗಳೆಲ್ಲಾ ಹೀಗೆ ಏರುತ್ತಿವೆ ಎಂಬುದನ್ನು ಚೆನ್ನಾಗಿ ಪರಿಶೀಲನೆ ಮಾಡಬೇಕಾಗಿದೆ. ಆದರೆ ಜನರು ಈ ತೊಂದರೆಗಳನ್ನು ಹೇಳಿ, ಹೆಚ್ಚು ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಲು ಕೇಳಿರಬಹುದು. ಆದರೆ ಹಾಗೆ ಕೇವಲ ಫೇರ್‌ಪ್ರೈಸ್ ಡಿಪೋಗಳನ್ನು ತೆರೆದ ಮಾತ್ರಕ್ಕೆ ಈ ಸಮಸ್ಯೆ ಬಗೆಹರಿದಂತೆ ಆಗಲಿಲ್ಲ. ಆದರೆ ಮಳೆಯೊಂದು ಬಾರದಿದ್ದುದಕ್ಕಾಗಿ ಧಾನ್ಯವಾಸಿಗಳ ಬೆಲೆ ಇಷ್ಟೇಕೆ ಏರಬೇಕು ? ಆದರೆ ನಮ್ಮ ಸರ್ಕಾರದವರು ಒದಗಿಸಿರತಕ್ಕ ಅಂಕಿ ಅಂಶಗಳನ್ನು ಗಮನಿಸಿದರೆ ಧಾನ್ಯವಾಸಿಗಳ ಬೆಲೆ ಇಷ್ಟೊಂದು ಜಾಸ್ತಿಯಾಗುವುದಕ್ಕೆ ಕಾರಣವೇ ಇಲ್ಲ. ಹಾಗಿದ್ದರೂ ಧಾರಣೆವಾಸಿಗಳೇಕೆ ಇನ್ನೂ ಇಳಿಯಲೇ ಇಲ್ಲವಲ್ಲ ಎಂಬ ಅನುಮಾನ ನನಗೆ ಉಂಟಾಗಿದೆ. ಆದುದರಿಂದ ನಾವೀದಿನ ಕೇವಲ ನಮ್ಮ ಮುಂದಿರತಕ್ಕ ಅಂಕೀ ಆಂಶಗಳಿಂದಲೇ ಒಂದು ಸಮಾಧಾನ ಪಟ್ಟುಕೊಳ್ಳುವಂಥ ಸ್ಥಿತಿಯಲ್ಲಿ ನಾವಿಲ್ಲ. ಆದರೆ ಆಗಲೇ ಮಂತ್ರಿಗಳು ಅಲ್ಲೊಲ್ಲೋ ಒಂದುಕಡೆ ಧಾರಣೆವಾಸಿಗಳಲ್ಲಿ ಯಾವುದೋ ಒಂದು ಆಹಾರ ಸಾಮಗ್ರಿಯ ಬೆಲೆ ಎಂಟಾಣೆಗಳವರೆಗೂ ಇಳಿದು ಹೋಗಿದೆಯೆಂದು ಅಪ್ಪಣೆಕೊಡಿಸಿದರು. ಆದರೆ ಅಂಥ ಎಂಟಾಣೆ ಅಥವಾ ಒಂದು ರೂಪಾಯಿ ಬೆಲೆಯಲ್ಲಿ ಇಳಿದರೆ ಅದರಿಂದ ಕೊಳ್ಳತಕ್ಕ ಜನರಿಗೆ ಯಾವದೃಷ್ಟಿಯಿಂದಲೂ ಅನುಕೂಲವಾಯಿತೆಂದು ಹೇಳುವುದಕ್ಕಾಗುವುದಿಲ್ಲ. ಮೇಲಾಗಿ ನಮ್ಮ ಆಹಾರದ ಕೊರತೆ ನಿವಾರಣೆ ಆಯಿತೆಂದು ಭಾವಿಸಲು ಎಂದಿಗೂ ಸಾಧ್ಯವಿಲ್ಲ. ಹೀಗೊಂದು ವೇಳೆ ನಾವು ಮನಸ್ಸಿಗೊಂದು ಸಮಾಧಾನ ಹೇಳಿಕೊಂಡರೆ ಮುಂದೆ ದೇಶದ ಗತಿ ಏನಾಗುತ್ತದೋ ಅದು ನನಗೆ ಅರ್ಥವಾಗುತ್ತಿಲ್ಲ. ಮೇಲಾಗಿ ಈ ದಿವಸ ದೇಶಾದ್ಯಂತವೂ ಪರಿಸ್ಥಿತಿಗಳು ಒಂದೇ ಸಮನಾಗಿರುತ್ತವೆಯೇ ಎಂಬುದನ್ನೂ ನಾವು ಪರಿಶೀಲನೆ ಮಾಡಬೇಕು. ಆದ್ದರಿಂದ ಈ ಪ್ರಶ್ನೆಯನ್ನು ನಾವೆಲ್ಲರೂ ದೀರ್ಘವಾಗಿ ಪರ್ಯಾಲೋಚನೆ ಮಾಡಬೇಕಾಗಿದೆ. ಈ ದಿವಸ ನಮ್ಮ ದೇಶದ ಆಹಾರಭಾವ ಪರಿಸ್ಥಿತಿಗೆ ಮಳೆಯೊಂದೇ ಕಾರಣವಲ್ಲ; ಇನ್ನೂ ಅನೇಕ ಕಾರಣಗಳಿವೆ. ಆದರೆ ಅನೇಕರು ಅನೇಕ ತರ್ಕಗಳನ್ನು ಹೂಡಿ ಈ ಪರಿಸ್ಥಿತಿಗೆ ಮಿಕ್ಸೆಡ್ ಎಕಾನಮಿ, ಇನ್‌ಫ್ಲೇಷನ್ ಇತ್ಯಾದಿ ಅನೇಕ ವಾದಗಳನ್ನು ಎತ್ತುತ್ತಾರೆ; ಮತ್ತು ಇವೇ ಕಾರಣಗಳೆಂದು ಜಸ್ಟಿಫೈ ಮಾಡುವುದಕ್ಕೂ ಪ್ರಯತ್ನಪಡುತ್ತಾರೆ. ಆದರೆ ಈ ಪ್ರಯತ್ನಗಳಿಂದೆಲ್ಲಾ ನಮ್ಮ ಈ ಸಮಸ್ಯೆ ಬಗೆ ಹರಿಯುವುದಿಲ್ಲ. ಆದ್ದರಿಂದ ಮುಂದೇನು ಕೆಲಸ ಕಾರ್ಯಗಳನ್ನು ನಾವು ಕೈಗೊಳ್ಳಬೇಕೆಂಬುದನ್ನೀಗ ನಾವು ಪರಿಶೀಲನೆ ಮಾಡಬೇಕಾಗಿದೆ. ಧಾರಣೆವಾಸಿಗಳು ಹೆಚ್ಚಾಗಿರುವುದಕ್ಕೆ ಅನೇಕ ಕಾರಣಗಳುಂಟು. ಆದರೆ ಈಗಾಗಲೇ ಕೆಲವು ಸದಸ್ಯರುಗಳು ಹೇಳಿದಹಾಗೆ ಈ ದಿವಸ ರೈತನು ಬಳಸಬೇಕಾದ ವಸ್ತುಗಳು ಬೆಲೆಯಲ್ಲಿ ಏರುತ್ತಿರುವುದರಿಂದ ರೈತನು ತಾನು ಬೆಳೆದ ಧಾನ್ಯಗಳಿಗೂ ಸಹ ಬೆಲೆಯನ್ನು ಜಾಸ್ತಿ ಮಾಡದಿದ್ದರೆ ಸಾಧ್ಯವೇ ಇಲ್ಲ. ಅದರಿಂದ ಆಹಾರ ಸಾಮಗ್ರಿಗಳ ಬೆಲೆ ಹೀಗೆ ಜಾಸ್ತಿ ಆಗಿದೆ ಎಂದು ಹೇಳಿದ್ದಾರೆ. ಇದೂ ಸಹ ಒಂದು ಕಾರಣವಿರಬಹುದು. ಆದರೆ ಸರ್ಕಾರದವರು ಈ ಎಲ್ಲ ವಸ್ತುಗಳ ಧಾರಣೆಯನ್ನೂ ಎಲ್ಲಿಯವರೆಗೂ ಒಂದು ಹತೋಟಿಗೆ ತರುವುದಿಲ್ಲವೋ ಅಲ್ಲಿಯವರೆಗೂ ಇದನ್ನು ನಿವಾರಣೆ ಮಾಡಲು ಕಷ್ಟವಿದ್ದೇ ಇರುತ್ತದೆ. ಈ ವಿಚಾರದಲ್ಲಿ ಸರ್ಕಾರವಾಗಲಿ ಅಥವಾ ಈ ಸಭೆಯಾಗಲಿ ಅಷ್ಟು ಗಮನ ಕೊಟ್ಟಹಾಗೆ ಕಾಣುತ್ತಿಲ್ಲ. ಈಗ ದೇಶದಲ್ಲಿರತಕ್ಕ ಬ್ಯಾಂಕುಗಳು ಸುಗ್ಗಿಯ ಕಾಲದಲ್ಲಿ ವರ್ತಕರಿಗೆ ಧಾನ್ಯಗಳನ್ನು ಕೊಂಡು ಶೇಖರಣೆ ಮಾಡಲು ದುಡ್ಡನ್ನು ಕೊಡುತ್ತಾರೆ. ಸರ್ಕಾರದವರೂ ಕೂಡ ಈ ಬಗ್ಗೆ ಸಾಲ ಕೊಡುತ್ತಿರಬಹುದು. ಆದರೆ ಕೆಲವು ಸಾರ್ಥಿ ಏಕಾಏಕಿ ಮೊಟಕು ಮಾಡಿಬಿಡುತ್ತಾರೆ. ಆದರೆ ಈ ಪ್ರಶ್ನೆಯನ್ನು ಒಂದು ಜವಾಬ್ದಾರಿ ಮಟ್ಟದಲ್ಲಿ ತೀರ್ಮಾನ ಮಾಡಬೇಕಾಗಿದೆ. ಇಲ್ಲವೇ ಈ ರೀತಿ ಬ್ಯಾಂಕುಗಳು ಸಾಲ ಕೊಡಲೇಕೂಡದೆಂದಾದರೂ ತೀರ್ಮಾನ ಮಾಡಲಿ. ಇಲ್ಲವೇ ಸಾಲ ಕೊಟ್ಟರೆ ಯಾವ ನಿಬಂಧನೆಗಳನ್ನು ಅನುಸರಿಸಬೇಕೆಂಬುದನ್ನಾದರೂ ಒಂದು ನಿರ್ಧರಮಾಡಲಿ. ಹಾಗಿಲ್ಲದೆ ಮೊದಲು ಸಾಲಕೊಟ್ಟು ಅನಂತರ ಇಂಥ ಪರಿಸ್ಥಿತಿ ಬಂದಾಗ ಆತನಲ್ಲಿರುವ ಆಹಾರವನ್ನೆಲ್ಲಾ ಬಲವಂತದಿಂದ ಕಿತ್ತು ಈಚೆಗೆ ಒಗೆಯುವುದೆಂದರೆ ಅದು ಸರಿಯಾಗಿಲ್ಲ. ಅಥವಾ ಇನ್ನು ಮೇಲೆ ಈ ಧಾನ್ಯ ಶೇಖರಣೆಯಬಗ್ಗೆ ಯಾವ ಬ್ಯಾಂಕುಗಳೂ ಹಣವನ್ನು ಕೊಡಬಾರದೆಂದು ಮಾಡಿ, ಈ ಕಾರ್ಯವನ್ನು ಕೆಲವು ಕೋ-ಆಪರೇಟೀವ್ ಸೊಸೈಟಿಗಳ

(ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್)

ಮೂಲಕವಾದರೂ ನಡೆಸಿ. ಆಹಾರ ಸಾಮುಗ್ರಿಗಳನ್ನು ಇವುಗಳು ಸುಗ್ಗಿಯಕಾಲದಲ್ಲಿ ಕೊಂಡು ದಾಸ್ತಾನು ಮಾಡುವಂತೆ ಒಂದು ವ್ಯವಸ್ಥೆಯನ್ನಾದರೂ ಮಾಡಬೇಕು. ಆದರೆ ಈ ಸೊಸೈಟಿಗಳಿಗೆ ಹೆಚ್ಚಿನ ಮಟ್ಟದಲ್ಲಿ ಅಧಿಕ ಪ್ರಮಾಣದಲ್ಲಿ ಧಾನ್ಯಗಳನ್ನು ದಾಸ್ತಾನು ಮಾಡಲಿಕ್ಕೆ ಆಗದಿದ್ದರೂ ಅಷ್ಟಿಷ್ಟನ್ನಾದರೂ ಮಾಡಲು ಒಂದು ಅವಕಾಶವಾಗುತ್ತದೆ. ಇದರಿಂದ ಹೆಚ್ಚಿನ ಅನುಕೂಲ ಉಂಟು. ಆದರೆ ಈ ಸಮಸ್ಯೆಯನ್ನು ನೋಡಬೇಕಾದ ಮತ್ತೊಂದು ದೃಷ್ಟಿ ಏನೆಂದರೆ, ಈ ದಿವಸ ರೈತನಾದವನು ಮಳೆ ಬಾರದಿದ್ದುದರಿಂದಲೇ ಇಷ್ಟೊಂದು ತಲ್ಲಣಿಸಿ ಹೋಗಬೇಕಾಗಿತ್ತೇ ಎಂಬುದಾಗಿ ಆಲೋಚನೆ ಮಾಡಿದರೆ ಅದಕ್ಕೆ ಮಳೆಯೊಂದೇ ಕಾರಣವಲ್ಲವೆಂಬುದಾಗಿ ಕಂಡು ಬರುತ್ತದೆ. ಈ ದಿವಸ ದಿನಬಳಕೆಗೆ ಬೇಕಾದಂಥ ವಸ್ತುಗಳ ಬೆಲೆ ವಿಪರೀತವಾಗಿ ಹೆಚ್ಚಿ ಹೋಗಿದೆ. ಇದಕ್ಕೆ ಕಾರಣ ಈ ದಿವಸ ಗಿರಣಿಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕ ವರ್ಗ ಹೆಚ್ಚು ಸಂಬಳ ಸಾರಿಗೆಗಳನ್ನು ಕೊಡಬೇಕೆಂದು ಕೇಳುತ್ತಿದೆ. ಅದಕ್ಕೆ ಆಡಳಿತ ವರ್ಗದವರೂ ಮತ್ತು ಸರ್ಕಾರದವರೂ ಅವರಿಗೆ ಮುಷ್ಕರಗಳನ್ನು ಮಾಡಬೇಡಿ ಎಂದು ಹೇಳುತ್ತಿದ್ದೀರೇ ಹೊರತು ಅವರಿಗೆ ಒಂದು ನ್ಯಾಯ ದೊರಕಿಸಿಲ್ಲ. ಈ ದಿವಸ ಅವರಿಗೆ ಕೊಡುತ್ತಿರುವ ಕೂಲಿಗೂ ದೇಶದಲ್ಲಿ ಉಂಟಾಗಿರತಕ್ಕ ಈ ಆಹಾರ ಪರಿಸ್ಥಿತಿಗೂ ಹೋಲಿಕೆ ಹಾಕಿ ನೋಡಿದರೆ ಒಂದಕ್ಕೊಂದಕ್ಕೆ ಏನೂ ಸಂಬಂಧವಿಲ್ಲ. ಅವರಿಗೆ ಕೊಡುತ್ತಿರುವ ಸಂಬಳ ಸಾರಿಗೆಗಳು ಏತಕ್ಕೂ ಸಾಲವು. ಅವರಿಗೆ ತೃಪ್ತಿ ಇಲ್ಲ. ಈ ಒಂದು ದೃಷ್ಟಿಯಿಂದಲೂ ನಾವೀ ಸಮಸ್ಯೆಯನ್ನು ನೋಡಬೇಕಾಗಿದೆ. ಹೀಗೆ ನಾವು ಈ ಸಮಸ್ಯೆಯನ್ನು ನಾನಾ ದೃಷ್ಟಿಗಳಿಂದ ನೋಡಿ ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಇದರಲ್ಲಿ ನಾವು ಮೊದಲು ಕೈಗೊಳ್ಳಬೇಕಾಗಿರುವ ಪ್ರಯತ್ನವೆಂದರೆ ಈ ದಿನಬಳಕೆಯ ವಸ್ತುಗಳ ಬೆಲೆಯು ಮೊದಲು ಇಳಿಯಬೇಕಾಗಿದೆ. ಅನಂತರ ಆಹಾರ ಸಾಮುಗ್ರಿಗಳ ಬೆಲೆಯನ್ನು ಇಳಿಸಬೇಕು.

ಇನ್ನು ನಮ್ಮಲ್ಲಿ ಭೂಸುಧಾರಣೆ ಜಾರಿಗೆ ಬಂದಿಲ್ಲ. ಆದರೆ ಈ ದಿವಸ ಯಾರ ಹತ್ತಿರ ಜಮೀನಿದೆಯೋ ಅದನ್ನು ಕಿತ್ತುಕೊಂಡರೆ ಅಲ್ಲಿಗೆ ಭೂಸುಧಾರಣೆಯನ್ನು ಜಾರಿಗೆ ತಂದ ಹಾಗೆ ಆಗಲಿಲ್ಲ. ಭೂಸುಧಾರಣೆ ಎಂದರೆ ಭೂಮಿಯನ್ನು ಕಿತ್ತುಕೊಳ್ಳುವುದಲ್ಲ. ಉಳತಕ್ಕವನಿಗೆ ಜಮೀನು ಒದಗಿಸಿ ದೇಶದಲ್ಲಿ ಹೆಚ್ಚು ಬೆಳೆ ತೆಗೆಯಲು ಅವಕಾಶ ಮಾಡಬೇಕೆಂಬುದೇ ಅದರ ಉದ್ದೇಶ. ಈ ದಿವಸ ಸರ್ಕಾರ ತರಲಿರುವ ಭೂಸುಧಾರಣೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ಏನೊಂದು ಪರಿಸ್ಥಿತಿ ಉಂಟಾಗಿದೆಯೆಂದರೆ ಅಲ್ಲಿ ರೈತನಿಗೆ ಸುಲಭವಾಗಿ ಸಿಕ್ಕುವಂತಿದ್ದ ಸಾಲ ಈಗ ಸಿಕ್ಕದಂತಾಗಿದೆ. ಅದರಿಂದ ರೈತನಿಗೆ ಅನುಕೂಲವಿಲ್ಲದೆ ಸರಿಯಾಗಿ ಧಾನ್ಯಗಳನ್ನು ಬೆಳೆಯಲು ಅವಕಾಶವಾಗಿಲ್ಲ. ಆದ್ದರಿಂದ ಸರ್ಕಾರದವರು ಆದಷ್ಟು ಬೇಗ ಭೂಸುಧಾರಣೆಯನ್ನು ಜಾರಿಗೆ ತಂದು ಈ ಕಷ್ಟ ಪರಿಸ್ಥಿತಿಯನ್ನು ಬೇಗ ನಿವಾರಣೆ ಮಾಡಬೇಕೆಂದು ಸೂಚಿಸುತ್ತೇನೆ. ಆದರೆ ಈ ದಿವಸ ಅಲ್ಲಲ್ಲೇ ಜಮೀನಿದ್ದವರಿಂದ ಜಮೀನನ್ನು ಕಿತ್ತುಕೊಳ್ಳುತ್ತಾರೆಂಬ ಪುಕಾರೆದ್ದಿದೆ. ಈ ರೀತಿ ತೀರ್ಮಾನವಾಗಿದೆಯೆಂಬುದಾಗಿ ವದಂತಿಗಳು ಕೇಳಿ ಬರುತ್ತಿವೆ. ಆದರೆ ಈ ದಿವಸ ನಮಗೆ ಉಂಟಾಗಿರುವ ಸಮಸ್ಯೆ ಕೇವಲ ಒಂದು ಜಿಲ್ಲೆಗಾಗಲಿ ಅಥವಾ ಒಂದು ರಾಜ್ಯಕ್ಕಾಗಲಿ ಸಂಭವಿಸಿರುವಂಥ ಪ್ರಶ್ನೆಯಲ್ಲ. ಇದನ್ನು ನಾವು ಸಮಗ್ರ ಭಾರತದ ದೃಷ್ಟಿಯಿಂದ ನೋಡಬೇಕು. ಈ ಸಮಸ್ಯೆಯನ್ನು ಬಗೆಹರಿಸಲು ಕೇವಲ ರಾಜ್ಯ ಸರ್ಕಾರಗಳೇ ಅಲ್ಲ ಕೇಂದ್ರ ಸರ್ಕಾರ ಕೂಡ ಈ ಪ್ರಶ್ನೆಗೆ ಹೆಚ್ಚು ಗಮನ ಕೊಡಬೇಕು. ಏಕೆಂದರೆ ಈ ದಿವಸ ಉತ್ತರ ದೇಶದಲ್ಲಿ ಒಂದು ಪ್ರವಾಹದ ಹಾವಳಿ ಉಂಟಾದರೆ ಅದರ ಪರಿಣಾಮ ದಕ್ಷಿಣ ದೇಶಕ್ಕೂ ಹರಡುತ್ತದೆ. ಪಶ್ಚಿಮದಲ್ಲಿ ಕಷ್ಟನಷ್ಟಗಳು ಉಂಟಾದರೆ ಅದರ ಪರಿಣಾಮ ಪೂರ್ವಕ್ಕೂ ಹರಡುತ್ತದೆ. ಆದ್ದರಿಂದ ಈ ಪ್ರಶ್ನೆಯನ್ನು ನಾವು ಕೇವಲ ಒಂದು ದೇಶದ ದೃಷ್ಟಿಯಿಂದ ನೋಡಬಾರದು. ಎಲ್ಲ ದೇಶಗಳಿಗೂ ಅನ್ವಯಿಸುವಹಾಗೆ ಒಂದು ಏಕೈಕ ದೃಷ್ಟಿಯಿಂದ ನೋಡಬೇಕು. ಈಗಾಗಲೇ ನಾವು ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ಪೂರೈಸಿ ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಕಾರ್ಯದಲ್ಲಿ ಮಗ್ನರಾಗಿದ್ದೇವೆ. ಈ ಯೋಜನೆಯಲ್ಲಿ ನಾವು ಪೂರೈಸಬೇಕಾದ ಕೆಲಸಗಳು ಇನ್ನೂ ಬಹಳವಾಗಿವೆ. ಆದರೆ ನಮ್ಮ ಪ್ರಥಮ ಪಾಂಚವಾರ್ಷಿಕ ಯೋಜನೆ ಪೂರೈಸಿದ್ದರೂ ನಮಗಿನ್ನೂ ಅದರ ಫಲ ದೊರೆಯುವಂತಿಲ್ಲ. ನಾವು ಈ ದಿವಸ ಒಂದು ಗಿಡವನ್ನು ನೆಟ್ಟರೆ ಈ ದಿವಸವೇ ನಮಗೆ ಅದು ಫಲವನ್ನು ಕೊಡಲಾರದು. ಅದಕ್ಕೆ ಒಂದು ಕಾಲ ಪರಿಮಿತಿ ಇದೆ. ಆದರೆ ನಾವು ಅದನ್ನೇ ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇಂದಿನ ಪರಿಸ್ಥಿತಿಯನ್ನು ಎದುರಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲೇಬೇಕು. ಈ ಬಗ್ಗೆ ಈಗಾಗಲೇ ಅನೇಕ ಸದಸ್ಯರು ಅನೇಕ ಸೂಕ್ತಸಲಹೆಗಳನ್ನು ಕೊಟ್ಟಿದ್ದಾರೆ. ಅದರಂತೆ ಸರ್ಕಾರ ಮುಂದುವರಿದರೆ ನಿಜವಾಗಿಯೂ ರೈತನಿಗೆ ತುಂಬ ಅನುಕೂಲವಾಗುತ್ತಬೆ. ಆದರೆ ಅದೇ ಮಟ್ಟದಲ್ಲಿ ರೈತನಿಗೆ ಬೇಕಾದ ಸಾಮಾನುಗಳ ಬೆಲೆಯೂ ಸಹ ತಗ್ಗುವಂತೆ ಸರ್ಕಾರ ಒಂದು ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳಬೇಕು. ಆಗ ಇನ್ನೂ ಅನುಕೂಲವಾಗುತ್ತದೆ. ಹೀಗೆ ಈ ಎರಡು ದೃಷ್ಟಿಗಳಿಂದ ಈ ಸಮಸ್ಯೆಯನ್ನು ಪರಿಶೀಲನೆ ಮಾಡಿ ಸೂಕ್ತ ಕಾರ್ಯಕ್ರಮಗಳನ್ನು ಬೇಗ ಕೈಗೊಳ್ಳಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

The House adjourned for Lunch at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair]

*ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಮಾನ್ಯ ಅಧ್ಯಕ್ಷರೇ, ಸಂಸ್ಥಾನದ ಆಹಾರ ಪರಿಸ್ಥಿತಿಯ ವಿಚಾರವಾಗಿ ಹಲವಾರು ವರ್ಷಗಳಿಂದ ಈ ಸಭೆಯಲ್ಲಿ ಚರ್ಚೆ ನಡೆಯುತ್ತಲೇ ಇದೆ. ಈಗ ಒಂದೂವರೆ ವರ್ಷಗಳ ಹಿಂದೆ ಹಳೆಯ ಮೈಸೂರಿನಲ್ಲಿ ಕೆಲವು ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಬಂದು ಒದಗಿತ್ತು. 1952-53ರಲ್ಲಿ ಇನ್ನೇನು ಭೀಕರ ಕ್ಷಾಮಪರಿಸ್ಥಿತಿ ದೇಶದಲ್ಲೆಲ್ಲ ಬಂತು ಎನ್ನುವಂತಹ ಪರಿಸ್ಥಿತಿ ಕೂಡ ಇತ್ತು. ಆಗಲೂ ಸಹ ಈ ಸಭೆಯಲ್ಲಿ ಬಹಳ ವಿಪುಲವಾದ ಚರ್ಚೆ ಈ ಆಹಾರದ ಪರಿಸ್ಥಿತಿ ವಿಷಯದಲ್ಲಿ ಆಯಿತು. ಆದರೆ ಈ ಪರಿಸ್ಥಿತಿಯನ್ನು ಕೆಲವು ಕಾಲ ಸುಧಾರಿಸಲು ವಿಪರೀತವಾಗಿ ಯೋಜನೆಗಳನ್ನು ಹಾಕುವುದೂ ಆಗಿತ್ತು. ಇದಕ್ಕೆ ಕಾರಣ ಮಳೆ ಸರಿಯಾಗಿ ಬಾರದಿರುವುದು. ಮಳೆಯನ್ನೇ ನಂಬಿ ವ್ಯವ

ಸಾಯ ಮಾಡತಕ್ಕ ರೈತನಿಗೆ ತಾನು ಪಡತಕ್ಕ ಕಷ್ಟಕ್ಕೆ ತಕ್ಕ ಫಲ ಬಾರದೆ ಹೋಗುವ ದೆಸೆಯಿಂದ. ಕಳೆದ ವರ್ಷ ಅಥವಾ ಒಂದೂವರೆ ವರ್ಷಗಳ ಹಿಂದೆ, ಮೈಸೂರು ಜಿಲ್ಲೆಯಲ್ಲಿ ಕ್ಷಾಮ ಬಂತು. ಆಗ ಸರಕಾರದವರು ಹತ್ತಾರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಪರಿಹಾರ ಕಾಮಗಾರಿಗಳನ್ನು ನಡೆಸಿದರು. ಆಮೇಲೆ ಮಳೆಬಿತ್ತು. ಅಲ್ಪ ಸ್ವಲ್ಪ ಬೆಳೆಯೂ ಬಂದಿತು. ಬೆಳೆ ಬಂದ ಮೇಲೆ ತನ್ನ ಪಾಲಿನ ಕಾರ್ಯವನ್ನು ತಾನು ಮಾಡಿದ್ದೇನೆ ಎನ್ನುವ ಮನೋಭಾವನೆ ಸರಕಾರಕ್ಕೆ ಬಂದಿತೋ ಏನೋ ಎಂದಂತಾಗಿದೆ. ಒಂದೂವರೆ ವರ್ಷಗಳ ಹಿಂದೆ ಚರ್ಚೆಯಾದಾಗ ಮೈಸೂರು ಜಿಲ್ಲೆಯಲ್ಲಿ ಅನೇಕ ಕಾಮಗಾರಿಗಳನ್ನು ಮಾಡಬೇಕು, ಅಂತಹ ಬಿಕ್ಕಟ್ಟಿನ ಪರಿಸ್ಥಿತಿ ಬಂದಾಗ ರೈತರಿಗೆ ಅನುಕೂಲವಾಗುವಂತಹ ಕಾಮಗಾರಿಗಳನ್ನು ಕೈಗೊಳ್ಳಬೇಕು ಎನ್ನುವಂತಹ ಚರ್ಚೆ ನಡೆಯಿತು. ಈ ಒಂದೂವರೆ ವರ್ಷದ ಕಾಲದಲ್ಲಿ ಯಾವ ಯೋಜನೆಯನ್ನೂ ಕೈಗೊಂಡಂತೆ ಕಾಣಿಸಲಿಲ್ಲ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿ ಬಂದಾಗ, ಮತ್ತು ಅಭಾವದ ಪರಿಸ್ಥಿತಿ ಬಂದಾಗ ನಮಗೇನು ಕಾಣಿಸುತ್ತಿದೆ ಎಂದರೆ, ಅಲ್ಲಷ್ಟು, ಇಲ್ಲಷ್ಟು ಪರಿಹಾರದ ಕಾರ್ಯಗಳನ್ನು ಮಾಡುವುದರಿಂದ ನಾವು ನಮ್ಮ ಪಾಲಿನ ಕಾರ್ಯವಾಯಿತು ಎನ್ನುವ ಮನೋಭಾವನೆ ಸರಕಾರಕ್ಕೆ ಬಂದಿತ್ತೋ ಏನೋ ಎನ್ನುವ ಸಂಶಯ ನನಗುಂಟಾಗಿದೆ. ಎಲ್ಲಿ ಯಾವ ಭಾಗದಲ್ಲಿ ಇಂತಹ ಅಭಾವದ ಪರಿಸ್ಥಿತಿಗೆ ಈಡಾಗುತ್ತಿದೆಯೋ ಆ ಭಾಗದಲ್ಲೆಲ್ಲ ಮನುಷ್ಯನಿಂದ ಸಾಧ್ಯವಾದ ಎಲ್ಲ ಕೆಲಸಗಳನ್ನೂ ಮಾಡಿ ಎಲ್ಲ ಕಾರ್ಯಗಳನ್ನೂ ಮಾಡಿ ಈ ರೀತಿ ಮುಂದೆ ತೊಂದರೆ ಬಾರದಂತೆ ಮಾಡಬೇಕಾದುದು ನಮ್ಮ ಕರ್ತವ್ಯ. ಮೈಸೂರು ಜಿಲ್ಲೆಯಲ್ಲಿ ಪದೇ ಪದೇ ಈ ಅಭಾವದ ಪರಿಸ್ಥಿತಿ ಬರುತ್ತಲೇ ಇದೆ. ಅಲ್ಲಿ ಹೆಚ್ಚು ನದಿಗಳಿಲ್ಲ. ಅಲ್ಲಲ್ಲೆ ಹಳ್ಳಕೊಳ್ಳಗಳಿವೆ. ಈ ವರ್ಷದಲ್ಲೆ ಕೆಲವು ಹಳ್ಳಗಳಿಗೆ ಅಣೆಯನ್ನು ಹಾಕಿ ಅದರಿಂದ ಕೆರೆಯನ್ನು ಕಟ್ಟಿದರೆ ಸಹಸ್ರಾರು ಎಕರೆ ಜಮೀನನ್ನು ವ್ಯವಸಾಯಕ್ಕೆ ಅನುಕೂಲವಾಗುವಂತೆ ತರುವ ಅವಕಾಶವಿದೆ. ಅನೇಕ ವೇಳೆ ಈ ವಿಷಯದಲ್ಲಿ ಪರಿಶೀಲನೆ ಕೂಡ ನಡೆದಿದೆ. ಆದರೆ ಅದಕ್ಕೆ ಆಗುವ ವೆಚ್ಚಕ್ಕೂ ಮತ್ತು ಅದರಿಂದ ಬರತಕ್ಕ ಬೆಳೆಗೂ ಬರುವ ಉತ್ಪನ್ನಕ್ಕೂ ಸರಿಯಾಗುವುದಿಲ್ಲ. ಉತ್ಪನ್ನ ಸಾಕಷ್ಟು ಬರುವುದಿಲ್ಲವೆಂಬ ಕಾರಣದಿಂದ ಇಲ್ಲಿ ಅನೇಕ ಕಾಮಗಾರಿಗಳನ್ನು ಕೈಗೆ ತೆಗೆದುಕೊಳ್ಳಬೇಕೆಂದು ಕಾರ್ಯವೂ ನಡೆದಿದೆ. ಸ್ವಾಮೀ, ಇಲ್ಲೆ ಒಂದು ವಿಚಾರವನ್ನು ಆಲೋಚನೆ ಮಾಡಬೇಕು. ಕೆಲವು ಭಾಗಗಳನ್ನು ಅಭಾವದಿಂದ ಮತ್ತು ಈ ಕ್ಷಾಮದ ದವಡೆಯಿಂದ ರಕ್ಷಣೆ ಮಾಡಬೇಕಾದರೆ ನಾವು ಬೇರೆ ಭಾಗಗಳಿಗೆ ಯಾವ ಒಂದು ಅಳತೆ ಕೋಲನ್ನು ಇಟ್ಟುಕೊಳ್ಳುತ್ತಿದ್ದೇವೆಯೋ ಅದೇ ಅಳತೆ ಕೋಲಿನಿಂದ ಈಗ ಕಾಮಗಾರಿಗಳನ್ನು ಕೈಗೊಳ್ಳುವುದಾಗಲಿ, ಬಿಡುವುದಾಗಲಿ ಮಾಡುವುದು ಸರಿಯಲ್ಲ ಎಂದು ನನ್ನ ಭಾವನೆ. ಎಷ್ಟೋ ಕಡೆ ಇಲ್ಲಿ ಕ್ಷಾಮ ಬಂದಾಗಲೆಲ್ಲ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದಾಗ್ಯೂ ಕೂಡ ಅಲ್ಲಿ ಇಲ್ಲಿ ಸಣ್ಣ ಸಣ್ಣ ರಸ್ತೆಗಳನ್ನು ಮಾಡಿದ್ದಾರೆ. ಅದರಲ್ಲಿಯೂ ಮಣ್ಣಿನ ಕೆಲಸ ಮಾಡುವುದಕ್ಕೆ ಇದನ್ನು ಉಪಯೋಗಿಸಬೇಕಾಗಿದೆ. ಸರಕಾರದವರು ಕಳೆದ ವರ್ಷ ಬಹಳ ಉದಾರಭಾವದಿಂದ ಹತ್ತು ಲಕ್ಷ ರೂಪಾಯಿಗಳಿಗೂ ಮೇಲ್ಪಟ್ಟು ಹಣವನ್ನು ಖರ್ಚು ಮಾಡಿದರು. ಹೀಗೆ ಹತ್ತು ಲಕ್ಷ ರೂಪಾಯಿಗಳಿಗೂ ಮೇಲ್ಪಟ್ಟು ಹಣವನ್ನು ಖರ್ಚು ಮಾಡಿದ್ದರೂ ಅಲ್ಲಲ್ಲೆ ಈ ರಸ್ತೆಗಳ ಮಣ್ಣಿನ ಕೆಲಸವನ್ನು ಮಾಡುವುದಕ್ಕೆ ಮುಕ್ಕಾಲು ಪಾಲು ಹಣ ಖರ್ಚಾಯಿತು. ಹಾಗೆ ಖರ್ಚಾದ ರಸ್ತೆಗಳಲ್ಲಿ ಮಳೆ ಬಿದ್ದ ಕಾಲದಲ್ಲಿ ನೀರಿನ ಕೋಡಿಯಾಗಿ ಹಿಂದೆ ಆ ರಸ್ತೆಗಳು ಯಾವ ಸ್ಥಿತಿಯಲ್ಲಿದ್ದವೋ ಅದೇ ಸ್ಥಿತಿಯಲ್ಲಿ ಈಗಲೂ ಇವೆ. ಏತಕ್ಕೆ ಹೀಗೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ಈ ರೀತಿಯಾದ ಪರಿಹಾರ ಕ್ರಮವನ್ನು ಮಾಡುವುದು ಸರಿಯಲ್ಲ ಎನ್ನುವ ಭಾವನೆಯಿಂದ ಹೇಳುತ್ತಿಲ್ಲ. ಕ್ಷಾಮ ಬಂದಾಗಲೆಲ್ಲ ಈ ರೀತಿಯಾದ ಪರಿಹಾರದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾದುದು ಅಗತ್ಯ. ಅದಕ್ಕಾಗಿ ಸರಕಾರದವರು ಅಭಿನಂದನೀಯರು. ಆದರೆ ಹತ್ತಾರು ಲಕ್ಷ ರೂಪಾಯಿಗಳನ್ನು ನಾವು ಒಂದು ರಕ್ಷಣೆಯ ಕಾರ್ಯಕ್ಕೆ ಉಪಯೋಗಿಸಿದರೆ ಬರಬಹುದಾದಂತಹ ಕ್ಷಾಮವನ್ನು, ಬರಬಹುದಾದಂತಹ ಅಭಾವದ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕಾಗಿ ಉಪಯೋಗಿಸಿದರೆ ಅದರಿಂದ ಹೆಚ್ಚಿನ ಪ್ರತಿಫಲ ದೊರೆಯುತ್ತದೆ. ಇದನ್ನೆಲ್ಲ ಗಮನದಲ್ಲಿ ಇಟ್ಟುಕೊಂಡು ಸರಕಾರದವರು ಮೈಸೂರು ಜಿಲ್ಲೆಯಲ್ಲಿ ಇಟ್ಟುಕೊಂಡಿರತಕ್ಕ ಯೋಜನೆ ಗಳಲ್ಲಿ ಅನೇಕ ಯೋಜನೆಗಳನ್ನು ಈಗಾಗಲೇ ಪರಿಶೀಲನೆ ಮಾಡಿರುವುದನ್ನು ಕೂಡಲೇ ಕೈಗೊಳ್ಳಬೇಕಾದುದು ಅಗತ್ಯ.

ಸ್ವಾಮಿ, ಉದಾಹರಣೆಗೆ ಹೇಳುವುದಾದರೆ ಚಾಮರಾಜನಗರ ತಾಲ್ಲೂಕಿನಲ್ಲಿರುವ ಚಿಕ್ಕಹೊಳೆ ಪ್ರಾಜೆಕ್ಟಿನ ವಿಷಯವಾಗಿ ಒಂದು ಪ್ರಶ್ನೆಯನ್ನು ಕೇಳಿದಾಗ ಸುಮಾರು 26 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತದೆ ಎಂದು ಹೇಳಿದ್ದಾರೆ. ಮೈಸೂರು ದೇಶದಲ್ಲಿ ಇದುವರೆಗೂ ಆಗಿಂತಕ್ಕ ಅನೇಕ ದೊಡ್ಡ ನೀರಾವರಿ ಕಾಮಗಾರಿಗಳನ್ನು ಪರಿಶೀಲನೆ ಮಾಡಿದರೂ ಕೂಡ ಎಕರೆ ಒಂದಕ್ಕೆ 1,200 ರೂಪಾಯಿಗಳವರೆಗೆ ಖರ್ಚಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ಕೆರೆಗಳನ್ನು ನೋಡಿದರೆ ಅಲ್ಲಿ ಎಕರೆ ಒಂದಕ್ಕೆ 1,200 ಕ್ಕೂ ಮೇಲ್ಪಟ್ಟು ಖರ್ಚು ತಗಲಿದೆ.

ಒಂದು ಖುಷ್ಕಿ ಜಮೀನು ತರಿ ಆಗಬೇಕಾದರೆ ಕೆರೆ ಕಟ್ಟಲು ಖರ್ಚುಮಾಡಿರುವುದನ್ನು ಲೆಕ್ಕಹಾಕಿದರೆ ಕೆಲವು ವೇಳೆ ಒಂದು ಎಕರೆಗೆ 200 ಕ್ಕಿಂತಲೂ ಮೇಲ್ಪಟ್ಟು ಖರ್ಚು ಆಗುತ್ತದೆ. ಆದ್ದರಿಂದ ಅಭಾವ ಪರಿಸ್ಥಿತಿ ಬರುವ ಭಾಗದಲ್ಲಿ ನಾವು ಆ ರೀತಿ ಆಲೋಚನೆ ಮಾಡಿದ್ದೇ ಆದರೆ, ಅದಕ್ಕೆ ಅಷ್ಟು ವೆಚ್ಚ ತಗಲಿದರೂ ಅದನ್ನು ಮಾಡಬೇಕಾದದ್ದು ಅತ್ಯಗತ್ಯ.

ಸ್ವಾಮಿ, 1956ನೆಯ ಸಾಲಿನ ಮಾರ್ಚಿ ತಿಂಗಳಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಿಗೆ ಹೋಗಿದ್ದೆ. ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಅಲ್ಲಿಗೆ ಬಂದಿದ್ದರು. ಈಗಾಗಲೇ ಮೂರು ನಾಲ್ಕು ವರ್ಷಗಳಿಂದ ಬೆಳೆ ಹೋಗಿ ಅಲ್ಲಿ ರೈತರಿಗೆ ಏನೂ ದಿಕ್ಕು ತೋಚುತ್ತಾ ಇರಲಿಲ್ಲ. ದನಗಳಿಗೆ ಹುಲ್ಲು ಇಲ್ಲದೆ ಒಣಹುಲ್ಲು ಕೂಡ ಇಲ್ಲದೆ ಮರದ ಸೊಪ್ಪನ್ನು ಕತ್ತರಿಸಿ ಹಾಕಿದರು. ತದನಂತರದಲ್ಲಿ ಏನೂ ಆಹಾರ ಇಲ್ಲದೆ ಅನೇಕ ದನಗಳು ಸತ್ತುಹೋದುವು. ಭೂಸಂಪತ್ತು ನಷ್ಟವಾಯಿತು. ಜನಗಳಲ್ಲಿ ಬಹಳ ಹಾಹಾಕಾರ ಉಂಟಾಯಿತು. ಅಲ್ಲಿಯ ರೈತರಿಗೆ ಮಾಡುವುದಕ್ಕೆ ಏನೂ ಕೆಲಸ ಇರಲಿಲ್ಲ. ಅವರು ಹೇಳಿದ ಪ್ರಕಾರ ನಾಲ್ಕು ವರ್ಷ ಮಳೆ ಇಲ್ಲದೆ ಹೋದ ವರ್ಷ ಕೂಡ ಕೊನೆಗೆ ಮಳೆ ಆಯಿತು. ಈ ವರ್ಷ ಮಳೆ ಬಂದರೂ ಕೂಡ ಏನೂ ಪ್ರಯೋಜನ ಆಗದೆ ಇರುವಾಗ ಅಲ್ಲಿಯ ರೈತರ ಪರಿಸ್ಥಿತಿ ಏನಾಗಬೇಕು ? ರೈತರನ್ನು ಆ ಭಾಗ

(ಶ್ರೀ ಕೆ. ಪುಟ್ಟಸ್ವಾಮಿ)

ದಿಂದ ಬೇರೆ ಪ್ರದೇಶಕ್ಕೆ ಒಯ್ಯುವುದಕ್ಕೆ ಸಾಧ್ಯವಿಲ್ಲ. ಎಲ್ಲೋ ಬೇರೆ ಕಡೆ ಜಮೀನಿದೆ. ಭದ್ರಾ ವ್ಯಾಲಿಯಲ್ಲಿ ನೀರಾವರಿ ಮಾಡುವುದಕ್ಕೆ ಅವಕಾಶವಿದೆಯೆಂದು ಹೇಳ ಬಹುದು. ಆದರೆ ಇಲ್ಲಿಂದ ರೈತರನ್ನು ಕರೆದುಕೊಂಡು ಹೋಗಿ ಎಲ್ಲಿ ವ್ಯವಸಾಯಕ್ಕೆ ಬೇರೆ ಜಮೀನು ಇದೆಯೋ ಆ ಸ್ಥಳಗಳಲ್ಲಿ ಅವರನ್ನು ನೆಲಸುವಂತೆ ಮಾಡುವುದು ಬಹಳ ಕಠಿಣವಾದ ಕೆಲಸ. ನಾವು ಈಗ ಯಾವ ರೀತಿಯಲ್ಲಿ ಆಲೋಚನೆ ಮಾಡುತ್ತಿದ್ದೇವೋ, ಯಾವ ರೀತಿಯಲ್ಲಿ ಈ ಪ್ರಶ್ನೆಯನ್ನು ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಪ್ರಯತ್ನಮಾಡುತ್ತಿದ್ದೇವೋ, ಆ ರೀತಿ ಮಾಡಿದರೆ ಅದು ಸಾಧ್ಯವಿಲ್ಲ. ಈಗ ತಾತ್ಕಾಲಿಕವಾಗಿ ರೈತರು ಎಲ್ಲಿ ಇದ್ದಾರೋ ಅಲ್ಲಿ ಉದ್ಯೋಗವನ್ನು ಒದಗಿಸಿಕೊಡಬೇಕಾದದ್ದು ಮತ್ತು ಅವರಿಗೆ ಅಲ್ಲಿರತಕ್ಕಂಥ ನೈಸರ್ಗಿಕವಾದ ಸಂಪತ್ತನ್ನು ಅಭಿವೃದ್ಧಿಪಡಿಸುವುದಕ್ಕೆ ಅವಕಾಶ ಮಾಡಬೇಕಾದದ್ದು ಅತ್ಯಗತ್ಯ. ಗುಂಡ್ಲುಪೇಟೆಯಲ್ಲಿ ನಾವು ಅವರನ್ನು ಕೇಳಿದ್ದರಲ್ಲಿ ದಿನವೊಂದಕ್ಕೆ ರೋಡಿನಲ್ಲಿ ಕೆಲಸಮಾಡಿದರೆ ಐದಾಣೆ ಸಂಪಾದನೆ ಮಾಡುತ್ತಿದ್ದೇವೆ ಎಂದು ಹೇಳಿದರು. ಅದಕ್ಕೆ ಬದಲಾಗಿಅವರು ತಾವೇ ನೂತ ನೂಲನ್ನು ಕೊಂಡುಕೊಂಡು ಬದನವಾಳಕ್ಕೆ ಕೊಟ್ಟು ದುಡ್ಡು ಕೊಡಿ ಎಂದು ಕೇಳಿದರು. ಈಗ ಅವರು ನೂತ ನೂಲನ್ನು ಬದನವಾಳದಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಪ್ರತಿಯೊಂದು ಮನೆಯಲ್ಲಿಯೂ ಮೂರು ನಾಲ್ಕು ಚರಕಗಳಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಈಗ ಅವರು ದಿನಕ್ಕೆ ಐದಾಣೆ ತೆಗೆದುಕೊಳ್ಳುವ ಸ್ಥಿತಿ ಬಂದಿದೆ. ಬದನವಾಳದವರು ನೂಲು ತೆಗೆದುಕೊಂಡರೆ ಉಂಟು ಇಲ್ಲದಿದ್ದರೆ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಅವರು ಜೀವನ ಹೊರೆಯಬೇಕಾಗಿದೆ. ಅವರಿಗೆ ಇಂಥ ದುಸ್ಥಿತಿ ಬಂದಿದೆ. ಹೀಗಿದ್ದರೂ ಸರ್ಕಾರದವರು ಜನಗಳಿಗೆ ನಮ್ಮ ಮೇಲೆ ನಂಬಿಕೆ ಬರುವಂತೆ ಜೀವನದಲ್ಲಿ ವಿಶ್ವಾಸ ಹುಟ್ಟುವಂತೆ ಯಾವ ಒಂದು ಕ್ರಾಂತಿಕಾರಕವಾದಂಥ ಪ್ರಬಲವಾದಂಥ ಕಾರ್ಯಕ್ರಮವನ್ನೂ ಮಾಡದೆ ಇರುವುದನ್ನು ನೋಡಿದರೆ, ನನಗಾದರೂ ಬಹಳ ವಿಷಾದವಾಗುತ್ತದೆ. ಇದು ಅತ್ಯಗತ್ಯವಾಗಿ ಮಾಡಬೇಕಾದ ಕೆಲಸ. ದೇಶದಲ್ಲಿ ಯಥೇಚ್ಛವಾಗಿ ಜಮೀನಿದೆ, ಅಲ್ಲಿ ಜನರು ನೆಲಸಬಹುದು ಎಂದು ಹೇಳಬಹುದು. ಆದರೆ ರೈತ ಅಲ್ಲಿಗೆ ಹೋಗುವುದಿಲ್ಲ. ಇಲ್ಲಿ ಅವನಿಗೆ ಅನುಕೂಲವಾದ ಜೀವನ ಆಗುವಾಗ 100, 200, 300 ಮೈಲಿ ದೂರ ಹೋಗಿ ಅಷ್ಟೊಂದು ಸಂಪರ್ಕ ಇಲ್ಲದೆ ಇರುವ ಕಡೆ ಜೀವನ ಮಾಡಬೇಕಾದರೆ ಬಹಳ ಕಠಿಣವಾಗುತ್ತದೆ. ಬಡವರು ಅಲ್ಲಿಗೆ ಹೋಗಿ ನೆಲಸಬೇಕಾದರೆ ಅವರಿಗೆ ಬರೀ ಜಮೀನು ಕೊಟ್ಟರೆ ನೆಲಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರದವರು ಆ ಭಾಗದಲ್ಲಿರತಕ್ಕ ಜಮೀನನ್ನು ವ್ಯವಸಾಯಕ್ಕೆ ಲಾಯಕ್ಕು ಮಾಡಿ, ಆಬಾದುಮಾಡಿ, ರೈತನಿಗೆ ಒಂದು ವರ್ಷಕ್ಕೆ ಅಲ್ಲಿ ಹೋಗಿ ನಿಲ್ಲುವುದಕ್ಕೆ ಜೀವನಕ್ಕೆ ಆಗುವಷ್ಟು ಧನ ಸಹಾಯಮಾಡಿ ಎಲ್ಲಾ ಸೌಲಭ್ಯವನ್ನೂ ಒದಗಿಸಿಕೊಟ್ಟು ವಾಸಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಆಗ ಹೋಗುತ್ತಾರೆ. ಒಂದು ಎಕರೆ, ನಾಲ್ಕು ಎಕರೆ ಜಮೀನು ಕೊಟ್ಟರೆ ಅಲ್ಲಿಗೆ ಹೋಗಿ ಇರುವುದಕ್ಕೆ ಕಷ್ಟವಾಗುತ್ತದೆ. ಮೊದಲನೆಯದಾಗಿ ವ್ಯವಸಾಯ ಮಾಡುವುದಕ್ಕೆ ಸಾಕಷ್ಟು ಸೌಲಭ್ಯವಿರುವುದಿಲ್ಲ. ಅಲ್ಲದೆ ವರ್ಷಾಂತರಕಾಲ ಅವರು ಜೀವನ ಮಾಡುವುದಕ್ಕೆ ಸಾಧ್ಯವಿರುವುದಿಲ್ಲ. ಆದ್ದರಿಂದ ಸರ್ಕಾರದವರು ಅಭಾವ ಪರಿಸ್ಥಿತಿ ಇರುವಕಡೆ ತಾವು ಮಾಡಬಹುದಾದ ಎಲ್ಲಾ ಕೆಲಸಗಳನ್ನೂ ಕೂಡಲೇ ಮಾಡಬೇಕು. ಎರಡನೆಯದಾಗಿ ಮೈಸೂರು ದೇಶದಲ್ಲಿ ಇರತಕ್ಕ ಬೇರೆ ಜಮೀನನ್ನು ಆಬಾದು ಸ್ಥಿತಿಗೆ ತಂದು ಇಲ್ಲಿಂದ ಅಲ್ಲಿ ಹೋಗಿ ನೆಲಸುವುದಕ್ಕೆ ಆಗಬೇಕಾದ ಸಹಾಯವನ್ನು ಅವರಿಗೆ ಒದಗಿಸಿ ನೆಲಸುವಂತೆ ಮಾಡಬೇಕು. ಹಾಗೆ ಮಾಡಿದರೆ ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರದವರು ಇದರ ಕಡೆ ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಎಸ್. ಮುನಿರಾಜು (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಈ ದಿವಸ ಆಹಾರ ಮತ್ತು ಕ್ಷಾಮ ಪರಿಸ್ಥಿತಿ ಸಮಸ್ಯೆಯ ವಿಷಯವಾಗಿ ಮಹನೀಯರೆಲ್ಲ ಅನೇಕ ಸಲಹೆಗಳನ್ನು ನೀಡಿದ್ದಾರೆ. ಶ್ರೀಯುತ ಪುಟ್ಟಸ್ವಾಮಿಯವರು ಹೇಳಿದಹಾಗೆ ಇದು ಏನೋ ಒಂದು ಸಮಸ್ಯೆ ಎಂದು ಮನಗಂಡಾಗ ಕೆಲವು ಕಾಮಗಾರಿಗಳನ್ನು ನಡೆಸಿಕೊಂಡು ಹೋಗತಕ್ಕದ್ದು ಸರ್ಕಾರದ ಕರ್ತವ್ಯವಾಗಿದೆ ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ಆಹಾರ ಪರಿಸ್ಥಿತಿ ಮತ್ತು ಒಂದು ಅಭಾವ ಪರಿಸ್ಥಿತಿ ಕೆಲವಾರು ಹಳ್ಳಿಗಳಲ್ಲಿ ಆಗಾಗ್ಯೆ ತಲೆದೋರುವುದು ಎಲ್ಲರಿಗೂ ತಿಳಿದಿರುವ ಸಮಸ್ಯೆಯಾಗಿದೆ. ಇದನ್ನು ವ್ಯವಸ್ಥಿತ ರೀತಿಯಲ್ಲಿ ಉಪಾಯಗಳನ್ನು ಹುಡುಕಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವೋ ಅವುಗಳೆಲ್ಲವನ್ನೂ ದೂರದೃಷ್ಟಿಯಿಂದ ಬಹಳ ತೀವ್ರಗತಿಯಿಂದ ಸರ್ಕಾರ ನಡೆಸುತ್ತಾ ಇಲ್ಲ. ಈ ಒಂದು ಪರಿಸ್ಥಿತಿಯು ಎಲ್ಲಾ ಶಾಖೆಗಳಲ್ಲಿಯೂ ನಮಗೆ ಕಾಣಿಸುತ್ತಾ ಇದೆ. ನಮ್ಮ ರಾಜ್ಯದಲ್ಲಿ ನಮಗೆ ಬೇಕಾದಷ್ಟು ಆಹಾರವಿಲ್ಲ ಎಂಬುದನ್ನು 1943ನೆಯ ಇಸವಿಯಿಂದಲೂ ನಾವು ಕಾಣುತ್ತಿದ್ದೇವೆ. 1949ರಲ್ಲಿ ಆ ಆಹಾರದ ಪರಿಸ್ಥಿತಿಯನ್ನು ಕೊನೆಗಾಣಿಸುತ್ತೇವೆ, ಹೆಚ್ಚು ಆಹಾರ ಬೆಳೆಯುತ್ತೇವೆ ಎಂದು ಕೆಲವು ಕಾರ್ಯಕ್ರಮಗಳನ್ನು ಹಾಕಿದರು. ಮೊದಲನೆ ಪಾಂಚವಾರ್ಷಿಕ ಯೋಜನೆ ಮುಕ್ತಾಯವಾಯಿತು. ಎರಡನೆ ಪಾಂಚವಾರ್ಷಿಕ ಯೋಜನೆ ನಡೆಯುತ್ತಿದೆ. ವ್ಯವಸಾಯ ಇಲಾಖೆಯವರು ಅನೇಕ ಅಂಕಿ ಅಂಶಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಮಾನ್ಯ ಸದಸ್ಯರು ಆ ಅಂಕಿ ಅಂಶಗಳ ವಿಷಯದಲ್ಲಿ ಬಹಳವಾಗಿ ಹೇಳಿದ್ದಾರೆ. ಅದರ ಗೋಜಿಗೆ ಹೋಗುವುದಿಲ್ಲ. ಮುಖ್ಯವಾಗಿ ಹೇಳಬೇಕಾದರೆ ವ್ಯವಸಾಯ ಇಲಾಖೆಯವರು ಏನು ಅಂಕಿ ಅಂಶಗಳನ್ನು ಸಂಗ್ರಹಿಸಿದ್ದಾರೋ ಆ ಅಂಕಿಅಂಶಗಳು ಸರಿಯಾದುವಲ್ಲ. ಇಂಥ ಸಭೆಗಳಲ್ಲಿ ಈ ವಿಷಯ ಚರ್ಚೆಗೆ ಬರುತ್ತಿದೆ. ಯಾವುದಾದರೂ ಕೆಲವು ಅಂಕಿ ಅಂಶಗಳನ್ನು ಒದಗಿಸುವುದು ನಮ್ಮ ಕರ್ತವ್ಯ ಎಂದುಕೊಂಡು ಬಿಟ್ಟು ಈ ರೀತಿ ಸರ್ಕಾರದವರು ಒದಗಿಸುತ್ತಿದ್ದಾರೆಂದು ಕಾಣುತ್ತದೆ. ಒಂದು ಕಡೆ ನವ ಮೈಸೂರಿನಲ್ಲಿ ವಯಸ್ಕರಿಗೆ ಒಂದು ಪೌಂಡಿನಂತೆ ಬೇಕಾದಷ್ಟು ಆಹಾರವಿದೆ ಎಂದು ಹೇಳುತ್ತಾರೆ. ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ 97,000 ಟನ್ ಆಹಾರ ಹೆಚ್ಚಾಗಿದೆ, 2,12,000 ಟನ್ ಬೆಳೆದಿದ್ದೇವೆ ಎಂದು ಹೇಳುತ್ತಾರೆ. ಈ ರೀತಿ ಒಂದು ಕಡೆ ಒಂದು ಅಂಕಿಅಂಶಗಳನ್ನು ಹೇಳುತ್ತಾರೆ; ಇನ್ನೊಂದು ಕಡೆ ಆಹಾರ ಅಭಾವ ಉಂಟಾಗಿರುವುದು ಎದ್ದು ಕಾಣುತ್ತಿದೆ. ಈ ವಿಷಯವನ್ನು ನಾವು ಪರಿಶೀಲಿಸಿದರೆ ಖಂಡಿತವಾಗಿ ನಾವು ಈ ವಿಚಾರದಲ್ಲಿ ಹೆಜ್ಜೆ ಇಡತಕ್ಕ ಕ್ರಮ ಸರಿಯಾಗಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅದರಲ್ಲೂ ಅಂಕಿ ಅಂಶಗಳ ವಿಷಯ ನೋಡಿದರೆ ನಮಗೆ ಒಂದು ಸಮಾಧಾನವಾಗುತ್ತದೆಯೇ ವಿನಾ ಯಾವ ವಿಧದಲ್ಲೂ ಈ ಸಮಸ್ಯೆಯನ್ನು ಬಿಡಿಸಿದ ಹಾಗಾಗುವುದಿಲ್ಲ. ಇಂಥ ಪರಿಸ್ಥಿತಿ ಒಂದು

ಕಡೆ ಇದ್ದರೆ ಇನ್ನೊಂದು ಕಡೆ ಈ ಅಭಾವ ಹಳ್ಳಿಗಳಲ್ಲಿ ದಿನೆ ದಿನೇ ಹೆಚ್ಚಾಗುತ್ತಿದೆ. ಹಿಂದೆ ಎರಡು ವರ್ಷಗಳಿಂದ ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಸಾಮಾನ್ಯ ಅಭಾವ ಪರಿಸ್ಥಿತಿ ಬಂತು. ಮುಖ್ಯವಾಗಿ ಸರ್ಕಾರದವರು ಏನು ಮಾಡಬಹುದೋ ಅದನ್ನು ಒಂದು ತೀವ್ರಗತಿಯಿಂದ ಮಾಡಬೇಕು ಎಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಕೆರೆಗಳಿಂದ ಬೆಳೆ ಬೆಳೆಯಬೇಕಾಗುತ್ತದೆ. ಈಗ ಮಳೆ ಬಂದರೆ ಬೆಳೆ ಬರುತ್ತದೆ, ಇಲ್ಲದಿದ್ದರೆ ಇಲ್ಲ ಎನ್ನುವ ಪರಿಸ್ಥಿತಿ ಇದೆ. ಹೀಗೆ ಮುಖ್ಯವಾಗಿ ಮಳೆ ಬಿದ್ದಾಗ ಮಳೆ ನೀರನ್ನು ಶೇಖರಿಸಿ ಇಟ್ಟುಕೊಂಡು ಕೆಲಸ ಮಾಡಬೇಕಾಗಿದೆ. ಹಿಂದೆ ಮಹನೀಯರು ಇಲ್ಲಿ ಕೆರೆಗಳನ್ನು ಕಟ್ಟಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಹೊಸ ಕೆರೆ ಕಟ್ಟುವುದಕ್ಕೆ ಅವಕಾಶವಿರುವುದಿಲ್ಲ. ಆದರೆ ಇಲ್ಲಿ ಸುವ್ಯವಸ್ಥಿತ ರೀತಿಯಲ್ಲಿ ಕಟ್ಟೆ ಕೆರೆಗಳನ್ನು ಕಟ್ಟಿದ್ದಾರೆ.

ಕೆರೆಗಳ ದುರಸ್ತಿಮಾಡಿ ನೀರನ್ನು ಶೇಖರಿಸುವಂತೆ ಮಾಡಬೇಕು. ನೀರನ್ನು ಶೇಖರಿಸುವ ಸಾಮರ್ಥ್ಯವಿಲ್ಲದೆ ನೀರು ಹರಿದು ಹೋಗುತ್ತದೆ. ಕೆರೆ ಕಟ್ಟೆಗಳು ಒಡೆದು ಹಲವಾರು ವರ್ಷಗಳಾದವು. ಕೆರೆಗಳ ದುರಸ್ತಿಯ ಕಡೆಗೆ ಸರ್ಕಾರ ಗಮನ ಕೊಟ್ಟಿಲ್ಲ. ಆಂಧ್ರದ ಕೊನೆಯಲ್ಲಿ ಇರುವ ಬಾಗೇಪಲ್ಲಿ ತಾಲ್ಲೂಕಿನ ಉದಾಹರಣೆಯನ್ನು ಹೇಳಬಹುದು. ಅಲ್ಲಿ ಯಾವಾಗಲೂ ಮಳೆ ಬರುವುದಿಲ್ಲ. ಕೆರೆಗಳು ಒಡೆದುಹೋಗಿದ್ದರೂ ಏನೂ ಕ್ರಮ ತೆಗೆದುಕೊಂಡಿಲ್ಲ. ಕೆರೆಯ ಅಚ್ಚುಕಟ್ಟು 100 ಎಕರೆ ಎಂದು ಅಂಕಿ ಅಂಶಗಳಿದ್ದರೂ ನಿಜವಾಗಿ 60-70 ಎಕರೆಗಳಿಗೂ ಸಹ ನೀರು ಸಾಕಾಗುವುದಿಲ್ಲ. ಕೆರೆ ತುಂಬಿದರೂ ಸಹ ಬೆಳೆ ಬರುವುದಿಲ್ಲ. ಕೆರೆಗಳನ್ನು ರೆಸ್ಟೋರ್ ಮಾಡಬೇಕು ಇಲ್ಲವಾದರ ಅಚ್ಚುಕಟ್ಟನ್ನಾದರೂ ಕಡಿಮೆ ಮಾಡಿ, ಇರತಕ್ಕಂಥಾ ಭೂಮಿಗೆ ನೀರು ಸಿಕ್ಕುವ ಭರವಸೆ ಇರುವ ರೀತಿ ಮಾಡಬೇಕು. ಕ್ರಮ ತೆಗೆದುಕೊಳ್ಳಲು ಹಿಂದು ಮುಂದೆ ನೋಡಬಾರದು. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಹೊಸ ಹೊಸ ಕಾರ್ಯಕ್ರಮ ತೆಗೆದುಕೊಂಡು ಕೆಲಸವನ್ನು ಸರ್ಕಾರ ಮುಂದುವರಿಸಿದ್ದಾರೆ. ಆದರೆ ಅದು ಯಾವ ರೀತಿ ನಡೆಯಬೇಕೋ ಆರೀತಿ ನಡೆಯುತ್ತಿಲ್ಲ. ಚಿಕ್ಕಬಳ್ಳಾಪುರದಲ್ಲಿ ಹೊಸ ಕಟ್ಟೆ ಕಟ್ಟಬೇಕು. ನಾಲ್ಕು ವರ್ಷಗಳಾಗಿ ಹೋದರೂ ಇನ್ನೂ ಕೆಲಸ ಪೂರ್ತಿಯಾಗಿಲ್ಲ. ಬೇಕಾದಷ್ಟು ಎಕರೆ ಭೂಮಿ ಸಾಗು ಆಗಿ ಆಹಾರದ ಕೊರತೆ ಹೋಗುತ್ತಿತ್ತು. ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ತೀವ್ರಗತಿಯಿಂದ ಕೆಲಸವನ್ನು ನಡೆಸಿಕೊಂಡು ಹೋಗುವುದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವ್ಯವಸಾಯ ಇಲಾಖೆಯವರು ಏನಾದರೂ ಕೆಲಸ ಮಾಡುತ್ತಾರೆಂದು ನಂಬಿದ್ದೆವು. ಆದರೆ ವ್ಯವಸಾಯಗಾರರಿಗೆ ಎಳ್ಳಷ್ಟು ಲಾಭವಾಗಿಲ್ಲ. ಬೇಕಾದಷ್ಟು ದುಡ್ಡು ಖರ್ಚಾಗುತ್ತಿದ್ದರೂ ಅದರಿಂದ ವ್ಯವಸಾಯಕ್ಕೆ ಉಪಯೋಗವಾಗುತ್ತಿಲ್ಲ. ಭತ್ತಕ್ಕೆ assured price ಎಂದರೆ ಒಂದು ನಿಗದಿ ಬೆಲೆ ದೊರೆಯುವಂತೆ ಮಾಡಬೇಕು. ವ್ಯವಸಾಯ ಇಲಾಖೆಯಲ್ಲಿ ಖರ್ಚು ಕಡಿಮೆ ಮಾಡಲು ಸಿಬ್ಬಂದಿ ಕಡಿಮೆ ಮಾಡಬೇಕು. ಕ್ಷಾಮ ಪರಿಸ್ಥಿತಿ ಇರುವಲ್ಲಿ ಫೇರ್ ಪ್ರೈಸ್ ಡಿಪೋ ತೆರೆಯಬೇಕು. ತೀವ್ರ ಗತಿಯಿಂದ ಪರಿಸ್ಥಿತಿಯನ್ನು ಎದುರಿಸಿ ಕ್ರಮ ತೆಗೆದುಕೊಳ್ಳುತ್ತಾರೆಂದು ಆಶಿಸುತ್ತೇನೆ. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಜನರಿಗೆ ಕೆಲಸ ಒದಗಿಸಲು ಆಗುತ್ತಿಲ್ಲ. ಜನರು ಕೆಟ್ಟ ಪರಿಸ್ಥಿತಿಯಲ್ಲಿ ಇದ್ದಾರೆ. ಒಂದು ದಿನಕ್ಕೆ 10-14 ಆಣೆ ಕೂಲಿ ಕೊಡುವುದು ಸರಿಯಲ್ಲ. ಇದನ್ನು ತೀವ್ರವಾಗಿ ಆಲೋಚನೆ ಮಾಡಿ ಕನಿಷ್ಠ ಪಕ್ಷ ಒಬ್ಬನಿಗೆ ಒಂದುದಿನಕ್ಕೆ ಒಂದು ರೂಪಾಯಿ ಕೂಲಿ ಕೊಡುವ ಭರವಸೆಯನ್ನಾದರೂ ಕೊಡಬೇಕು. ಇನ್ನೊಂದು ವಿಚಾರ ಕೂಲಿ ಮಾಡುವವರು ಆರೇಳುಮೈಲಿ ದೂರ ಹೋಗಿ ಕೆಲಸ ಮಾಡಲು ಸಾಧ್ಯವಿಲ್ಲ. ಹತ್ತಾರ ಗ್ರಾಮಗಳ ಒಂದು ಗುಂಪು ಮಾಡಿ ಎರಡು ಮೈಲಿ ಅಂತರದೊಳಗೆ ಕೆಲಸ ಸಿಕ್ಕುವಹಾಗೆ ಮಾಡಬೇಕು. ಕೇಂದ್ರ ಸರ್ಕಾರದವರು ಕೊಡುವ ಧಾನ್ಯವನ್ನು ತೆಗೆದುಕೊಂಡು ಆಹಾರದ ಮಳಿಗೆಗಳನ್ನು ತೆರೆದು ಅಲ್ಲಿಂದ ಆಹಾರ ಧಾನ್ಯ ಹಂಚಬೇಕು. ಸಬ್ ಡಿವಿಜನ್ ಮತ್ತು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲಿ ಆಹಾರ ಧಾನ್ಯದ ಮಳಿಗೆಯನ್ನು ಇಟ್ಟು ಹೋಬಳಿಗೆ ಒಂದು ಡಿಪೋ ಇಟ್ಟು ಆಹಾರ ಧಾನ್ಯದ ಹಂಚಿಕೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಕೊನೆಯದಾಗಿ ಎಲೆಕ್ಟ್ರಿಕ್ ಪಂಪು ಹೆಚ್ಚಿಗೆ ಮಾಡಿ. ಲಿಫ್ಟ್ ಇರಿಗೇಶನ್ ಕೋಲಾರ ಜಿಲ್ಲೆಯಲ್ಲಿ ಹೆಚ್ಚಿಗೆ ಮಾಡಿದರೆ ಒಳ್ಳೆಯದು. ಎಲೆಕ್ಟ್ರಿಸಿಟಿಯ ಕೆಲಸ ತೀವ್ರ ಗತಿಯಿಂದ ನಡೆಯುತ್ತಿಲ್ಲ. ವ್ಯವಸಾಯಕ್ಕೆ ಪ್ರಯೋಜನವಾಗುತ್ತಿಲ್ಲ. ತೀವ್ರ ಗತಿಯಿಂದ ಈ ಪರಿಸ್ಥಿತಿಯನ್ನು ಎದುರಿಸಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಡಿ. ಮೂಕಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ ಈ ದಿವಸ ಆಹಾರದ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಮಾತನಾಡಿ ಬಹಳ ವಿಷಯ ಹೇಳಿದ್ದಾರೆ. ನಾನು ಹೆಚ್ಚಿಗೆ ಹೇಳುವುದಿಲ್ಲ. ನನಗೆ ತಿಳಿದಮಟ್ಟಿಗೆ ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಹಾರದ ಪ್ರಶ್ನೆ ದೇಶದಲ್ಲಿರತಕ್ಕ ಅತಿ ಮುಖ್ಯ ಪ್ರಶ್ನೆಯಾಗಿದೆ. ಆಹಾರದ ವಿಚಾರದಲ್ಲಿ ಆಹಾರದ ಅಭಾವ ಪರಿಸ್ಥಿತಿ ದೇಶದಲ್ಲಿ ಒಂದಿಲ್ಲೊಂದು ಕಡೆಗೆ ಬಂದೇ ಬರುತ್ತದೆ. ಇದು ಪ್ರಕೃತಿನಿಯಮ. ನಮಗೆ ಸ್ವಾತಂತ್ರ್ಯ ಸಿಕ್ಕಮೇಲೆ ಇದು ಬಂದಿಲ್ಲ. ಅನೇಕ ವರ್ಷಗಳಿಂದಲೂ ಕೂಡ ಬಹು ಕಾಲದಿಂದ ಇರತಕ್ಕ ಪರಿಸ್ಥಿತಿ ಇದು ಆಗಿದೆ. ಇದನ್ನು ತಡೆಗಟ್ಟುವದಕ್ಕೆ ಸರ್ಕಾರದವರು ಅನೇಕ ಕ್ರಮ ತೆಗೆದುಕೊಂಡಿದ್ದಾರೆ. ಮಳೆ ಹೆಚ್ಚಾಗಿ ಕೆಲವೆಡೆ ಆಹಾರ ಧಾನ್ಯ ನಷ್ಟವಾಗುವ ಸಂಭವವೂ ಇದೆ. ಈ ಬಗ್ಗೆ ತಕ್ಕ ಕ್ರಮ ತೆಗೆದುಕೊಂಡು ತಡೆಗಟ್ಟುವ ಪ್ರಯತ್ನ ಮಾಡಬೇಕು. ಮಳೆ ಕಡಮೆಯಾಗುವ ಪ್ರದೇಶದಲ್ಲಿ ಹೆಚ್ಚು ಪ್ರಯತ್ನಪಟ್ಟು ನೀರಾವರಿ ಯೋಜನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ರೀತಿ ಆಹಾರ ಧಾನ್ಯ ಉತ್ಪಾದನೆಯನ್ನು ಉತ್ತಮಪಡಿಸಲು ಪ್ರಯತ್ನಪಡಬೇಕು.

ಇನ್ನೊಂದು ವಿಷಯ. ಮಳೆಯಿಂದಲೇ ಬರತಕ್ಕ ಬೆಳೆ ಹೆಚ್ಚಿಗೆ ಇದೆ ಎಂದು ಹೇಳುತ್ತೇನೆ. ಇಪ್ಪತ್ತು ವರ್ಷಗಳ ಹಿಂದೆ ಒಂದು ಪಲ್ಲ ಅಕ್ಕಿಗೆ ಹತ್ತು ಹನ್ನೆರಡು ರೂಪಾಯಿ ಬೆಲೆ ಕೊಡುತ್ತಿದ್ದೆವು. ಅದೇ ಈಗ 50-55 ರೂಪಾಯಿ ಕೊಡಬೇಕಾಗುತ್ತದೆ. ಅಲ್ಲದೆ ಹತ್ತು ರೂಪಾಯಿ ಒಂದು ಪಲ್ಲ ಅಕ್ಕಿಗೆ ಬೆಲೆ ಇದ್ದ ಕಾಲದಲ್ಲಿ ಒಬ್ಬ ಮನುಷ್ಯನಿಗೆ ಹತ್ತು ಹದಿನೈದು ರೂಪಾಯಿವರೆಗೆ ಒಂದು ತಿಂಗಳಿಗೆ ಉತ್ಪನ್ನ ದೊರೆಯುತ್ತಿತ್ತು, ಈಗಿನ ಕಾಲದಲ್ಲಿ ಹದಿನೈದರ ನಾಲ್ಕೈದರಷ್ಟು ಎಂದರೆ 60-70 ರೂಪಾಯಿ ಕೊಡುತ್ತೇವೆ. ಹತ್ತು ರೂಪಾಯಿ ಬೆಲೆ ಇರುವ ಸಂದರ್ಭದಲ್ಲಿ ಒಬ್ಬ ಮನುಷ್ಯ ಒಂದು ತಿಂಗಳ ಸಂಬಳ ಕೊಟ್ಟರೆ ಒಂದು ಪಲ್ಲ ಅಕ್ಕಿ ಆಗ ದೊರೆಯುತ್ತಿತ್ತು.

(ಶ್ರೀ ಡಿ. ಮೂಕಪ್ಪ)

4 P.M.

ಈವಾಗಲೂ ಕೂಡ ಒಂದು ತಿಂಗಳ ಉತ್ಪನ್ನವನ್ನು ಆಹಾರದ ಮೇಲೆ ಹಾಕಿದರೆ ಒಂದು, ಒಂದೂಕಾಲು ಫಲ್ಲ ಬರುವ ಪರಿಸ್ಥಿತಿ ಇದೆ. ಅಂಕಿಅಂಶಗಳಿಂದ ಉತ್ಪಾದನೆಯನ್ನು ಅಳೆಯುವುದಕ್ಕೆ ಹೋದರೆ, ಆಹಾರ ಹಿಂದಿಗಿಂತಲೂ ಕಡಿಮೆಯಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ದೇಶದಲ್ಲಿ ಜನಸಂಖ್ಯೆ ವಿಪರೀತವಾಗಿ ಹೆಚ್ಚಾಗಿದೆ. ಜನಸಂಖ್ಯೆ ಹೆಚ್ಚಾದ ಹಾಗೆಲ್ಲಾ, ಮನುಷ್ಯನ ಬುದ್ಧಿವಂತಿಕೆ ಕೂಡ ಜಾಸ್ತಿಯಾಗುತ್ತಿದೆ. ಆಹಾರದ ಅನೇಕ ವಸ್ತುಗಳು ಕಡಿಮೆಯಾಗುತ್ತಿದೆ ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ, ವಸ್ತು ಸೃಷ್ಟಿ ಮಾಡತಕ್ಕಂಥದ್ದು ಬೆಳೆಯತಕ್ಕಂಥದ್ದು ಯಾವುದೂ ಕಡಿಮೆಯಾಗಿಲ್ಲ. ಆದರೆ ನಾವು ಇದರಲ್ಲಿ ಕೈಕೊಂಡಿರುವ ವಿನಿಮಯ ಸರಾಗವಾಗಿ, ನಿಷ್ಪಕ್ಷಪಾತವಾಗಿ ಆಗುತ್ತಾ ಇಲ್ಲ ಎಂದು ಮಾತ್ರ ಹೇಳಬಯಸುತ್ತೇನೆ. ಏತಕ್ಕೆಂದರೆ, ಈ ವಿನಿಮಯ ಒಂದು ಕ್ರಮದಲ್ಲಿ, ಒಂದು ನೀತಿಯಿಂದ ಆಗುತ್ತಾ ಇಲ್ಲ. ಭೂಮಿಯಲ್ಲಿಯೂ ಕೂಡ, ಕಷ್ಟಪಟ್ಟು ದುಡಿಯತಕ್ಕ ಜನಗಳಿಗೆ, ಶ್ರಮಪಡತಕ್ಕಂಥ ಜನಗಳಿಗೆ ಕೊರತೆ ಇರುವುದರಿಂದ, ಅವರಿಗೆ ಸಾಕಷ್ಟು ಉತ್ಸಾಹವಿಲ್ಲದೆ ಅವರು ತಮ್ಮ ವ್ಯವಹಾರವನ್ನು ಮೊಟಕು ಮಾಡುವುದಕ್ಕೆ ಕಾರಣವಾಗಿದೆ. ಆದ್ದರಿಂದ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಯಾವುದೇ ಪ್ರದೇಶದಲ್ಲಿರಲಿ—ಅದು ಡಿಸ್ಟ್ರಿಕ್ಟ್ ಫಾರೆಸ್ಟ್‌ನಲ್ಲಿರಲಿ ಅಥವ ರಿಸರ್ವ್ ಫಾರೆಸ್ಟ್‌ನಲ್ಲಿರಲಿ,—ಅಂತಹುದನ್ನು ಯಾರು ವ್ಯವಸಾಯ ಮಾಡುವುದಕ್ಕೆ ಲಾಯಕ್ ಆಗಿದ್ದಾರೋ ಅಂತಹವರಿಗೆಲ್ಲಾ ವ್ಯವಸಾಯ ಮಾಡುವುದಕ್ಕೆ ಮೊದಲು ಹಂಚಬೇಕು. ಎರಡನೆಯದಾಗಿ, ವ್ಯವಸಾಯ ಮಾಡತಕ್ಕಂಥ ರೈತನಿಗೆ, ನಿಜವಾಗಿ ಶ್ರಮಪಡತಕ್ಕಂಥ ಮನುಷ್ಯನಿಗೆ, ಯಾವ ನಿರ್ಭಂಧವೂ ಇಲ್ಲದಂಥ ಒಂದು ನೇರವಾದ ರಕ್ಷಣೆಯ ಏರ್ಪಾಡಾಗಬೇಕು. ಅವನು ಬೆಳೆಯತಕ್ಕಂಥ ಫಸಲಿಗೆ ನ್ಯಾಯವಾದ ಬೆಲೆ ದೊರೆಯುವಂತೆ ಮಾಡಬೇಕು. ಅವನು ಬೆಳೆಯತಕ್ಕಂಥ ದವಸಕ್ಕೆ ಸರಿಯಾದ ಬೆಲೆ ಬರುವಂತೆ ಮಾಡಿಕೊಳ್ಳುವ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕು. ಇನ್ನು, ಅಲ್ಲಲ್ಲಿರುವ ಸಣ್ಣಪುಟ್ಟ ಕೆರೆಗಳನ್ನು ದುರಸ್ತು ಪಡಿಸಿ ಆ ಮೂಲಕ ಅವನಿಗೆ ಸಾಕಷ್ಟು ರಕ್ಷಣೆ ವ್ಯವಸಾಯಕ್ಕೆ ಕೊಡಬೇಕು. ಈರೀತಿ ಕೆಲವು ಕಾರ್ಯಕ್ರಮಗಳನ್ನು ವ್ಯವಸಾಯಕ್ಕೆ ಅನುಕೂಲವಾಗುವಂತೆ ಮುಂದುವರಿಸುವ ಪ್ರಯತ್ನವನ್ನು ಸರ್ಕಾರದವರು ಮಾಡಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೆ, ತಾವು ನಾನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞನಾಗಿದ್ದೇನೆ. ನಮ್ಮ ಆಹಾರ ಪರಿಸ್ಥಿತಿ ಹೇಗಿದೆ ಎಂದರೆ ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಹಾಗಿದೆ. ಬಂಗಾಳದಲ್ಲಿ ಪ್ರಥಮವಾಗಿ ಕ್ಷಾಮ ಬಂದಾಗ ಜನ ಸಾಯುತ್ತಾ ಇದ್ದರು. ಆ ಅನುಭವದಿಂದ ನಾವು ಪಾಠ ಕಲಿಯಲಿಲ್ಲ. ಆಹಾರ ಪರಿಸ್ಥಿತಿ ಹದಗೆಟ್ಟಿರುವುದಕ್ಕೆ ಪೂರ್ಣವಾಗಿ ಸರ್ಕಾರದವರೇ ಕಾರಣರಲ್ಲ. ಸರ್ಕಾರದ್ದೂ ತಪ್ಪಿಲ್ಲ. ದೇವರದ್ದೂ ತಪ್ಪಿಲ್ಲ. ಆದರೂ ಸರ್ಕಾರದವರ ಜವಾಬ್ದಾರಿ ಇದರಲ್ಲಿ ಬಹಳ ಜಾಸ್ತಿ ಇದೆ. ಹೆಚ್ಚು ಬೆಳೆ ಬೆಳೆಯುವ ಯೋಜನೆ ಎಂದು ಮಾಡಿದರು. ಆದರೆ ಅದರಿಂದ ಆದದ್ದೇನು? ತಮಗೆ ಇಷ್ಟ ಬಂದವರಿಗೆ, ಬೇಕು ಬೇಕಾದವರಿಗೆ ಜಮೀನು ಕೊಟ್ಟರು, ಏನೇನೋ ಕೆಲಸ ಮಾಡಿಕೊಂಡರು. ಈ ಸಂಬಂಧದಲ್ಲಿ ವೆಲ್‌ಸಬ್‌ಸಿಡಿ ಎಂದು ಕೊಟ್ಟರು. ಆದರೆ ಯಾವ ಜನರು ಬಾವಿಗಳನ್ನು ತೋಡಿ, ಪಂಪ್‌ಸೆಟ್ ಹಾಕಿ ವ್ಯವಸಾಯ ಮಾಡಿದ್ದರೋ ಅವರಿಂದ ಹಣವನ್ನು ಜುಲುಮಿನಿಂದ ವಾಪಸ್ ತೆಗೆದುಕೊಂಡರು; ಯಾರು ಏನೂ ಕೆಲಸ ಮಾಡಲಿಲ್ಲವೋ, ಅವರಿಗೇ ಹಣ ಕೊಟ್ಟು ಹಾಗೆಯೇ ಬಿಟ್ಟರು. ಇದಕ್ಕೆ ಬೇಕಾದಷ್ಟು ನಿದರ್ಶನಗಳನ್ನು ಕೊಡಬಲ್ಲೆ. ನಮ್ಮ ರೆವಿನ್ಯೂ ಮಂತ್ರಿಗಳು ಬೊಂಬಾಯಿನಲ್ಲಿದ್ದಾಗ ಒಳ್ಳೆ ಹೆಸರನ್ನು ಗಳಿಸಿದ್ದರು. ಆದರೆ ನಮ್ಮ ರಾಜ್ಯಕ್ಕೆ ಬಂದಮೇಲೆ ಅವರಿಗೂ ಮೈಸೂರಿನ ಗಾಳಿ ಬೀಸಿದಹಾಗಿದೆ. ಇದರಿಂದ ಆಹಾರದ ಸ್ಥಿತಿ ಮುಂದೆ ಏನಾಗುತ್ತದೆಯೋ ಎಂಬ ಶಂಕೆ ಹುಟ್ಟಿದೆ. ಅವರು ಬೇಕಾದರೆ ನನ್ನೊಡನೆ ಬರಲಿ, ಅನಿರೀಕ್ಷಿತ ಭೇಟಿ ಕೊಡಲಿ. ಅನೇಕ ಲೋಪದೋಷಗಳು ಬೆಳಕಿಗೆ ಬರುತ್ತವೆ. ನಾನು ಸಮಾಚಾರಗಳನ್ನು ತಿಳಿಸುತ್ತೇನೆ. ಅನೇಕ ಕಡೆ ಸರ್ಕಾರದಿಂದ ಕೊಟ್ಟ ಹಣ ದುರುಪಯೋಗವಾಗಿದೆ. ಇದನ್ನೆಲ್ಲಾ ಮೇಲ್ವಿಚಾರಣೆ ಮಾಡುವವರೇ ಇಲ್ಲ. ಇದನ್ನೆಲ್ಲಾ ಸರಿಯಾಗಿ ತನಿಖೆಮಾಡಿ ಸಂಪಾದಿಸಬೇಕು. ನಮ್ಮ ಮೈಸೂರು ದೇಶದಲ್ಲಿ ಪಟ್ಟಣ ಜೀವನವನ್ನು ಬಹಳ ಆಕರ್ಷಣೀಯವಾಗಿ ಮಾಡಿದ್ದಾರೆ. ಯಾವ ಸಿನಿಮಾ ನೋಡಿದರೂ ಭರ್ತಿಯಾಗಿರುತ್ತದೆ, ಕೂಲಿಗಾರರು ಎಲ್ಲಾ ಸಿನೀಮಾಗಳಲ್ಲೂ ನೆರೆದಿರುತ್ತಾರೆ. ಹಳ್ಳಿಗಳಲ್ಲಿ ವ್ಯವಸಾಯಮಾಡುವುದಕ್ಕೆ ಯಾರೂ ಬರುವುದಿಲ್ಲ. ಇದಕ್ಕೆಲ್ಲಾ ಕಾರಣ ಹಳ್ಳಿಯ ಜೀವನ ಆಕರ್ಷಣೀಯವಾಗಿಲ್ಲ. ಅಲ್ಲಿ ಜನಗಳು ವಾಸಮಾಡುವುದೇ ಕಷ್ಟವಾಗಿ ಪಟ್ಟಣಗಳಿಗೆ ಜೀವನೋಪಾಯಕ್ಕೆ ಬಂದು ನೆಲಸುತ್ತಿದ್ದಾರೆ. ರೈತ ಬಹಳ ಕಷ್ಟಪಟ್ಟು, ಸಾಗುವಳಿಮಾಡಿ ಬೆಳೆ ಬೆಳೆದರೂ, ಅವನ ಬೆಳೆಗೆ ಸುರಕ್ಷತೆ ಇಲ್ಲ. ಹಳ್ಳಿಗಳಲ್ಲಿ ಪೋಕರಿಗಳು ಜಾಸ್ತಿಯಾಗಿದ್ದಾರೆ, ಸಿಕ್ಕಾಪಟ್ಟೆ ತಿರುಗಾಡುತ್ತಿರುತ್ತಾರೆ. The police administration has come to nil point. There is no protection for the villagers. ಹಳ್ಳಿಯವರನ್ನು ಕೇಳುವವರೇ ಇಲ್ಲ. ಬಹಳ ಕಷ್ಟಪಟ್ಟು ಜೋಳ ಬೆಳೆದರು, ಆದರೆ ತೆನೆಯನ್ನೇ ಕದ್ದು ಕುಯಿದುಕೊಂಡು ಹೋಗುತ್ತಾರೆ. ರೈತ ಬೆಳೆದ ಬೆಳೆ ಅವನ ಕೈಗೆ ಸಿಕ್ಕುತ್ತದೆ ಎನ್ನುವ ನಂಬಿಕೆಯೇ ಇಲ್ಲ. ಅವನ ಬೆಳೆಯನ್ನು ಸಂರಕ್ಷಿಸಿಕೊಳ್ಳುವುದಕ್ಕೆ ಬಂದೂಕಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕಾದರೆ ಆ ಲೈಸೆನ್ಸಿಗೆ 15-20 ರೂಪಾಯಿ ಬಹುಮಾನ ಕೊಡಬೇಕು, ಬಂದೂಕವನ್ನು ಕೊಳ್ಳುವುದಕ್ಕೆ 100-120 ರೂಪಾಯಿ ಖರ್ಚು ಮಾಡಬೇಕು. ರೈತ ಹೀಗೆ ಎಲ್ಲಾದಕ್ಕೂ ಖರ್ಚು ಮಾಡಬೇಕು. ಸರ್ಕಾರದವರು ರೈತನಿಗಿರುವ ಕಷ್ಟಗಳನ್ನು ಖುದ್ದು ಪರಿಶೀಲಿಸಬೇಕು. ನಾವು ಅವನ ಕಷ್ಟವನ್ನು ಕುರಿತು ಏನಾದರೂ ಹೇಳಿದರೆ, ಇವರು ವಿರೋಧಿ ಪಕ್ಷದವರು ಸರ್ಕಾರದವರನ್ನು ಏನಾದರೂ ಟೀಕೆ ಮಾಡಬೇಕು ಎನ್ನುವ ಉದ್ದೇಶದಿಂದ ಹೇಳುತ್ತಿದ್ದಾರೆ, ಅವರ ಹೆಸರು ವೃತ್ತಪತ್ರಿಕೆಗಳಲ್ಲಿ ಬರಲಿ ಎಂದು ಹೇಳುತ್ತಿದ್ದಾರೆ ಎಂದು ಸರ್ಕಾರದವರು ಹೇಳುತ್ತಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೆ ಯಾರೂ ಹೇಳಿಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—ಒಬ್ಬ ಮಂತ್ರಿಗಳೇ ಹಾಗೆ ಇಲ್ಲಿಯೇ ಹೇಳಿದ್ದಾರೆ. ಅದು ಹಾಗಿರಲಿ, ರೈತರ ಕೆಲಸವೇನೂ ಆಗಿಲ್ಲ. ನಮ್ಮ ಶ್ರೀ ವೀರಣ್ಣ

ಗೌಡರು ಮಂತ್ರಿಗಳಾದಾಗ ನಾವು ಅಂದುಕೊಂಡಿದ್ದೆವು, ಅವರು ಹಳ್ಳಿಯಲ್ಲಿ ಹುಟ್ಟಿರುವವರು, ರೈತರಿಗೆ ಬಹಳ ಸಹಾಯವಾಗುತ್ತದೆ ಎಂದು. ಅವರು ರೈತರು ಅಂದರೆ ಪ್ರಾಣ ಬಿಡುತ್ತಾ ಇದ್ದರು. ಆದರೆ ಪ್ರಶ್ನೋತ್ತರ ಕಾಲದಲ್ಲಿ ಸಣ್ಣಪುಟ್ಟ ಕೆರೆಗಳನ್ನು ರಿಪೇರಿ ಮಾಡಿಸಿ ಡಿಸಿಲ್ಟಿಂಗ್ ಮಾಡಿಸಿ ಎಂದು ಕೇಳಿಕೊಂಡಾಗ ಅವರು ಹೇಳಿದರು.—ಈ ಕೆಲಸವನ್ನು ಶೀಘ್ರವಾಗಿ ಮಾಡುವುದಕ್ಕಾಗುವುದಿಲ್ಲ, ಇದು ಸ್ಲೋಪ್ರೋಸೆಸ್‌ಲ್ಲಿ ಆಗಬೇಕು ಎಂದು ಪಿ. ಡಬ್ಲ್ಯು. ಡಿ. ಮಿನಿಸ್ಟರ್ ಆಗಿ ಕನ್ನಂಬಾಡಿ ಅಂತಹ ದೊಡ್ಡ ಅಣೆಕಟ್ಟು ಕಟ್ಟಿದರೆ ಅವರ ಜವಾಬ್ದಾರಿ ಮುಗಿಯಲಿಲ್ಲ. ರೈತ ಬಾಂಧವರು ಎಂದರೆ ಪ್ರಾಣಬಿಡುತ್ತಿದ್ದವರು, ಸಣ್ಣಪುಟ್ಟ ಕೆರೆಗಳನ್ನು ದುರಸ್ತು ಮಾಡಿ ಎಂದರೆ ಇಂತಹ ನಿರಶಾದಾಯಕವಾದ ಉತ್ತರ ಕೊಟ್ಟರು. ರಷ್ಯ ದೇಶದಲ್ಲಿ ಜವಾಬ್ದಾರಿ ಸರ್ಕಾರ ಬಂದೊಡನೆ, ಜಾರ್ ರಿಜೀಮ್ ಹೋದ ಎಂಟು ವರ್ಷಗಳಲ್ಲಿ, ರಷ್ಯನ್ ಸರ್ಕಾರದವರು ಹೂಳುಹೋಗಿದ್ದ ಕೆರೆಗಳನ್ನೆಲ್ಲಾ ಡಿಸಿಲ್ಟ್ ಮಾಡಿಸಿ, ಹೆಚ್ಚು ಆಹಾರ ಬೆಳೆದು, ಆಹಾರ ಸಮಸ್ಯೆಯನ್ನು ಪರಿಹಾರ ಮಾಡಿದರು. ಹಿಟ್ಲರ್ ಜರ್ಮನಿಯಲ್ಲಿ ಅಧಿಕಾರದಲ್ಲಿದ್ದಾಗ ಒಂದು ಅಗಳು, ಅರ್ಧ ಅಗಳು ಆಹಾರವನ್ನು ವ್ಯರ್ಥ ಮಾಡಿದರೂ ಶಿಕ್ಷೆಗೆ ಗುರಿ ಮಾಡುತ್ತಿದ್ದನು. ಅಧಿಕಾರಿಗಳು ಮನಸ್ಸು ಮಾಡಿದರೆ ಎಷ್ಟೋ ಕೆಲಸಮಾಡಬಹುದು. ಒಬ್ಬ ಅಧಿಕಾರಿ ಕೈಹಾಕಿದರೆ ಸಾವಿರಾರು ಕೆಲಸ ಮಾಡಬಹುದು. ನಾವು ಏನನ್ನಾದರೂ ಹೇಳಿದರೆ ನಮ್ಮ ಮಂತ್ರಿಗಳು ಅದನ್ನು ಬಹಳ ಲಘುವಾಗಿ ತೆಗೆದುಕೊಳ್ಳುತ್ತಾರೆ. ಈ ಆಹಾರದ ವಿಷಯ ಅಷ್ಟು ತಾತ್ಸಾರವಾಗಿ ನೋಡುವ ವಿಷಯವಲ್ಲ. ಈಗ ನಮ್ಮ ದೇಶದಲ್ಲಿ ಆಹಾರ ಧಾನ್ಯ ಕಡಿಮೆ ಆಗಿಲ್ಲ. ಅನೇಕ ಜನ ವ್ಯಾಪಾರಸ್ಥರು, ಎಂಟುಹತ್ತು ಸಾವಿರ ರೂಪಾಯಿ ಸಾಲ ತೆಗೆದುಕೊಂಡು, ಆಹಾರ ಪದಾರ್ಥಗಳನ್ನು ಕೊಂಡುಕೊಂಡು ದಾಸ್ತಾನು ಮಾಡಿದ್ದಾರೆ. ಪ್ರತಿಯೊಬ್ಬರೂ ತನ್ನ ಸ್ಟಾಕ್ ಡಿಕ್ಲೇರ್ ಮಾಡಿಕೊಳ್ಳಬೇಕೆಂದು ಆಜ್ಞೆ ಹೊರಡಿಸಬೇಕು. ಇದರ ಜೊತೆಗೆ Hoarding and Profiteering Act ಪ್ರಕಾರ ಆಕ್ಷನ್ ತೆಗೆದುಕೊಳ್ಳಬೇಕು. ಆವಾಗ ತನ್ನಷ್ಟಕ್ಕೆ ತಾನೇ ದಾಸ್ತಾನು ಮಾಡಿದ್ದ ಪದಾರ್ಥ ಮಾರಾಟಕ್ಕೆ ಹೊರಗೆ ಬರುತ್ತದೆ. ಸರ್ಕಾರದವರು ಕೆಲವು ಫೇರ್ ಪ್ರೈಸ್ ಡಿಪೋಗಳನ್ನು ತೆಗೆದಿದ್ದಾರೆ. ಆ ಡಿಪೋಗಳಲ್ಲಿ ಬಡವರನ್ನು ಕೇಳುವವರೇ ಇಲ್ಲ. ನಮ್ಮ ಮಂತ್ರಿಗಳು ಟೂರ್ ಹೊರಟರೆ ಕಾಂಗ್ರೆಸ್ ಆಫೀಸಿಗೆ ಹೋಗಿ ಅಲ್ಲಿ ನ್ಯೂನತೆಗಳೇನಿವೆ ಎಂದು ನೋಡುವುದಕ್ಕೆ ಹೋಗುತ್ತಾರೆಯೇ ಹೊರತು, ರೈತರ ಕಷ್ಟ ಸುಖವೇನು ಎಂದು ವಿಚಾರಿಸುವುದಕ್ಕೆ ಹೋಗುವುದು ಕಡಮೆ. ಕಾಂಗ್ರೆಸ್ ಆಫೀಸಿಗೂ ಹೋಗಲಿ, ಪರಿಶೀಲನೆ ಮಾಡಲಿ, ಆದರೆ ಸಾಯಂಕಾಲ ಐದಾರು ಗಂಟೆ ಆದಮೇಲೆ ಹೋಗಲಿ, ಮಂತ್ರಿಗಳನ್ನು ನೋಡುವುದಕ್ಕೆ ಹೋದರೆ 20-25 ಜನರು ಕಾಯುತ್ತಾ ಇರುತ್ತಾರೆ. ಅವರನ್ನು ನೋಡುವುದೇ ಒಂದು ದೊಡ್ಡ ಕಾರ್ಯಭಾರ. ಈ ಆಡಳಿತದಲ್ಲಿ ರೈತನಿಗೆ ನ್ಯಾಯ ದೊರಕುವುದು ಬಹಳ ತಡ ಮತ್ತು ಕಷ್ಟ. ಅವನು ಕೋರ್ಟು ಕಚೇರಿಗೆ ಸುತ್ತುವುದು ಒಂದಾಗುತ್ತದೆ ವಿನಾ ಪರಿಹಾರ ಸಿಕ್ಕುವುದಿಲ್ಲ. ಇವತ್ತು ರೆವಿನ್ಯೂ ಕೋರ್ಟಿನಲ್ಲಿ ಫೈಸಲ್ ಆಗದ ನೂರಾರು ಕೇಸುಗಳಿವೆ.

ನಮ್ಮ ವ್ಯವಸಾಯ ಮಂತ್ರಿಗಳು ಅವರ ಇಲಾಖೆ ಬಹಳ ದಕ್ಷತೆಯಿಂದ ಕೆಲಸ ನಡೆಸುತ್ತಿದೆ ಎಂದು ಹೇಳುತ್ತಾರೆ. ಹರಿಹರ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿ ಹೊಳೆಯ ಮಗ್ಗುಲಲ್ಲಿ ವಿದ್ಯುಚ್ಛಕ್ತಿ ಲೈನ್ ಹಾಕಿದ್ದಾರೆ, ಅದನ್ನು ತೆಗೆದುಕೊಂಡು ರೈತರು ಉಪಯೋಗಿಸುತ್ತಿಲ್ಲ ಎಂದು ಹೇಳುತ್ತಾರೆ. ನನಗೆ ಗೊತ್ತಿರುವ ಹಾಗೆ ವಿದ್ಯುಚ್ಛಕ್ತಿ ಬೇಕೆಂದು ಅನೇಕ ಜನರು ಬಾಯಿ ಬಡಿದುಕೊಳ್ಳುತ್ತಿದ್ದರೂ ಅವರಿಗೆ ಕೊಡುತ್ತಿಲ್ಲ. ಇದನ್ನು ನಾನು ಖಂಡಿತವಾಗಿ ಹೇಳುತ್ತೇನೆ.

ಇನ್ನು statistics ತರಿಸಿಕೊಳ್ಳುತ್ತಾರೆ. ಗ್ರಾಮಗಳಿಂದ seasonal conditions ವರದಿ ಬರುತ್ತದೆ. ಅದು ಸಂಪೂರ್ಣವಾಗಿ ಸುಳ್ಳು. ಕೆಲವು ಶ್ಯಾನುಭೋಗರುಗಳು ಕುಳಿತ ಕಡೆ ಪಹಣಿ ಲೆಕ್ಕ ಬರೆಯುತ್ತಾರೆ. ಇದೆಲ್ಲ 99 point 9 recurring ಸುಳ್ಳು. ಹೀಗೆ ಸುಳ್ಳು ಬರೆಯುವವರಿಗೆ ಸರಿಯಾಗಿ ಬುದ್ಧಿ ಕಲಿಸಬೇಕು. ಇಂಥವರನ್ನು ಕೆಲವರನ್ನು ಹಿಡಿದು Falsification of Accountsಗೆ 477ನೆ ಸೆಕ್ಷನ್ ಪ್ರಕಾರ ಕೇಸ್ ಹಾಕಿ ನಾಲ್ಕು ಜನರಿಗೆ ಶಿಕ್ಷೆ ವಿಧಿಸಿದರೆ ಸರಿಹೋಗುತ್ತದೆ. ಹೀಗೆ ಮಾಡದೆ softness, half heartednessನಿಂದ ಕೆಲಸ ಮಾಡಿದರೆ ಸರಿಹೋಗುವುದಿಲ್ಲ. ಎಲ್ಲ ಇಲಾಖೆಗಳ ಕೆಲಸವೂ ಸಮರ್ಪಕವಾಗಿ ನಡೆಯುತ್ತಿಲ್ಲ. ರೈತ ಕೋರ್ಟಿಗೆ ಒಂದು ಕೇಸ್ ತೆಗೆದುಕೊಂಡು ಹೋದರೆ ಅವನು ಇಪ್ಪತ್ತು ಸಲ ತಿರುಗಬೇಕು. ಪೋಲೀಸ್ ಇಲಾಖೆ ಬಹಳ ಹೀನಸ್ಥಿತಿಗೆ ಬಂದಿದೆ. ಅನೇಕ ವಿಷಯಗಳನ್ನು ಹೇಳಬೇಕೆಂದಿದ್ದೆ, ಆದರೆ ನನಗೆ ಕೊಟ್ಟಿರುವ ಕಾಲ ಸಾಲದು. ಪಿ. ಡಬ್ಲ್ಯು. ಡಿ. ಮಂತ್ರಿಗಳಿಗೆ ಆಮೇಲೆ ಹೇಳಬೇಕಾಗುತ್ತದೆ. ಕೆರೆಗಳನ್ನು 'ಡೀಸಿಲ್ಟ್' ಮಾಡಬೇಕೆಂದು ಕೆಲವು ಕಡೆ ಪ್ರಯತ್ನ ಮಾಡಿದರು, ಅದನ್ನು ಕೈಬಿಟ್ಟರು. ಕೆಲವು ಅಧಿಕಾರಿಗಳು ಇದಕ್ಕೆ ವಿರೋಧವಾದ ಅಭಿಪ್ರಾಯ ಕೊಟ್ಟರೆಂದು ಹೇಳಿದರು. ಶ್ರೀಮಾನ್ ಸಿ. ರಾಜಗೋಪಾಲಾಚಾರಿಯವರು "Public Works Department is public enemy No. 1." ಎಂದು ಹೇಳಿದರು. ಅದು ನಿಜ. ಡೀಸಿಲ್ಟ್ ಮಾಡಿದರೆ ಆ ಅಧಿಕಾರಿಗಳಿಗೇನೂ ಸ್ವಪ್ರಯೋಜನವಾಗುವುದಿಲ್ಲ. ರೈತರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ಇದರಿಂದ ಉತ್ತಮವಾದ ಗೊಬ್ಬರ ರೈತರಿಗೆ ಸಿಕ್ಕುತ್ತದೆ. ಈಗಲೂ ದಯವಿಟ್ಟು ನಾಲ್ಕು ಕಡೆ ಮಾಡಿಸಿ ನೋಡಲಿ. ಟ್ರಾಕ್ಟರುಗಳು, ಸ್ಕ್ರೇಪರುಗಳನ್ನು ತರಿಸಿ ವಿಧಾನಸೌಧದ ಮುಂದೆ ಕೆಲಸ ಮಾಡಿಸುವುದಕ್ಕೆ ಬದಲು ಇವುಗಳನ್ನು ಕೆರೆಗಳಲ್ಲಿ ಉಪಯೋಗಿಸಿದರೆ ಅವರಿಗೇ ಅನುಭವಕ್ಕೆ ಬರುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾಡಿ ನಷ್ಟವನ್ನನುಭವಿಸಿ, ಅದನ್ನು ಕೈಬಿಟ್ಟಿದ್ದೇವೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಹಾಗಿದ್ದರೆ, ಕೆಲಸ ಮಾಡಿರುವವರಿಗೆ ಬುದ್ಧಿ ಇಲ್ಲ. ನನಗೆ ಒಂದು ಚಿಕ್ಕ ಕೆರೆ ಕೊಡಿ; ಮಾಡಿಸಿ ತೋರಿಸುತ್ತೇನೆ. ಸರ್ಕಾರದವರದು ಮೊದಲನೆಯ ತಪ್ಪು. ರೈತರದೂ ತಪ್ಪಿದೆ. ಕೊನೆಯದಾಗಿ, ಸಣ್ಣ ಕೆರೆಗಳನ್ನು ಜಾಗ್ರತೆ ರಿಪೇರಿ ಮಾಡಿಸಿ, ಡೀಸಿಲ್ಟ್ ಮಾಡಿಸಿ, ಸರಿಹೋಗುತ್ತದೆ. ಇನ್ನು ಹೆಚ್ಚು ಹೇಳಲು ಕಾಲವಿಲ್ಲ, ಇಲ್ಲಿಗೇ ನಿಲ್ಲಿಸುತ್ತೇನೆ.

ಶ್ರೀ ಟಿ. ಕೆ. ಕಂಬಳಿ (ಕುಂದಗೋಲ್).—ಅಧ್ಯಕ್ಷರೆ, ಈ ದಿವಸ ಇದುವರೆಗೆ ಆಹಾರ ಹೆಚ್ಚು ಉತ್ಪತ್ತಿ ಮಾಡುವ ವಿಚಾರವಾಗಿ ಚರ್ಚೆ ನಡೆದಿದೆ. ಈ ದೇಶದಲ್ಲಿ ಬಹುಸಂಖ್ಯೆಯಲ್ಲಿ ರೈತರಿದ್ದು ವ್ಯವಸಾಯ ಮಾಡುತ್ತಾರೆ. ಆದರೂ ಆಹಾರ ಎಲ್ಲರಿಗೂ ಸಾಲದೆ ಕಡಮೆಯಾಗಿ ಕಷ್ಟಪಡಬೇಕಾಗಿದೆ. ಆಹಾರ

(ಶ್ರೀ ಟಿ. ಕೆ. ಕಂಬಳಿ)

ಸಮೃದ್ಧಿಯಾಗಬೇಕಾದರೆ ಮುಂಚೆ ಭೂಮಿ ಮತ್ತು ರೈತ ನೆಟ್ಟಗಾಗಬೇಕು. ಅನಂತರ ಮಳೆ ಮತ್ತು ಹವ ಸರಿಯಾಗಬೇಕು. ಇದೆಲ್ಲ ಕೂಡಿ ಸರಿಯಾಗಬೇಕಾದರೆ ಸರ್ಕಾರಕ್ಕೆ ಕಷ್ಟ. ಹಿಂದೆ ನಮ್ಮ ದೇಶವನ್ನಾಳುತ್ತಿದ್ದ ಬ್ರಿಟಿಷರು ಇದಕ್ಕೆ ಗಮನ ಕೊಡಲಿಲ್ಲ. ಬಂದರೂ ಹಿಂದಿನಂತೆ ಕ್ಷಾಮ ಕೆಲವು ಕಡೆಗೆ. ಈಗಿನ ಸರ್ಕಾರ ಬಹಳ ದಕ್ಷತೆಯಿಂದ ಕಾರ್ಯಕ್ರಮಗಳನ್ನು ತೆಗೆದುಕೊಂಡು ಕೆಲಸ ನಡೆಸಿದ್ದಾರೆ. ರೈತ ಎಲ್ಲಿ ಚೆನ್ನಾಗಿದ್ದಾನೋ ಅಲ್ಲಿ ಉತ್ಪತ್ತಿ ಹೆಚ್ಚಾಗುತ್ತಿದೆ. ರೈತ ತಾನು ಭೂಮಾಲೀಕನೆಂದು ತಿಳಿದು ವ್ಯವಸಾಯ ಮಾಡಿದರೆ, ಅಲ್ಲಿ ಉತ್ಪತ್ತಿ ಚೆನ್ನಾಗುತ್ತದೆ. ಅಲ್ಲದೆ ಈಗ ಹಳ್ಳಿಗಳ ಜನರನೇಕರು ಹಳ್ಳಿಗಳನ್ನು ಬಿಟ್ಟು ಪಟ್ಟಣಗಳನ್ನು ಸೇರಿ ವಿದ್ಯೆ ಕಲಿತು ನೌಕರಿ ಮಾಡಲು ಪ್ರಾರಂಭವಾಗಿ ವ್ಯವಸಾಯ ಕಡಮೆಯಾಗಿದೆ. ಯಾವ ರೈತ ಸ್ವಂತ ಭೂಮಿಯನ್ನು ಮಾಡುತ್ತಾನೋ ಅವನ ಭೂಮಿ ಹೆಚ್ಚಾಗಿ ಬೆಳೆಯುತ್ತದೆ. ಆ ಭೂಮಿಗೆ ತಾನೇ ಮಾಲೀಕನಾಗಿದ್ದರೆ ಒಂದು ಕೂರಿಗೆಗೆ 20 ಚೀಲ ಬೆಳೆಯುತ್ತಾನೆ. ಆದರೆ ಅದೇ ಭೂಮಿ ತನ್ನದಲ್ಲದೆ ಬೇರೆಯವರದಾಗಿದ್ದು ತಾನು ಬರಿಯ ರೈತನಾಗಿದ್ದರೆ ನಾಲ್ಕೈದು ಚೀಲ ಕೂಡ ಬೆಳೆಯುವುದಿಲ್ಲ. ಒಂದೇ ಜಮೀನಿನಲ್ಲಿ ಹೀಗಾಗುತ್ತದೆ. ಜಮೀನು ಅವನದು ಆಗಿದ್ದರೆ ಶ್ರದ್ಧೆವಹಿಸಿ ಸರಿಯಾಗಿ ವ್ಯವಸಾಯ ಮಾಡುತ್ತಾನೆ. ಆದುದರಿಂದ ರೈತನನ್ನು ಭೂಮಿಯ ಮಾಲೀಕನನ್ನಾಗಿ ಮಾಡಬೇಕು. ಇಷ್ಟೇ ಅಲ್ಲದೆ, ಕೆಲವು ಭೂಮಾಲೀಕರು ತಮ್ಮ ಕೈಗೆ ಹೆಚ್ಚು ಹಣ ಬರುತ್ತದೆಂಬ ಉದ್ದೇಶದಿಂದ ಜಮೀನಿನಲ್ಲಿ ತಂಬಾಕು, ಹತ್ತಿ ಮುಂತಾದ ರೊಕ್ಕದ ಬೆಳೆಗಳನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದರ ಲಾಭವೆಲ್ಲ ಶ್ರೀಮಂತರಿಗೆ ಹೋಗುತ್ತಿದೆ. ನಿಜವಾದ ರೈತನಿಗೆ ಬಡತನ ಹೋಗುವುದಿಲ್ಲ. ಭೂಮಿ ಇದೆ, ಜನಸಂಖ್ಯೆಯೂ ಹೆಚ್ಚಾಗಿದೆ, ಭೂಮಿ ಎಲ್ಲ ಸರಿಯಾಗಿ ವ್ಯವಸಾಯವಾಗಬೇಕಾದರೆ ರೈತನಿಗೆ ಅನುಕೂಲಗಳು ಬೇಕು. ಈಗ ರೈತನಿಗೆ ಅವಶ್ಯಕವಾದ ಸಾಮಾನುಗಳಿಗೆ ಬೆಲೆ ಹೆಚ್ಚಾಗಿದೆ. ಇದರಿಂದ ರೈತನಿಗೆ ಬಡತನ ತಪ್ಪುವುದಿಲ್ಲ. ಆದಕಾರಣ ರೈತನಿಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸಿ ಅವನನ್ನು ಉಚ್ಚಮಟ್ಟಕ್ಕೆ ತಂದರೆ ನಮ್ಮ ಆಹಾರ ಸಮಸ್ಯೆ ಬಗೆಹರಿಯುತ್ತದೆ.

ಇನ್ನೊಂದು ಕಾರಣದಿಂದ ಭೂಮಿಯನ್ನು ವ್ಯವಸಾಯ ಮಾಡದೆ ಬಿಡುತ್ತಾರೆ. ಭೂಮಿಯ ಪಕ್ಕದಲ್ಲೇ ಕೆರೆ ಇರಬಹುದು, ಆದರೂ ಆ ಭೂಮಿ ಕಣಗಲು ಜೇರು ಆಗಲ ಘಡಜಮೀನು ಇರುವುದರಿಂದ ಅವನ್ನು ಬಿಟ್ಟುಬಿಡುತ್ತಾರೆ. ಇಂಥ ಭೂಮಿಯನ್ನು ಸರಿಮಾಡಬೇಕು. ಇದರಲ್ಲಿ ಧಾನ್ಯ ಬೆಳೆದರೆ ಹೆಚ್ಚಾಗಿ ಬೆಳೆ ಬರುತ್ತದೆ. ಇಂಥಾ ಭೂಮಿಯನ್ನು ಸರಿಮಾಡಬೇಕಾದರೆ ಈಗಿನ ಟ್ರಾಕ್ಟರುಗಳು ಮುಂತಾದ ಸಲಕರಣೆಗಳನ್ನು ಉಪಯೋಗಿಸಬಹುದು. ಅಲ್ಲದೆ ಕರಿಕಿ, ಕಣಗಲ ಮತ್ತು ಜೇರು ಇವುಗಳು ಹೋದರೆ ಆ ಭೂಮಿಯಲ್ಲಿ ಈಗ ಬೆಳೆಯುವುದಕ್ಕಿಂತ ನಾಲ್ಕರಷ್ಟು ಹೆಚ್ಚು ಬೆಳೆಯಬಹುದು. ಆದುದರಿಂದ ಸರ್ಕಾರದವರು ಏರ್ಪಾಡು ಮಾಡಿ ಇವನ್ನು ತೆಗೆಯಬೇಕು ಇದಕ್ಕೆಲ್ಲ ಮಾಡಿ ರೈತ ಸುಗಮವಾಗಿ ವ್ಯವಸಾಯ ಮಾಡಲು ಅನುಕೂಲ ಮಾಡಿಕೊಟ್ಟರೆ ಆಹಾರಕ್ಕೆ ಈಗಿರುವ ತ್ರಾಸ ಕಡಮೆಯಾಗುತ್ತದೆ. ಇಷ್ಟು ಹೇಳಿ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ಎ. ಪಾಟೀಲ್ (ತಾಳೀಕೋಟೆ).—ಮಾನ್ಯ ಅಧ್ಯಕ್ಷರೆ, ಯಾವುದೇ ರಾಷ್ಟ್ರದಲ್ಲಿಯಾದರೂ ಹೊಟ್ಟೆ, ಬಟ್ಟೆ ಮತ್ತು ವಸತಿ ಈ ಮೂರು ಸಮಸ್ಯೆಗಳಿರುತ್ತವೆ. ಇವನ್ನು ಬಗೆಹರಿಸಬೇಕು. ಇವುಗಳಲ್ಲಿ ಆಹಾರ ಸಮಸ್ಯೆ ಮುಖ್ಯವಾದುದು. ಆಹಾರವಿಲ್ಲದೆ ಮನುಷ್ಯ ಬದುಕುವುದಕ್ಕಾಗುವುದಿಲ್ಲ. ಹಿಂದೂಸ್ಥಾನ ಸ್ವಾತಂತ್ರ್ಯ ಪಡೆದುಕೊಂಡರೂ ಆಹಾರ ಸಮಸ್ಯೆ ಬಗೆಹರಿದಿಲ್ಲ. ಈ ಹೊತ್ತಿನವರೆಗೂ ಅನ್ಯದೇಶಗಳಿಂದ ಆಹಾರಧಾನ್ಯಗಳನ್ನು ತರಿಸಬೇಕಾಗಿದೆ. ಬರ್ಮಾ, ಚೈನಾ ಅಮೆರಿಕಾ ಮುಂತಾದ ದೇಶಗಳಿಂದ ಧಾನ್ಯಗಳನ್ನು ತರಿಸಬೇಕಾಗಿದೆ. ನಮ್ಮ ದೇಶದಲ್ಲಿ ನೂರಕ್ಕೆ ಎಪ್ಪತ್ತು ಜನರು ವ್ಯವಸಾಯವನ್ನವಲಂಬಿಸಿದ್ದರೂ ಕೂಡ ಏಕೆ ಹೀಗಾಗಿದೆ? ಆಸ್ಟ್ರೇಲಿಯಾ ಗೋಧಿ, ಬರ್ಮಾ ಅಕ್ಕಿಯನ್ನೇ ಅವಲಂಬಿಸುತ್ತಿದ್ದೇವೆ ಎಂಬುದು ಯೋಚನೆ ಮಾಡಬೇಕಾದ ಸಂಗತಿ. ಈ ಸಮಸ್ಯೆ ಬಗೆಹರಿಯಬೇಕಾದರೆ ಕೆಲವು ಕಾರ್ಯಗಳನ್ನು ಕೈಗೊಳ್ಳಬೇಕು. ಎಲ್ಲಿ ಒಕ್ಕಲುತನಕ್ಕೆ ಬಾವಿಗಳು ಬೇಕೋ ಅಲ್ಲಿ ಬಾವಿಗಳನ್ನು ತೆಗೆಸಬೇಕು. ಬಿಜಾಪುರದಲ್ಲಿ ಮೂವತ್ತು ಅಡಿ ತೆಗೆದರೆ ಬಾವಿಯಾಗುತ್ತದೆ. ಅಲ್ಲಿ ಬಾವಿಗಳನ್ನು ಹೆಚ್ಚು ಪ್ರಮಾಣದಲ್ಲಿ ತೆಗೆಸಬೇಕು. ಎಲ್ಲೆಲ್ಲಿ ಅಣೆಗಳನ್ನು ಕಟ್ಟಲು ಅವಕಾಶವಿದೆಯೋ ಅಲ್ಲೆಲ್ಲಾ ಅಣೆಗಳನ್ನು ಕಟ್ಟಿಸಬೇಕು. ಹಾಗಿಲ್ಲದೆ ಅಧಿಕ ಆಹಾರ ಬೆಳೆಯಿರಿ ಎನ್ನುವ ಪ್ರಚಾರ ಮಾಡಿದತಕ್ಷಣ ಆಹಾರ ಹೆಚ್ಚು ಬೆಳೆಯುವುದಿಲ್ಲ. ನಾವು ಬೊಂಬಾಯಿ ಪ್ರಾಂತದಲ್ಲಿದ್ದಾಗ ಟ್ರಾಕ್ಟರುಗಳ ಸೌಕರ್ಯವಿತ್ತು. ಮೈಸೂರು ಸರ್ಕಾರಕ್ಕೆ ಬಂದಮೇಲೆ ಈ ಅನುಕೂಲ ಅಷ್ಟಾಗಿಲ್ಲ. ಅಲ್ಲದೆ ಟ್ರಾಕ್ಟರುಗಳ ದರ ಮೊದಲಿಗಿಂತ ಹೆಚ್ಚಾಗಿದೆ. ರೈತ ಹೆಚ್ಚು ಹಣಕೊಟ್ಟು ಹೊಡಿಸುವುದಕ್ಕಾಗುವುದಿಲ್ಲ. (ಕರಕಿ) ಘಡ ಜಮೀನನ್ನು ಸರ್ಕಾರದವರ ವಶ ತೆಗೆದುಕೊಂಡು ಕರಕಿ, ಕಣಗಲ, ಜೇರು ಇರುವ ಜಮೀನನ್ನು ಟ್ರಾಕ್ಟರುಗಳಿಂದ ಸರಿಮಾಡಿಸಬೇಕು. ತಗಾಯಿ ಸಾಲ ರೈತರಿಗೆ ಸರಿಯಾಗಿ ದೊರಕುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಇನ್‌ಸ್ಪೆಕ್ಷನ್ ಮಾಡುತ್ತೇವೆಂದು ಹೇಳಿ ಏನಾದರೂ ಅಡ್ಡಿ ಹಾಕುತ್ತಾರೆ. ಹೀಗಾಗಿ ತಗಾಯಿ ಸಾಲದಿಂದ ರೈತರಿಗೆ ಅನುಕೂಲವಾಗುತ್ತಿಲ್ಲ. ಇದನ್ನು ಸರಿಪಡಿಸಬೇಕು. ಉತ್ತಮವಾದ ಗೊಬ್ಬರ, ಬೀಜ ಮುಂತಾದುವನ್ನು ಒದಗಿಸಿ ರೈತರ ಕೊರತೆಯನ್ನು ಪೂರೈಸಬೇಕು. ಬರಿಯ ಪ್ರಚಾರದಿಂದ ಆಹಾರ ಸಮಸ್ಯೆ ಬಗೆಹರಿಯುವುದಿಲ್ಲ. ಒಕ್ಕಲತನವನ್ನವಲಂಬಿಸಿದ್ದವರು ಪಟ್ಟಣಗಳಲ್ಲಿ ನೌಕರಿ ಮಾಡುವುದಕ್ಕೆ ಹೋಗುತ್ತಿದ್ದಾರೆ. ಇಂಗ್ಲೆಂಡ್ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ನೌಕರಿಗಳಿಗೆ ಹೋಗುವುದೇ ಕಷ್ಟ. ಇದಕ್ಕೆ ಕಾರಣ ನಮ್ಮಲ್ಲಿ ವ್ಯವಸಾಯ ಕೀಳು ಎಂಬ ಮನೋಭಾವ ಬಂದಿದೆ. ಒಕ್ಕಲುತನದಿಂದ ಉತ್ಪತ್ತಿಯಾಗುವ ಧಾನ್ಯಗಳನ್ನು ದಾಸ್ತಾನಿಟ್ಟು ಸರಿಯಾದ ಧಾರಣೆಗೆ ಮಾರಲು ಅನುಕೂಲವಾಗಲು ಗೋಡೌನ್‌ಗಳನ್ನೇರ್ಪಾಡು ಮಾಡಬೇಕು.

ಹೆಚ್ಚು ಆಹಾರ ಬೆಳೆಯಬೇಕಾದರೆ ಗೋಡೌನ್ ಮುಂತಾದುವುಗಳ ಅನುಕೂಲ ಮಾಡಿಕೊಡಬೇಕು. ಶೇಂಗಾ ಸುಗ್ಗಿಯಲ್ಲಿ 12 ರೂಪಾಯಿ ಇರುತ್ತದೆ. ಮುಂದೆ 20 ರೂಪಾಯಿ ಆಗುತ್ತದೆ. ಒಕ್ಕಲುತನದಲ್ಲಿ ಹುಟ್ಟುವ ಧಾನ್ಯಗಳನ್ನು ಗೋಡೌನ್‌ಗಳಲ್ಲಿಟ್ಟುಕೊಂಡು ಹಣ ಕೊಟ್ಟು ಸಹಾಯ ಮಾಡಿದರೆ ಮುಂದೆ ಅನುಕೂಲವಾಗುತ್ತದೆ. ಇವತ್ತಿನ ದಿವಸ ಒಕ್ಕಲಿಗರು ಬಹಳ ಕಷ್ಟದೆಶೆಯಲ್ಲಿದ್ದಾರೆ. ಹೀಗಾಗಿ ಪಟ್ಟಣಗಳಿಗೆ ನೌಕರಿ

ಹಿಡಿಯಲಿಕ್ಕೆ ಹೋಗಿ ಫ್ಯಾಕ್ಟರಿಗಳಲ್ಲಿ ನೌಕರಿಮಾಡುವ ಮನಸ್ಸಾಗುತ್ತಿದೆ. ಆದ್ದರಿಂದ ಸರ್ಕಾರದವರು ಒಕ್ಕಲುತನದ ಉತ್ಪನ್ನಕ್ಕೆ ಯೋಗ್ಯರೀತಿಯಿಂದ ಮಾರಾಟದ ಸೌಲಭ್ಯ ದೊರಕುವಂತೆ ಮಾಡಬೇಕು. ಬರಗಾಲದ ಕಾಂಗಾರಿಗಳಲ್ಲಿ ಈಗ ರಸ್ತೆಗಳನ್ನು ಮಾಡಿಸಿದ್ದೀರಿ. ರಸ್ತೆಯಿಂದ ಸರಿಯಾಗಿ ಆಗುವುದಿಲ್ಲ. ಬರಗಾಲದ ಕಾಮಗಾರಿಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮ ಏನೂ ಆಗಲಿಲ್ಲ. ಕೆರೆ ಮತ್ತು ಬಾವಿಗಳು ಎಷ್ಟಿವೆಯೋ ಅವು ನಮ್ಮ ಜಿಲ್ಲೆಯಲ್ಲಿ 30 ಫೂಟು ಅಗೆದರೆ ಸಾಕು ಒಂದು ಬಾವಿ ಆಗುತ್ತದೆ. ರಸ್ತೆಮಾಡಿದರೆ ಅದು ಅಭಿವೃದ್ಧಿ ಕಾರ್ಯವಾಗಲಿಲ್ಲ. ರಸ್ತೆ ಅವಶ್ಯಕತೆ ಇದೆ. ಇದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ವ್ಯವಸಾಯಾಭಿವೃದ್ಧಿಯಾಗತಕ್ಕ ಯಾವುದೊಂದು ಕಾರ್ಯವೂ ಆಗಿಲ್ಲ ಎಂದು ಹೇಳುತ್ತೇನೆ. ಪಂಚವಾರ್ಷಿಕಯೋಜನೆಯಲ್ಲಿ ಇಷ್ಟು ಕೋಟಿ ರೂಪಾಯಿ ಹಣ ಖರ್ಚುಮಾಡುತ್ತೇವೆ ಎಂದು ಗ್ರಾಫ್‌ನಲ್ಲಿ ತೋರಿಸುತ್ತೀರೇ ಹೊರತು ಅದರಿಂದ ರೈತರಿಗೆ ಈಗ ಏನೂ ಪ್ರಯೋಜನವಾಗುತ್ತಿಲ್ಲ ಎಂದು ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ಯೋಗ್ಯ ರೀತಿಯಿಂದ ಬೀಜ ವಗೈರೆ ಒದಗಿಸಬೇಕೇ ಹೊರತು ಪ್ರಚಾರಕಾರ್ಯದಿಂದ ಏನೂ ಪ್ರಯೋಜನವಾಗುವುದಿಲ್ಲ. ಬೊಂಬಾಯಿ ಕರ್ನಾಟಕದ ಬಿಜಾಪುರದ ಜಿಲ್ಲೆಯಲ್ಲಿ ಟ್ರಾಕ್ಟರ್‌ಗಳನ್ನು ಒದಗಿಸಿಕೊಡಬೇಕು. ಕಡಿಮೆ ದರದಲ್ಲಿ ಟ್ರ್ಯಾಕ್ಟರ್‌ಗಳ ಸೌಕರ್ಯವನ್ನು ಮಾಡಿಕೊಟ್ಟಿದ್ದೇ ಆದರೆ ಪಡ ಜಮೀನಿಗೆ ಒಳ್ಳೆಯದಾಗುತ್ತದೆ ಮತ್ತು ನಮ್ಮ ಈ ಆಹಾರ ಸಮಸ್ಯೆಯೂ ಸಹ ಬಗೆಹರಿಯುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು).—ನಮ್ಮ ದೇಶದಲ್ಲಿ ಆಹಾರದ ಪರಿಸ್ಥಿತಿ ಈ ದಿವಸ ನೋಡಿದರೆ ಬಹಳ ಚಿಂತಾಜನಕವಾಗಿದೆ. ಕೆಲವರು ಹೊಟ್ಟೆ ತುಂಬಾ ಊಟಮಾಡುವುದು, ಕೆಲವರು ಅರೆಹೊಟ್ಟೆಯಲ್ಲಿ ಊಟಮಾಡುವುದು ಈ ರೀತಿಯಾಗಿದೆ. ನಮ್ಮ ಸರ್ಕಾರದವರು ಈಗಾಗಲೇ ಹತ್ತು ವರ್ಷಗಳಿಂದಲೂ ಆಹಾರದ ವಿಚಾರದಲ್ಲಿ ಬೇಕಾದಷ್ಟು ಹಣವನ್ನು ಖರ್ಚು ಮಾಡಿ ಹೆಚ್ಚು ಆಹಾರ ಬೆಳೆಯಲು ಪ್ರಯತ್ನ ಮಾಡುತ್ತಾ ಇದ್ದಾರೆ. ಆದರೆ ಇನ್ನೂ ಕೂಡ ಜನಗಳು ಹೊಟ್ಟೆತುಂಬ ಊಟಮಾಡುವ ಸ್ಥಿತಿ ಬಂದಿಲ್ಲ. ಈಗ ನೋಡಿ, ಪಂಚವಾರ್ಷಿಕಯೋಜನೆ ಹಾಕಿಕೊಂಡು, ಕೋಟ್ಯಾಂತರ ರೂಪಾಯಿ ಖರ್ಚುಮಾಡಿ, ನದಿಗಳಿಗೆ ಅಣೆಕಟ್ಟು ಕಟ್ಟುತ್ತಾ ಇದ್ದೇವೆ. ಅಣೆಕಟ್ಟು ಕಟ್ಟಿರುವ ಭಾಗಗಳಲ್ಲಿ ಹೆಚ್ಚಿನ ಬೆಳೆ, ಹೆಚ್ಚಿನ ಆಹಾರ ಧಾನ್ಯ ಬೆಳೆಯುತ್ತಾ ಇರುವುದು ನಮಗೆ ಇನ್ನೂ ಕಂಡು ಬರುತ್ತಾ ಇಲ್ಲ. ಅದನ್ನು ತ್ವರೆಗೊಳಿಸಬೇಕು, ಮತ್ತು ಈಗಾಗಲೇ ದೇಶದಲ್ಲಿ ಮಳೆಗಾಲ ಕಡಿಮೆಯಾಗಿದೆ. ಹಿಂದೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಜೂನ್ ತಿಂಗಳಿನಲ್ಲಿ ಸೋನೆಮಳೆ ಹಿಡಿದು ಜೂನ್, ಜುಲೈ, ಆಗಸ್ಟ್ ತಿಂಗಳಿನವರೆಗೂ ಬರುತ್ತಿತ್ತು. ಈ ವರ್ಷ ಸೋನೆ ಮಳೆಯೇ ಇಲ್ಲ. ಕಾರಣವೇನೆಂದರೆ ನಾವು ಒಂದು ಸ್ಕೀಮನ್ನು ಹಾಕಿಕೊಂಡು ಹೋಗುತ್ತೇವೆ; ವನ ಬೆಳೆಸಬೇಕೆಂದು ಹೇಳಿ ಸರ್ಕಾರದ ಬೊಕ್ಕಸದಿಂದ ಲಕ್ಷಾಂತರ ರೂಪಾಯಿ ಖರ್ಚುಮಾಡುತ್ತಾ ಇದ್ದೇವೆ; ಆದರೆ ಇನ್ನೊಂದು ಕಡೆಯಿಂದ ವನಗಳ ಸಂಹಾರ ಬೇಕಾದಷ್ಟು ಆಗುತ್ತಾ ಇದೆ. ನೋಡಿ, ಹಾಸನ ಜಿಲ್ಲೆಯಿಂದ ಪ್ರತಿ ದಿನಸ 20 ಲಾರಿ ಮರ ಬೆಂಗಳೂರಿಗೆ ಬರುತ್ತಾ ಇದೆ. ಮರಗಳನ್ನು ಹೆಚ್ಚಾಗಿ ಬೆಳೆಸಿದರೆ ಮಳೆ ಹೆಚ್ಚಾಗಿ ಬರುತ್ತದೆ ಎಂದು ಪೂರ್ವಿಕರು ಹೇಳುತ್ತಾ ಇದ್ದರು. ಈಗ ವಿಪರೀತ ಮರಗಳು ನಮ್ಮ ಮಲೆನಾಡಿನಲ್ಲಿ ನಾಶವಾಗುತ್ತಾ ಇವೆ. ಆದ್ದರಿಂದ ಅದನ್ನು ತಡೆಗಟ್ಟಬೇಕು. ಆಲೂರು ತಾಲ್ಲೂಕಿನಲ್ಲಿ ಆಲೂರು ಸಣ್ಣ ಅಕ್ಕಿ ಎಂದು ಬಹಳ ಹೆಸರುವಾಸಿಯಾದ ಅಕ್ಕಿಯನ್ನು ಬೆಳೆಯುತ್ತಾ ಇದ್ದರು. ಆಲೂರಿನಲ್ಲಿ ಒಂದು ದೊಡ್ಡ ಸಂತೆ ಆಗುತ್ತದೆ. ತುಮಕೂರು, ಅರಸೀಕೆರೆ, ಮಧುಗಿರಿ, ಪಾವಗಡ ಅತ್ತಕಡೆಗೆಲ್ಲಾ ಈಕಡೆಯಿಂದ ಅಕ್ಕಿ ಬೇಕಾದಷ್ಟು ಹೋಗುತ್ತಾ ಇತ್ತು. ಇವತ್ತಿನ ದಿವಸ ಮಳೆಯೇ ಇಲ್ಲದೆ ಅಲ್ಲಿ ಬೆಳೆಯುತ್ತಾ ಇದ್ದ ಬೆಳೆ ಬೆಳೆಯುತ್ತಿಲ್ಲ.

ನಮ್ಮ ಸರ್ಕಾರದವರು ಜಮೀನು ಕೊಡುವ ವಿಚಾರದಲ್ಲಿ ಒಂದು ತಡೆ ಆಜ್ಞೆ ಮಾಡಿದರು. ಈಗ ಜಮೀನು ಕೊಟ್ಟಿದ್ದಾರೆ. ಅನೇಕರು ಜಮೀನಿಗೆ ಬಹಳ ಹಾತೊರೆಯುತ್ತಾ ಇದ್ದಾರೆ. ಏಕೆಂದರೆ ರೂಪಾಯಿಗೆ $2\frac{1}{2}$ ಸೇರು ರಾಗಿ, $1\frac{1}{4}$–$1\frac{1}{2}$ ಸೇರು ಅಕ್ಕಿ ಈರೀತಿ ಕೊಂಡು ಬಾಳುವೆ ಮಾಡಲಾರರು. ನಿಜವಾಗಿಯೂ ಹೇಳುವುದಾದರೆ ನನ್ನ ಮನೆ ಬಾಗಿಲಿಗೆ ದಿವಸ 50 ಜನ ರೈತರು ಜಮೀನು ಕೊಡಿಸಿ ಎಂದು ಬರುತ್ತಾ ಇದ್ದಾರೆ. ಆದ್ದರಿಂದ ಅದರಮೇಲೆ ಇರತಕ್ಕ ಏನೊಂದು ತರಾಕರಿ ಇದೆಯೋ ಅದನ್ನು ನಿವಾರಣೆ ಮಾಡಲು ಜಾಗ್ರತೆ ಜಮೀನು ಕೊಡುವಂತೆ ಆಜ್ಞೆ ಮಾಡಿದರೆ ರೈತರು ಜಮೀನು ತೆಗೆದುಕೊಂಡು ಹೆಚ್ಚು ಆಹಾರ ಬೆಳೆಯುತ್ತಾರೆ.

ಇನ್ನು ಮಾನ್ಯ ಸದಸ್ಯರು ಆಗಲೇ ಹೇಳಿದರು. ಅರಣ್ಯದಲ್ಲಿ ಮರ, ಗಿಡ ಬೆಳೆಯದೇ ಇರತಕ್ಕ ಬಂಜರು ಭೂಮಿ ಬೇಕಾದಷ್ಟು ಇದೆ. ಅದು ವ್ಯವಸಾಯಕ್ಕೆ ಲಾಯಕ್ಕಾದ್ದು. ಅಂತಹ ಭೂಮಿಯನ್ನು ಕೊಡದೆ ಸುಮ್ಮನೆ ಅರಣ್ಯಗಳಿಗೆ, ಮರ ಬೆಳೆಸಬೇಕೆಂದು ಇಟ್ಟುಕೊಂಡಿದ್ದಾರೆ. ಹತ್ತು ವರ್ಷಗಳಾದರೂ ಒಂದು ಸಸಿ ಬೆಳೆಯುವುದೂ ಕಷ್ಟ. ಅಂತಹ ಭಾಗಗಳನ್ನು ಸರ್ಕಾರದವರು ಆದಷ್ಟು ಜಾಗ್ರತೆ ಯಾರು ಜಮೀನು ಮಾಡುತ್ತೇವೆ ಎಂದು ದರಖಾಸ್ತು ಭೂಮಿಯನ್ನು ಕೇಳುತ್ತಾರೆಯೋ ಅವರಿಗೆ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ, ಮಲೆನಾಡಿನಲ್ಲಿ ಮಂಜರಾಬಾದು ತಾಲ್ಲೂಕಿನಲ್ಲಿ ಮಳೆ ಜಾಸ್ತಿ ಆಗುತ್ತದೆ. ಜನವರಿ, ಫೆಬ್ರವರಿಯಲ್ಲಿ ರಸ್ತೆಯ ಮೇಲೆಲ್ಲಾ ನೀರು ಹರಿಯುತ್ತ ಇತ್ತು. ಇವತ್ತಿನ ದಿವಸ ಇಲ್ಲವೇ ಇಲ್ಲ, ಕೆರೆ ಕಟ್ಟೆ ಒಣಗುತ್ತಿವೆ. ಮಂಜರಾಬಾದು ತಾಲ್ಲೂಕು, ಆಲೂರು ತಾಲ್ಲೂಕು, ಈರೀತಿ ಇದೇ ಸಂಸ್ಥಾನದಲ್ಲೇ ಕೆರೆಗಳಿಂದಲೇ ಬೇಕಾದಷ್ಟು ವ್ಯವಸಾಯ ಮಾಡಿ ಆಹಾರ ಬೆಳೆದು ಜೀವನ ಮಾಡುತ್ತಾ ಇದ್ದರು. ಇಂಥ ಬೇಕಾದಷ್ಟು ಕೆರೆಗಳನ್ನು ಪೂರ್ವಿಕರು ಮಾಡಿದ್ದರು. ಆ ಕೆರೆಗಳೆಲ್ಲಾ ಈಗ ಹೂತುಹೋಗಿವೆ. ಇವತ್ತಿನ ದಿವಸ ಹಾಸನ ಜಿಲ್ಲೆಯಲ್ಲಿ ನಮ್ಮ ಸರ್ಕಾರದವರು ಈ ಕೆರೆಗಳ ಕಾಂಗಾರಿ ಮತ್ತು ಇರಿಗೇಷನ್ ವರ್ಕ್ಸ್‌ಗೆ ಒದಗಿಸಿರುವ ಹಣ ನೋಡಿದರೆ ಕಳೆದ ವರ್ಷ, ಆಚೆ ವರ್ಷ ಒದಗಿಸಿದ್ದ ಹಣಕ್ಕಿಂತಲೂ ಬಹಳ ಕಡಿಮೆಯಾಗಿದೆ. ಅಲ್ಲಿ ಬೇಕಾದಷ್ಟು ಕೆರೆಗಳು ಆಗಬೇಕು. ಆದ್ದರಿಂದ ಈ ಆಹಾರದ ಅಭಾವ ತಪ್ಪಿಸಬೇಕಾದರೆ ಒಂದೊಂದು ಅಣೆಕಟ್ಟಿಗೆ ಕೋಟ್ಯಾಂತರ ರೂಪಾಯಿ ಹಾಕಿ—ಅದನ್ನೂ ಮಾಡಿ, ನಿಧಾನವಾಗಿ—ಖರ್ಚುಮಾಡುವುದಕ್ಕಿಂತಲೂ ಈ ಕೆರೆಕಟ್ಟೆ ಕಾಂಗಾರಿಗಳನ್ನು ಬಹಳ ಜಾಗ್ರತೆ ನಾಳೆಯಿಂದಲೇ ಎಷ್ಟು ಕೆರೆಗಳ ಕಾಂಗಾರಿ ಆಗಬೇಕು ಎಂಬುದನ್ನು ಸರ್ವೆ ಮಾಡಿ ವರ್ಷಕ್ಕೆ ಇಷ್ಟು ಕೆರೆಗಳಂತೆ ರಿಪೇರಿ ಮಾಡಬೇಕು. ಅನೇಕ ಕೆರೆಗಳು ಒಡೆದುಹೋಗಿವೆ, ರಿಪೇರಿ ಆಗಿಲ್ಲ, ತೂಬು ಸರಿಯಾಗಿಲ್ಲ, ಕೋಡಿ ಕಿತ್ತು

(ಶ್ರೀ ಎಚ್. ಕೆ. ಸಿದ್ದಯ್ಯ)

ಹೋಗಿದೆ. ಇಂತಹವುಗಳನ್ನೆಲ್ಲಾ ಸರಿಪಡಿಸಿ ರೈತರ ಅಚ್ಚುಕಟ್ಟನ್ನು ಸಲೀಸಾಗಿ ಮಾಡಿಕೊಳ್ಳುವುದಕ್ಕೆ ಹಣ ಖರ್ಚುಮಾಡಿದರೆ ಆಹಾರ ಪರಿಸ್ಥಿತಿ ಖಂಡಿತವಾಗಿಯೂ ಇರುವುದಿಲ್ಲ. ಅದನ್ನು ಮಾಡದೇ ಸುಮ್ಮನೆ ಆಹಾರ ಬೆಳೆಯಬೇಕು, ಆ ಯೋಜನೆ ಮಾಡಿದೆವು, ಈ ಯೋಜನೆ ಮಾಡಿದೆವು, ಎಂದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆ ರೀತಿ ಆಗಬಾರದು. ಒಂದು ಕಾರ್ಯವನ್ನು ಮಾಡಬೇಕೆಂಧರೆ ಕೊನೆಗಳಿಗೆವರೆಗೂ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡಬೇಕಾದ್ದು ಬಹಳ ಅಗತ್ಯ. ಆದ್ದರಿಂದ ಮಾನ್ಯ ಸರ್ಕಾರದವರು ಜಮೀನು ಕೊಡುವ ವಿಚಾರದಲ್ಲಿ, ಕೆರೆ, ಕಟ್ಟೆ, ಇರಿಗೇಷನ್ ವರ್ಕ್ಸ್, ಬಾವಿಗಳು ಇತ್ಯಾದಿಗಳಿಗೆ ಹೆಚ್ಚುಗಮನ ಕೊಟ್ಟು, ಹೆಚ್ಚು ಹಣವನ್ನು ಖರ್ಚುಮಾಡಬೇಕು. ಹಾಸನ ಡಿಸ್ಟ್ರಿಕ್ಟಿನಲ್ಲಿ ಎಷ್ಟೋ ಕೆರೆಗಳು ಇವೆ. ರೈತರು ಪ್ರತಿಯೊಂದು ಡಿವಿಜನ್ ಆಫೀಸಿನವರಿಗೂ ಆಯಾ ಕೆರೆ, ನಾಲೆ ರಿಪೇರಿ, ತೂಬಿನ ರಿಪೇರಿಗೆ ಅರ್ಜಿ ಕೊಟ್ಟು ಆ ಕೆಲಸ ಆಗದೆ ನಿರಾಶರಾಗುತ್ತಾ ಇದ್ದಾರೆ. ಕಂಟ್ರಾಕ್ಟರುಗಳು ಪ್ರತಿನಿತ್ಯ ದುಡ್ಡಿಗೆ ಸುತ್ತುತ್ತಾ ಇದ್ದಾರೆ. ಅವರಿಗೆ ಕೊಡಲು ದುಡ್ಡು ಇಲ್ಲ. ಒಂದು ಲಕ್ಷ ರೂಪಾಯಿ ಕೊಟ್ಟಕಡೆ 24 ಲಕ್ಷ ರೂಪಾಯಿ ಕೆಲಸ ಆಗಿದೆ. ಈ ರೀತಿಯಾಗಿರುವುದರಿಂದ ಸರ್ಕಾರದವರು ಕೂಡಲೆ ಗಮನಕೊಟ್ಟು ಕೆರೆ ಕಾಂಗಾರಿ ಮತ್ತು ನಾಲೆ ಕಾಂಗಾರಿಗಳಿಗೆ ಮತ್ತು ಆಹಾರ ಬೆಳೆಯುವ ಸಂಬಂಧದಲ್ಲಿ ಏನೇನು ಅನುಕೂಲಬೇಕೋ ಅದೆಲ್ಲವನ್ನೂ ಮಾಡಿಕೊಡಬೇಕು.

4-30 P.M.

ಹಾಸನದಲ್ಲಿ ಒಂದು ಬುಲ್‌ಡೋಜರ್ ಇತ್ತು. ಅದು ಒಂದು ವರ್ಷದಿಂದಲೂ ಕಾಣುತ್ತಿಲ್ಲ, ಎಲ್ಲಿ ಹೋಗಿದೆಯೋಗೊತ್ತಿಲ್ಲ. ಟ್ರಾಕ್ಟರುಗಳೂ ಕೂಡ ಸರಿಯಾಗಿ ದೊರೆಯುತ್ತಿಲ್ಲ. ಹೆಚ್ಚು ಆಹಾರ ಬೆಳೆಯಲು ಇವುಗಳು ಅತಿಮುಖ್ಯವಾಗಿ ಆವಶ್ಯಕವಾಗಿವೆ. ಅದಕ್ಕೆ ಸರ್ಕಾರ ತಕ್ಕ ವ್ಯವಸ್ಥೆ ಮಾಡಬೇಕು. ಕಾಡುಗಳಲ್ಲಿ ಮರಗಳನ್ನು ಸಂಹಾರ ಮಾಡುವುದನ್ನು ಸರ್ಕಾರ ಆದಷ್ಟು ಜಾಗ್ರತೆ ತಡೆಗಟ್ಟಿ ಸೋನೆಮಳೆ ಬರುವುದಕ್ಕೆ ಅವಕಾಶ ಮಾಡಬೇಕು. ದೇಶದಲ್ಲಿ ಮಳೆ ಸರಿಯಾಗಿ ಆಗದಿದ್ದರೆ ಬೆಳೆಯೆಲ್ಲಾ ಹೋಗುತ್ತದೆ. ಆದ್ದರಿಂದ ನಮ್ಮ ಪ್ರಯತ್ನ ಎಷ್ಟು ಮಾಡಬೇಕೋ ಅಷ್ಟನ್ನೂ ಮಾಡಿ ಸೌಕರ್ಯವನ್ನು ಒದಗಿಸಬೇಕಾದದ್ದು ಅಗತ್ಯ. ರೆವೆನ್ಯೂ ಸಚಿವರು ಜಮೀನು ಕೊಡುವ ವಿಚಾರದಲ್ಲಿ ಮುತುವರ್ಜಿವಹಿಸಿ ಸಾಕಷ್ಟು ಅನುಕೂಲಮಾಡಿ ಕೊಟ್ಟರೆ ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯಲು ಸಾಧ್ಯವಾಗುತ್ತದೆ. ಇಷ್ಟು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನಮಸ್ಕಾರಮಾಡಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

Sri F. W. CORBETT (Nominated).—Mr. Speaker, Sir, our food problem is very serious and longstanding, because it is the basic cause of all the trouble in the country. Today five lakhs of Government servants are threatening to strike,—bankmen, journalists, everywhere,—because they cannot cope with the rising prices. Our trouble started in 1942 when we lost Burma. For the last 15 years, we have been importing foodstuffs worth 100 crores to 200 crores every year. We could have grown all this food in our own country and put all this money into the pockets of our own people. India has got the soil, the climate, and the labour which can grow anything on this earth. It is a shame that we have to go to other countries begging for food! When the Asok Mehta Committee came here, I submitted a memorandum showing how we can grow the estimated 3 million tons deficit in the whole of India. I said we should produce food of every description—fruit, fish, vegetables, tea, coffee, milk, butter—everything that man can consume and that not an ounce should be exported. I suggested that this shortage of 3 million tons should be equally divided among the States in India and if for instance each State is asked to produce 3 lakhs of tons of foodgrains in excess of its normal production, the food problem will disappear. I feel it is possible to produce that much food in each State within the next year. The seemingly impossible is possible if we have got the strength and the courage to do it. It has been said that under the grow more food campaign, we have produced so much more food. I ask, where is that food? The normal increase in population has not consumed all that food. Our fair price shops are empty; our scarcity areas are in trouble. There is no food. Where is the food if we have produced so much extra? It will not do for us to borrow 10,000 tons from Andhra this year or 20,000 tons from somewhere else next year. We have plenty of land, we have plenty of water, we have plenty of manure and we have very good soil, hundreds of unemployed hands and hundreds of empty stomachs also. My suggestion is that we should grow our own food. I was very pleased to read about three weeks ago that the Federated Chambers of Commerce submitted a memorandum which practically coincided with the suggestions I made to the Asok Mehta Committee. I promptly sent a copy of my memorandum to Mr. Jain and I also sent a

copy to our Chief Minister and also the Revenue Minister and the Minister for Food. I suggest Sir, that we should tackle this problem and solve it once and for all. Within two years, we must be self-sufficient in food and after two years, we must be in a position to export food. We can produce enough food in this country, to feed not only human beings but also our goats, pigs and cattle. I suggest, Sir, I mean no disparagement to the Hon'ble Food Minister when I say that in addition to his multifarious responsibilities, it will be difficult for him to get this 3 lakhs of tons of food, which I suggest should be produced. I suggest that there should be a small working committee which will help the Ministry to produce more food and which will watch the activities district by district, taluk by taluk, and see that we will be self-sufficient, not in 1961 as Mr. Jain said, but in 1958. We can produce all the food that we need. We have manure, we have water and we have land and we have the idle hand. All we have got to do is to put them to work together. I hope, Sir, that this food discussion will not end with a mere debate in this House, but that we get down to work. It would be good that we appoint a committee, a strong committee, a working committee, which will watch the progress of work every fortnight in every nook and corner, all over the State and I am sure that by this time, by 1958 we can be self-sufficient in food.

Sri B. R. SUNTHANKAR (Belgaum).—Sir, the debate on the food situation is going on for a long time and a large number of members have participated. I wish to add a few general remarks.

I have listened very carefully to the speech of the Hon'ble Revenue Minister when he initiated this debate. He gave a survey of the food and famine situation in the State. But he did not deal with the basic problems of the food situation of the State. Nor did he outline the measures taken to prevent the deterioration of the food position taking place in the State. The attitude which is seen on the part of the Government to tackle the problem is one of complacency. I do not say that the attitude is one of callousness. I say it is an attitude of complecency and complacency in this matter is very harmful to the people of this State. Sir, the picture of the New Mysore State is painted very rosy. Sir, here is a publication of the Department of Agriculture of Mysore—the Mysore Agricultural Calendar 1956-57. It is said on page 1 of this publication,

> "Karnataka is self-sufficient in foodgrains. Against her requirements of 28·3 lakhs tons for an adult equivalent of 152 lakhs population (80 per cent of the total of 190 lakhs) at 1 lb. per head per day the territories now included in Mysore produced in 1953-54, 28·49 lakhs tons."

According to these figures, it is clear that the State ought to be surplus in regard to foodgrains. According to these figures, there is a surplus of about half a lakh of tons, *i.e.*, requirement is 28·3 lakhs of tons and production is 28·49 lakhs half a lakh of tons ought to be surplus in the State. Where has this surplus gone? Why should people be feeling scarcity? Where has the food gone? We will have to find out. Either the figures must be wrong or there is something basically wrong with the food and agricultural production in the State. That will have to be investigated. There is a feeling in certain quarters that the newly integrated areas are a burden on the State, and that they are a deficit area. It is not a fact. The statistics give a different story. I will quote again from the same article. On page 2 of the same publication elaborate figures are given. There is an increase of population in the State by 193 per cent. The population of old Mysore State was 98 lakhs and in the new State it has increased to 190 lakhs. The percentage of increase in acreage under total cereals is 302 per cent, while the increase of population is only 193 per cent. Similarly, there is an increase of 289 per cent the acreage under pulses. Let us see the figures for food production. Under the heading 'food production in thousand tons, there is

(SRI B. R. SUNTHANKAR)

an increase of 238 per cent. From this it will be seen that the newly integrated areas are not a burden on the State. It is clear that the food situation has not deteriorated on account of the newly integrated areas. If anybody would say or accuse the newly integrated areas, I will boldly say that it is simply a myth.

Coming to food production in general, this problem of food has been and is a permanent crisis in our nation. Year after year we have had to import lakhs of tons from overseas. Besides, it is becoming a vicious circle. There is an increase in population every year by 50 lakhs. The Prime Minister, during the time of the first five-year plan, had announced that the problem of food production would have to be tackled on a war footing. But unfortunately, it has not been done. No attempts were done in that direction. The second five-year plan lays more emphasis on industrialisation. Looking to the present condition of food production and food supply in our country, we cannot say that first five-year plan has solved the problem of food production satisfactorily. Agricultural production and industrialisation go hand-in-hand. They are linked with each other. So long as we are not self-sufficient in food and so long as agricultural production, particularly food production, is not stepped up to higher and higher levels industrialisation would not succeed in our country. All emphasis must be laid on increasing agricultural production, particularly food production. There are two aspects to this question: One is of agricultural and food production and the other is of distribution. In both these aspects, I regret to say, that our State has failed. Then, there are the technical sides. An Hon'ble Member who spoke a short while ago referred to the problem of land reforms. The slogan 'land to the tiller' is quite allright and must be followed. The tillers must own their lands. But mere talk of land reforms or repeating the slogan 'land to the tiller' would not do. That slogan will have to be augmented a step further. There is the technical side to this problem. Our agriculture is in a backward state. We will have to introduce improved methods of cultivation, improved implements, manures and fertilisers, better insecticides and soon Research work is also necessary. I must say that we fall far short in this respect. I do not know of any research to the credit of the Agricultural Department, which has vastly changed our agricultural production or methods. I am also not aware of any agricultural research work in India about which we can say that a single research work has revolutionised or helped to revolutionise our agriculture. Therefore, research work will have to be taken up seriously by the Agricultural Department.

About the grow-more-food campaign, I regret to say that it has almost become a farce. It has not given us good yield. Then there is the problem of land utilisation. There is a lot of land, which can be brought under cultivation. I will once again quote from the Booklet "Statistical outline of Mysore, 1957." On page 53, it is stated that there is cultivable waste land in the State to the extent of more than 15 lakhs acres or 3·44 per cent. About the current fallows, it is more than 19 lakhs of acres or 4·21 per cent. The other fallow lands amount to 13 lakhs or 3·69 per cent. All these taken together amount to about 12 per cent. These cultivable lands are lying waste and would have to be brought under cultivation. Taking the example of my district, i.e., Belgaum district, there is about 10 per cent land i.e., more than 3 lakh acres, which is lying waste and it can be brought under cultivation if the cultivators are given some financial aid. The main reason for the current fallow is the poverty of the cultivators. The problem of land utilisation is a great problem in our State. We must try to utilise every inch of land available to us.

About soil survey, I will make a suggestion. There has never been a soil survey conducted in our country. I will ask the Government to undertake a scheme of soil survey. In this respect, we can follow the example of the United Kingdom, where some years

ago, a soil survey was carried out, as a result of which, we find that during the last 30 years, U.K. which was completely depending on foreign countries for its food supply, has become almost self-sufficient in respect of food supply. So a scheme of soil survey should be immediately undertaken and an attempt should be made to see that every inch of land is utilised to the best interests of the State.

Then, about the fair-price shops. The rural areas are going without fair-price shops. There are a few such shops in the urban areas, but they fall short of the actual demand. The rural areas, particularly the villages, are finding it very difficult for want of sufficient number of fair-price shops. I would, therefore, request the Government to take up the question of distribution seriously and try to cope up with the situation.

*ಶ್ರೀ ಎಚ್. ಎ. ಕರಿಲಿಂಗಣ್ಣನವರು (ಗೋಕಾಕ್ I).—ಸ್ವಾಮಿ, ಆಹಾರ ಎಂಬುದು ಮುಖ್ಯವಾಗಿ ಜೀವನ ಪ್ರಶ್ನೆ. ಮೊದಲಿಂದ ಮೇಲೆ ಆಗಾಗ್ಗೆ ಕ್ಷಾಮ ಬರುತ್ತದೆ. ಈರೀತಿ ಕ್ಷಾಮ ಬಂದ ಕಾಲದಲ್ಲಿ ಜನತೆಯ ಕಷ್ಟ ಹೇಳತೀರಲಾರದಷ್ಟು ಜಟಿಲವಾದುದಾಗಿರುತ್ತದೆ. ಅದರ ಸಲುವಾಗಿ ಸರ್ಕಾರ ತೀವ್ರವಾಗಿ ನೀರಾವರಿ ಯೋಜನೆಯನ್ನು ಮಾಡಲೇಬೇಕಾಗುತ್ತದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳಬೇಕಾದರೆ, ಆಗಾಗ್ಗೆ ನಮ್ಮ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿಯೂ ಮೊದಲಿಂದ ಮೇಲೆ ಕ್ಷಾಮ ಬರುತ್ತಿರುತ್ತದೆ. ಅದು ನಿವಾರಣೆಯಾಗಬೇಕಾದರೆ, ಘಟಪ್ರಭಾ ಯೋಜನೆಯನ್ನು ತ್ವರಿತವಾಗಿ ಪೂರ್ತಿ ಮಾಡಿದರೆ ಈ ಐದು ತಾಲ್ಲೂಕುಗಳಲ್ಲಿಯೂ ಸುಮಾರು 35-55 ವರ್ಷಗಳಿಂದ ಬಂದಿರತಕ್ಕ ಬರಗಾಲದ ಪರಿಸ್ಥಿತಿ ಮತ್ತು ಕ್ಷಾಮ ಪರಿಸ್ಥಿತಿ ಎಷ್ಟೋ ಸಾವಿರಪಾಲು ನಿವಾರಣೆಯಾಗುತ್ತದೆ. ಆದ್ದರಿಂದ ಘಟಪ್ರಭಾ ಯೋಜನೆಯನ್ನು ತ್ವರಿತವಾಗಿ ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ಮಧ್ಯದಲ್ಲಿ ಒಂದು ಚಿಕ್ಕದಾದಂಥ ಅಣೆಕಟ್ಟು ಇದೆ. ಅದರ ಬಹು ಭಾಗವು ರೈತರಿಗೆ ಉಪಯೋಗವಾಗುತ್ತಾ ಇಲ್ಲ. ಈ ರೀತಿ ಹಣ ಪೋಲಾಗುತ್ತಿರುವುದನ್ನು ಬಂದ್ ಮಾಡಿ ರೈತರಿಗೆ ಅನುಕೂಲ ಕಲ್ಪಿಸಿ ಕೊಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ನನಗೆ ಇಷ್ಟು ಮಾತನ್ನು ಹೇಳಲು ಅವಕಾಶ ಕೊಟ್ಟದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

